₹ 5/-

ನೇಸರು

ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXX - 3 March 2012

ಭಾಷಾ ಭಾವೈಕ್ಯ ಸಮಾವೇಶ

The Mysore Association, Bombay
393, Bhaudaji Road, Matunga, Mumbai - 400 019.
Tel.: 2402 4647, 2403 7065 ● Fax : 2401 0574

ಭಾಷಾ ಭಾವೈಕ್ಯ ಸಮಾವೇಶ

ಪ್ರೇಮದಿಂದ ಭಾಷಾ ಭಾಂದವ್ಯ ವೃದ್ಧಿಯಾಗುತ್ತದೆ – ಡಾ. ಪಟ್ಟಣ ಶೆಟ್ಟಿ

ಮುಂಬಯಿ: ಪ್ರತಿಯೊಂದು ಭಾಷೆಯ ಮೇಲೆ ಪ್ರೀತಿ ಇರಬೇಕು. ಪ್ರೇಮದಿಂದ ಬೇರೆ ಬೇರೆ ಭಾಷೆಗಳನ್ನು ಕಲಿತಾಗ ನಿಜವಾಗಿ ಭಾಷಾ ಭಾಂದವ್ಯ ವೃದ್ಧಿಯಾಗುತ್ತದೆ. ಕನ್ನಡ ಹಾಗೂ ಮರಾಠಿ ಭಾಷೆಯ ನಡುವಿನ ಸಂಬಂಧ ಅನ್ಯೋನ್ಯವಾಗಿದೆ. ಬೇಂದ್ರೆಯವರ ಮನೆಮಾತು ಮರಾಠಿ. ಆದರೆ ಅವರು ಕನ್ನಡದ ಹೆಸರಾಂತ ಸಾಹಿತಿ. ಇಂತಹ ಮರಾಠಿ–ಕನ್ನಡ ಭಾಷಾ ಬಾಂದವ್ಯವನ್ನು ವೃದ್ಧಿಸಬಲ್ಲ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಅದು ಕೇವಲ ಸಾಹಿತ್ಯ, ಕಲೆ, ಸಂಗೀತದಲ್ಲಿ ಮಾತ್ರವಲ್ಲ ಸಾಂಸಾರಿಕವಾಗಿಯೂ ಮುಂದುವರಿದಿದೆ. ನಮ್ಮಲ್ಲಿ ಅನೇಕ ಮರಾಠಿ ಅಳಿಯಂದಿರು, ಸೊಸೆಯಂದಿರು ಇದ್ದಾರೆ. ಅವರ ಪ್ರೇಮವಿವಾಹವನ್ನು ಒಪ್ಪಿಕೊಳ್ಳಲು ನಾವು ಹಿಂದು–ಮುಂದು ನೋಡುತ್ತೇವೆ. ಹಾಗೆ ಮಾಡದೆ ಅವರನ್ನೂ ಪ್ರೀತಿಯಿಂದ ಸ್ವೀಕರಿಸಿದಾಗ ಭಾಷೆಯ ಬಂದುತ್ವ ಹೆಚ್ಚುತ್ತದೆ ಎಂದು ಕವಿ, ನಾಟಕಕಾರ ಡಾ ಸಿದ್ಧಲಿಂಗ ಪಟ್ಟಣಶೆಟ್ಟಿ ಅವರು ತಮ್ಮ ಅಭಿಪ್ರಾಯವನ್ನು ಸಭಿಕರೆದುರು ತೆರೆದಿಟ್ಟರು. ಡಾ.ಪಟ್ಟಣಶೆಟ್ಟಿ ಅವರು ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಹಾಗೂ ಮೈಸೂರು ಅಸೋಸಿಯೇಶನ್,ಮುಂಬೈ, ಇವರ ಜಂಟಿ ಆಶ್ರಯದಲ್ಲಿ , ಮುಂಬಯಿ ವಿಶ್ವವಿದ್ಯಾಲಯ, ಕನ್ನಡ ವಿಭಾಗ ಇದರ ಸಹಯೋಗದೊಂದಿಗೆ ದಿನಾಂಕ 20ರಂದು ನಡೆದ "ಭಾಷಾ ಬಾವೈಕ್ಯ ಸಮಾವೇಶ" ದ "ಕನ್ನಡ, ಮರಾಠಿ–ಭಾಷೆ ಮತ್ತು ಸಂಸ್ಕೃತಿ ಅನುಸಂದಾನ" ಎಂಬ ವಿಚಾರಗೋಷ್ಠಿಯ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರು.

ವಿಚಾರಗೋಷ್ಠಿಯಲ್ಲಿ ಖ್ಯಾತ ಕಾದಂಬರಿ ಗಾರರಾದ ಶ್ರೀ ವಿಷ್ಣು ನಾಯ್ಕ್ ಅವರು ತನ್ನ ವಿಚಾರ ಮಂಡಿಸುತ್ತಾ ಭಾಷೆ ಎನ್ನುವುದು ಪ್ರಜಾಪ್ರಭುತ್ವದ ಒಂದು ಭಾಗ. ಯಾವುದೇ ಒಂದು ಭಾಷೆಯ ಜಗಳಕ್ಕೆ ಮತ್ತು ಅತಿಯಾದ ಭ್ರಮೆಗೆ ನಮ್ಮನ್ನು ಒಳಪಡಿಸುತ್ತವೆ. ಪ್ರಪಂಚದಲ್ಲಿ ಭಾಷೆ

ಎನ್ನುವುದಕ್ಕೆ ಗಡಿ ಹಾಕಲು ಸಾಧವಿಲ್ಲ. ಕನ್ನಡ ಮತ್ತು ಮಾರಾಠಿಯ ಶಬ್ದಗಳಲ್ಲಿ ಸಾಮ್ಯವಿದೆ ಎಂದು ಹಲವಾರು ಪದಗಳ ನಿದರ್ಶನವನ್ನು ನೀಡಿದರು.

ರಾಷ್ಟ್ರಪ್ರಶಸ್ತಿ ವಿಜೇತ ಚಲನಚಿತ್ರ ನಿರ್ದೇಶಕರಾದ ಬಿ. ಸುರೇಶ್ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ವೃತ್ತಿ ರಂಗಭೂಮಿಯಲ್ಲಿ ಎರಡು ವಿಧಾನಗಳಿವೆ. ಒಂದು ಕನ್ನಡ ರಂಗಭೂಮಿ ಇನ್ನೊಂದು ಮರಾಠಿ ರಂಗಭೂಮಿ. ಸಿಮಿಮಾದಲ್ಲಿ ಕನ್ನಡ ಮತ್ತು ಮರಾಠಿ ಭಾಂದವ್ಯ ವಿಶಿಷ್ಟವಾದುದು. ಮೊದಲು ಕನ್ನಡ ಚಲನಚಿತ್ರಗಳು ಹೆಚ್ಚಾಗಿ ಕೊಲ್ಲಾಪುರದಲ್ಲಿ ಚಿತ್ರೀಕರಣಗೊಳುತ್ತಿದ್ದವು.ಬಹುತೇಕ ಚಲನಚಿತ್ರ ತಯಾರಾಗುತ್ತಿದ್ದದ್ದು ತಮಿಳುನಾಡು ಮತ್ತು ಕೊಲ್ಲಾಪುರದಲ್ಲಿ. ಅಲ್ಲದೆ ಮರಾಠಿ–ಕನ್ನಡ ಸಂಬಂಧ ಎನ್ನುವುದು ನಟ ಹಾಗೂ ನಟನೆಯ ಮೂಲಕವೂ ಪ್ರಮುಖವಾಗಿದೆ. ಹವ್ಯಾಸಿ ರಂಗಭೂಮಿಯಲ್ಲಿ ಮರಾಠಿಯಿಂದ ಕನ್ನಡಕ್ಕೆ ದೊರೆತ ಲಾಭ ಬಹಳ ಗುರುತರವಾದದ್ದು ಎಂದು ಕನ್ನಡ–ಮರಾಠಿ ಭಾಷಾ ಭಾಂದವ್ಯವನು ಸಿನೆಮಾ ಮತ್ತು ರಂಗಭೂಮಿಯ ಉದಾಹರಣೆಗಳ ಮೂಲಕ ಕಟ್ಟಿಕೊಟ್ಟರು.

"ಹಿಂದಣ ಹೆಜ್ಜೆಯ ನೋಡಲರಿಯದೆ, ಮುಂದಣ ಹೆಜ್ಜೆ ಇಡಲಾರದು" ಎಂದು ಅಲ್ಲಮಪ್ರಭು ನುಡಿದಿದ್ದ. ಮಹಾರಾಷ್ಟ್ರದಲ್ಲಿ 8 ಶಿಲಾಹಾರ ಮನೆತನಗಳು ಕನ್ನಡವನ್ನು ಕಟ್ಟಿ ಬೆಳೆಸಿದ್ದಾರೆ. ಮಹಾರಾಷ್ಟ್ರದಲ್ಲಿ ದೊರೆತ ಶಾಸನಗಳಲ್ಲಿ ಸಿಂಹಪಾಲು ಕನ್ನಡದ್ದು. ಭಾಷಾವಾರು ಪ್ರಾಂತ್ಯಗಳ ವಿಂಗಡಣೆಯಿಂದಾಗಿ ಕನ್ನಡ ಮರಾಠಿ ರಾಜ್ಯಗಳ ರಚನೆ ಬೇರೆಯಾಗಿದೆ. ಆದರೆ ಈ ಎರಡೂ ಭಾಷೆಗಳಲ್ಲಿ ಬಹಳಷ್ಟು ಸಾಮ್ಯ ಕಂಡು ಬರುತ್ತದೆ ಎಂದು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್.ಉಪಾಧ್ಯ ಅವರು ನುಡಿದರು. ಅವರು ಮುಂದುವರಿಸುತ್ತಾ ಮರಾಠಿ ಭಾಷೆಯ ವ್ಯಾಕರಣದಲ್ಲಿರುವ ಕೆಲವು ಗೊಂದಲಗಳನ್ನು ಸಭಿಕರ ಮುಂದಿರಿಸಿದ ಡಾ.ಜಿ.ಎನ್ ಉಪಾಧ್ಯ ಅವರು ಈ ಎಲ್ಲ ಗೊಂದಲಗಳ ನಡುವೆಯೂ ಕನ್ನಡ ಹಾಗೂ ಮರಾಠಿಯ ಸಂಬಂಧ ಅನನ್ಯವಾದುದು ಎಂದು ಐತಿಹಾಸಿಕವಾಗಿ ಕನ್ನಡ–ಮರಾಠಿ ಭಾಷಾ ಭಾಂದವ್ಯವನ್ನು ವಿಮರ್ಶಿಸಿದರು.

ಸಂಗೀತ ಪ್ರಯೋಗಶೀಲ ನಾಟಕಗಳ ಆದಾನ–ಪ್ರದಾನ ಮಾರಾಠಿ–ಕನ್ನಡ ಭಾಷೆಯಲ್ಲಿ ಮೊದಲಿನಿಂದಲೂ ನಡೆದು ಬಂದಿದೆ. ರಂಗ ಸಾಧ್ಯತೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕಡಿಮೆ ನಾಟಕಗಳು ರಂಗಕ್ಕೆ ಬರುತ್ತಿವೆ ಎಂದು ನಾಟಕಕಾರ, ನಿರ್ದೇಶಕ ಡಾ. ಭರತ್ ಕುಮಾರ್ ಪೊಲಿಪು ಅವರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಅಲ್ಲದೆ ಕನ್ನಡಕ್ಕೆ ಮರಾಠಿಯಿಂದ ಅನುವಾದಗೊಂಡ

ನಾಟಕಗಳ ಕುರಿತು, ಅನುವಾದಕರ ಬಗ್ಗೆ ವಿಮರ್ಶಾತ್ಮಕವಾದ ವಿಚಾರವನ್ನು ಮಂಡಿಸಿದರು. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಸನ್ಮಾನ್ಯ ಡಾ. ಮುಖ್ಯಮಂತ್ರಿ ಚಂದ್ರು ಅವರು ವಿಚಾರಮಂಡನೆ ಮಾಡಿದ ವಿದ್ವಾಂಸರಿಗೆ ಪುಷ್ಪಗುಚ್ಛ ನೀಡಿ ಗೌರವಿಸಿದರು. ನಾಟಕಕಾರ ಡಾ. ಮಂಜುನಾಥ್ ಅವರು ಆಶಯನುಡಿಯನ್ನು ನುಡಿದು ಕನ್ನಡ ಮರಾಠಿ ಭಾಷಾ ಭಾಂದವ್ಯ ಮುಂದುವರಿಯಲಿ ಎಂದು ಹಾರೈಸಿದರು. ಕನ್ನಡ ವಿಭಾಗದ ಸಂಶೋಧನಾ ಸಹಾಯಕರಾದ ಶ್ರೀಮತಿ ಪೂರ್ಣಿಮಾ ಎಸ್ ಶೆಟ್ಟಿಯವರು ಕಾರ್ಯಕ್ರಮ ನಿರೂಪಿಸಿದರು. ಸಂಘಟಕ ಕೆ. ಮಂಜುನಾಥಯ್ಯ ಅವರು ಧನ್ಯವಾದ ಸಮರ್ಪಿಸಿದರು.

ವಿಚಾರಗೋಷ್ಠಿಯ ಮೊದಲು ಖ್ಯಾತ ತತ್ವಪದ ಗಾಯಕರಾದ ರಾಮಚಂದ್ರ ಹಡಪದ್ ಹಾಗೂ ಮುಂಬಯಿಯ ಖ್ಯಾತ ಗಾಯಕರಾದ ಡಾ. ಅನುಪಮ ಮಂಗಳವೇಡೆ ಅವರಿಂದ ಗೀತ ಸಂಗೀತ ಕಾರ್ಯಕ್ರಮ ನಡೆಯಿತು.

ಇದೇ ಸಂದರ್ಭದಲ್ಲಿ ಖ್ಯಾತಕವಿ ಜಯಂತ ಕಾಯ್ಕಿಣಿಯವರ ಅಧ್ಯಕ್ಷತೆಯಲ್ಲಿ ಕವಿ ಗೋಷ್ಠಿಯನ್ನು ನಡೆಸಲಾಯಿತು. ಶ್ರೀನಿವಾಸ ಜೋಕಟ್ಟೆ, ಗೋಪಾಲ ತ್ರಾಸಿ, ಸಾ. ದಯಾ, ಜಿ. ಪಿ. ಕುಸುಮಾ, ದಾಕ್ಷಾಯಣಿ ಯಡಹಳ್ಳಿ, ಸೌಕೂರು, ದೇವಾನಂದ, ಗಿರಿಜಾ ಶಾಸ್ತ್ರಿ, ಚಂದ್ರಶೇಖರ ರಾವ್, ವಿ. ಎಸ್. ಶ್ಯಾನುಭಾಗ್ ಮತ್ತು ಮರಿಯಪ್ಪ ನಾಟೇಕರ್ ಇವರುಗಳು ಭಾಗವಹಿಸಿದ್ದರು.

ಭಾಷೆಗಳ ಹೆಸರಿನಲ್ಲಿ ಕಲಹ ಹೋರಾಟ ಹೊಡೆದಾಟ ಇವುಗಳೇ ಹೆಚ್ಚು. ಇಂತಹುದರಲ್ಲಿ "ಭಾಷಾ ಭಾವೈಕ್ಯ ಸಮಾವೇಶ" ಎಂಬ ಕಾರ್ಯಕ್ರಮವನ್ನು ನಡೆಸಲಾಯಿತು. ಫೆಬ್ರವರಿ 19 ಮತ್ತು 20 ರಂದು 'ಕನ್ನಡ ಅಭಿವೃದ್ಧಿ ಪ್ರಾಧಿಕಾರ", "ಮೈಸೂರು ಅಸೋಸಿಯೇಶನ್" ಹಾಗೂ "ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ" ಈ ಮೂರೂ ಸಂಸ್ಥೆಗಳ ಭಾವೈಕ್ಯದಿಂದ.

ಫೆಬ್ರವರಿ 19, ರವಿವಾರದಂದು 4.30ಕ್ಕೆ ಸರಿಯಾಗಿ ಅಸೋಸಿಯೇಶನ್ನಿನಿಂದ "ಕನ್ನಡ ಭುವನೇಶ್ವರಿ", "ಪಾಂಡುರಂಗ ವಿಠ್ಠಲ" ನ್ನು ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು. ಅಂದಿನ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾವಿದರು, ಅಂದಿನ ಮುಖ್ಯ ಅತಿಥಿಗಳು, ಹಾಗೂ ಮೂರೂ ಸಂಸ್ಥೆಗಳ ಸದಸ್ಯರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಮಾತುಂಗಾದ ಆಸ್ತಿಕ ಸಮಾಜ ಹಾಗೂ ಶಂಕರ ಮಠದ ಮಾರ್ಗದಲ್ಲಿ ಕನ್ನಡ ತಾಯಿಯನ್ನು ಹಾಗೂ ಪಾಂಡುರಂಗ ವಿಠ್ಠಲನನ್ನು ವಾದ್ಯ ವೃಂದಗಳು, ನಗಾರಿ ತಮಟೆಗಳು, ನರ್ತನ ಜಯ ಘೋಷಣೆಗಳೊಂದಿಗೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ನಂತರ ಸಭಾಗೃಹದಲ್ಲಿ ಕಾರ್ಯಕ್ರಮವು ಆರಂಭವಾಯಿತು. ಮೊದಲಿಗೆ ಅಸೋಸಿಯೇಶನ್ನಿನ ಕಾರ್ಯದರ್ಶಿಗಳಾದ ಶ್ರೀ.ವೈ.ಡಿ.ವೆಂಕಟೇಶ್ ಮತ್ತು ವಿಶ್ವವಿದ್ಯಾಲಯದಿಂದ ಪ್ರೊ. ರಘುನಾಥ ಅವರು ಅಂದಿನ ಕಾರ್ಯಕ್ರಮದ ಉದ್ಘಾಟನಕಾರರಾದ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮುಖ್ಯಮಂತ್ರಿ ಶ್ರೀ ಚಂದ್ರು, ಅಂದಿನ ಮುಖ್ಯ ಅತಿಥಿಗಳು ಹಾಗೂ ಖ್ಯಾತ ಕವಿಗಳೂ ಆದ ಶ್ರೀ ಜಯಂತ ಕಾಯ್ಕಿಣಿ, ಕಾರ್ಯಕ್ರಮದ ಸಂಚಾಲಕ ಹಾಗೂ ಚಲನಚಿತ್ರ ನಿರ್ದೇಶಕ ಬಿ.ಸುರೇಶ್, ಖ್ಯಾತ ಕವಿ ಹಾಗು ಪ್ರಾಧಿಕಾರದ ಸದಸ್ಯ ಶ್ರೀ. ವಿಷ್ಣು ನಾಯ್ಕ ಮತ್ತು ಸಿದ್ದಲಿಂಗಪಟ್ಟಣ ಶೆಟ್ಟಿ ಇವರನ್ನು ವೇದಿಕೆಗೆ ಬರಮಾಡಿಕೊಂಡರು.

ನಂತರ ವಾಡಿಕೆಯಂತೆ ಶ್ರೀ. ಪದ್ಮನಾಭ ಅವರಿಂದ ಪ್ರಾರ್ಥನಾಗೀತೆ ಆಯಿತು. ಪ್ರಾರ್ಥನಾ ಗೀತೆಯ ನಂತರ ಅಸೋಸಿಯೇಶನ ಕಾರ್ಯದರ್ಶಿಗಳಾದ ಶ್ರೀ. ವೈ.ಡಿ.ವೆಂಕಟೇಶ್ ಅವರ ಮುಖ್ಯ ಅತಿಥಿಗಳನ್ನು ಹಾಗೂ ಸಭಾಸದರನ್ನು ಮೂರು ಸಂಸ್ಥೆಗಳ ಪರವಾಗಿ ಸ್ವಾಗತಿಸಿ ಅತಿಥಿಗಳಿಗೆ ಪುಷ್ಪ ಗುಚ್ಛಗಳನ್ನು ನೀಡಿ ಗೌರವಿಸಿದರು. ಶ್ರೀ. ಸುರೇಶ್ ರವರು ಪ್ರಾಸ್ತಾವಿಕವಾಗಿ ಮಾತನಾಡಿ "ಕನ್ನಡ ಅಭಿವೃದ್ಧಿಯೇ ಕನ್ನಡಿಗರ ಅಭಿವೃದ್ಧಿ" ಎಂದು ಹೇಳಿದರು.

ನಂತರ ಅಂದಿನ ಮುಖ್ಯ ಅತಿಥಿಗಳಾದ ಶ್ರೀ. ಜಯಂತ್ ಕಾಯ್ಕಿಣಿ ಅವರು ಮಾತನಾಡಿ ಕನ್ನಡ ಎಂದರೆ ಒಂದು ಮನೋಧರ್ಮ ಎಂದರು. ಕನ್ನಡದ ಶಕ್ತಿಯ ಬಗ್ಗೆ ಭಾಷೆಯನ್ನು ನಂಬಿ ಬದುಕುವ ಬಗೆ, ಕನ್ನಡದಲ್ಲಿ ಮರಾಠಿಯ ಶೈಲಿಯ ಬಗೆ ಮಾತನಾಡಿ ಭಾಷಾ ಭಾವೈಕ್ಯವನ್ನು ಸಾಧಿಸಿಕೊಂಡು ಹೋಗುತ್ತಿರುವ ನಗರ ಮುಂಬೈ ಎಂದು ಹೇಳಿದರು. ಎಲ್ಲ ಅತಿಥಿಗಳು ನಮ್ಮ ಮೈಸೂರು ಅಸೋಸಿಯೇಶನ್ನಿನ ಬಗ್ಗೆ ಬಹಳ ಅಭಿಮಾನ ವ್ಯಕ್ತ ಪಡಿಸಿದರು.

ಮುಖ್ಯಮಂತ್ರಿ ಚಂದ್ರು ಅವರು ಜ್ಯೋತಿಯನ್ನು ಬೆಳಗಿಸಿ ಸಮಾವೇಶದ ಉದ್ಘಾಟನೆಯನ್ನು ಮಾಡಿದರು. ಅವರ ಉದ್ಘಾಟನಾ ಭಾಷಣವನ್ನು ಮಾಡುತ್ತಾ, ಸಾಧ್ಯವಿದ್ದ ಕಡೆಗಳಲ್ಲೆಲ್ಲಾ ನಮ್ಮ ಭಾಷೆಗೆ ಆದ್ಯತೆ ಕೊಟ್ಟು ಭಾಷಾ ಭಾವನೆಯನ್ನು ಬೆಳೆಸಬೇಕು ಎಂದರು. ಕರ್ನಾಟಕ ಹಾಗೂ ಮಹಾರಾಷ್ಟ್ರದ ಭಾಷಾ, ಗೊಂದಲಗಳು, ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ರಮಾ ವಸಂತ್ ರವರು ಮಾಡಿದರು. ಪ್ರೊ. ರಘುನಾಥ್ ಅವರು ಮೂರು ಸಂಸ್ಥೆಗಳ ಪರವಾಗಿ ವಂದನಾರ್ಪಣೆಯನ್ನು ಮಾಡಿದರು. ವೇದಿಕೆಯ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮವು ಶ್ರೀ ನಾಗರಾಜ ಮೂರ್ತಿಯವರ ನೇತೃತ್ವದಲ್ಲಿ ನಡೆಯಿತು. ಇದರಲ್ಲಿ ಕಂಸಾಳೇ ಗೀತೆಗಳು, ಜಾನಪದ ನೃತ್ಯ, ಹಾಗೂ "ಶಿವರಾತ್ರಿ" ಎಂಬ ಕನ್ನಡ ನಾಟಕ ನಡೆಯಿತು.

ವರದಿ : **ಪೂರ್ಣಿಮಾ ಮತ್ತು ರಮಾ**

ನೇಸರು

ತಿಂಗಳೋಲೆ

ಸಂಪುಟ 30 | ಮಾರ್ಚ್ 2012 | ಸಂಚಿಕೆ 3

ಗೌ. ಸಂಪಾದಕರು :

ಡಾ. ಗಿರಿಜಾ ಶಾಸ್ತ್ರಿ

❖ ❖❖

ಸಂಪಾದಕ ಮಂಡಳಿ:

ಡಾ. ಮಂಜುನಾಥ್

ಕೆ. ಮಂಜುನಾಥಯ್ಯ

ನಾರಾಯಣ ನವಿಲೇಕರ್

ಗಣಪತಿ ಶಂಕರಲಿಂಗ

ನೀಲಕಂಠ ಮೇಡರ್

❖ ❖❖

ಬೆಂಗಳೂರು ಪ್ರತಿನಿಧಿ :

ಎಂ.ಎ.ಎಸ್. ಪ್ರಸಾದ್

❖ ❖❖

ಮುದ್ರಣ :

ಆರತಿ ಆರ್ಟ್ ಪ್ರಿಂಟರ್ಸ್

ಫೋರ್ಟ್,

ಮುಂಬಯಿ-400 001.

❖ ❖❖

ಸಂಪರ್ಕ ವಿಳಾಸ :

ನೇಸರು

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Fax : 2401 0574

Email :

mysoreassociation.mumbai@gmail.com

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in any-way responsible for the same.

- Ed.

ಇದು ಬರಿ ಉಸಿರಲ್ಲೋ ಅಣ್ಣಾ..

ಒಂದು ಸುಂದರವಾದ 'ಮುಂಬೆಳಗು'. ಹೀಗೆಯೇ ಯುಟ್ಯೂಬಿನಲ್ಲಿ ಪರ್ವೀನ್ ಸುಲ್ತಾನಳ "ಭವಾನಿ ದಯಾನಿ" ಬಂಧಿಶ್‌ನ್ನು ಕೇಳುತ್ತಿದ್ದೆ. ಭೈರವಿ ರಾಗ ನನ್ನ ಧೀರ್ಘ ಉಸಿರಿನ ಜೊತೆ ಲಯಬದ್ಧವಾಗಿ ಚಲಿಸುತ್ತಿತ್ತು. ಹಾಡು ಉಸಿರು ಸಂಯೋಗಗೊಂಡ ಒಂದು ಮಧುರವಾದ ಕ್ಷಣ. ಹಾಗೆ ನೋಡಿದರೆ ಹಾಡಿಲ್ಲದೆ ಉಸಿರಿಲ್ಲ ಉಸಿರಿಲ್ಲದೆ ಹಾಡಿಲ್ಲ. ಯಾಕೆಂದರೆ ಉಸಿರಿನ ಚಲನೆ ಕೂಡ ಹಾಡಿನಂತೆಯೇ ಲಯಬದ್ಧವಾದುದು. ಹೀಗೆ 'ಭವಾನಿ' ಉದ್ಬುದ್ಧಶುದ್ಧಳಾಗಿ ನನ್ನ ಧಮನಿಗಳಲ್ಲಿ ಹರಿಯುತ್ತಿದ್ದಳು. ಬಾಲ್ಕನಿಯ ಮೂಲಕ ಗಿಡಗಂಟಿಗಳು ನನಗೆ ಉಸಿರನ್ನು ಒದಗಿಸುತ್ತಿದ್ದವು. ಹಾಡಿಗೆ ಅವೂ ತೊನೆಯುತ್ತಿದ್ದವು. ಧೀರ್ಘವಾದ ಉಸಿರು ನನ್ನೊಳಹೊರಗೆ ನಿರಂತರವಾಗಿ, ನಿರಾತಂಕವಾಗಿ ಚಲಿಸುತ್ತಿತ್ತು.

ಹೀಗೆ ಒಳ ಹೊರಗೆ ಚಲಿಸುತ್ತಿರುವ ಈ ಉಸಿರನ್ನು ವೈಜ್ಞಾನಿಕವಾಗಿ ಕೇವಲ 'ಶ್ವಾಸೋಚ್ಛ್ವಾಸ'ವೆಂದು ಮಾತ್ರ ಯಾಂತ್ರಿಕವಾಗಿ ನಾಮಕರಣ ಮಾಡಿಬಿಟ್ಟರೆ ಸಾಕೆ? ಆಶ್ಚರ್ಯವೆಂದರೆ ನಿರಂತರವಾಗಿ ನಮ್ಮೊಳ ಹೊರಗೆ ಚಲಿಸುತ್ತಿರುವ ಈ ಉಸಿರು/ಗಾಳಿ ಈ ಭೂಮಿಯ ಮೇಲಿನ ಎಲ್ಲ ಜೀವಜಾಲದ ಹೊರಗಿದೆ. ಮೊದಲೇ ಹೇಳಿದಂತೆ ಇದರ ಚಲನೆಯೆನ್ನುವುದು ಒಂದು ಲಯವನ್ನು ಅನುಸರಿಸಿದೆ. ನಮ್ಮದೆಂದು ಭಾಸವಾಗುವ ಈ ಉಸಿರು ನಮ್ಮ ಭಾಗವಲ್ಲ, ಅದು ನಮ್ಮೊಳಗೂ ಇಲ್ಲ. ಬದಲಾಗಿ ನಾವು ಅದರೊಳಗೆ ಇದ್ದೇವೆ. ಮೇಲುನೋಟಕ್ಕೆ ಪರಸ್ಪರ ವಿರುದ್ಧವೆಂದು ಕಾಣಬಹುದಾದ ಈ ಉಚ್ಛ್ವಾಸ ನಿಶ್ವಾಸಗಳೆಂಬ ಕ್ರಿಯೆಗಳ ಮೂಲಕವೇ ಜೀವಕಾಮ ಪೂರ್ಣಗೊಳ್ಳುತ್ತದೆ. ಇವು ವಿರುದ್ಧ ಕ್ರಿಯೆಗಳಲ್ಲ. ಒಂದೊಕ್ಕೊಂದು ಪೂರಕವಾಗಿ ವಿರುದ್ಧನೆಲೆಯಿಂದ ಕಾರ್ಯವೆಸಗುತ್ತಲೇ ಒಂದು ಇನ್ನೊಂದರ ಅಸ್ತಿತ್ವಕ್ಕೆ ಕಾರಣವಾಗಿದೆ, ಹಾಗೂ ಒಂದು ಇನ್ನೊಂದನ್ನು ಜೀವಂತ ವಾಗಿರಿಸಿದೆ. ಒಂದನ್ನು (ಉಚ್ಛ್ವಾಸ ನಿಶ್ವಾಸ ಗಳಲ್ಲಿ) ತಡೆಹಿಡಿದಾಕ್ಷಣ ಮತ್ತೊಂದು ಚಲಿಸುವುದಿಲ್ಲ. ಮೊದಲ ಉಸಿರು ಈ ದೇಹದೊಳಗೆ ಪ್ರವೇಶ ಮಾಡುವುದರ ಮೂಲಕ ಈ ಭೂಮಿಯ ಮೇಲೆ ಜೀವನ ಪ್ರಾರಂಭವಾಗುತ್ತದೆ. ಅದೇ ಉಸಿರು ಕೊನೆಯ ಬಾರಿಗೆ ಈ ದೇಹವನ್ನು ಒದ್ದು ಹೊರ ಹಾರುವುದರೊಂದಿಗೆ ಬದುಕಿನ ಸಮಾಪ್ತಿಯಾಗುತ್ತದೆ. ಮೊದಲ ಉಚ್ಛ್ವಾಸ ಮತ್ತು ಕಡೆಯ ನಿಶ್ವಾಸದ ನಡುವೆ ನಮ್ಮ ಬದುಕಿದೆ. ಒಳಗೆ ಬರುವ ಉಸಿರು ಕರ್ಷಣವನ್ನು (tension) ಉಂಟುಮಾಡುತ್ತದೆ. ದೇಹ ಬಿಗಿಯಾಗುತ್ತದೆ. ನಿಶ್ವಾಸ ಬಿಡುಗಡೆಯನ್ನು ತರುತ್ತದೆ (relaxation), ದೇಹ ಸಡಿಲಗೊಳ್ಳುತ್ತದೆ. ಬದುಕೆಂದರೆ ಜವಾಬ್ದಾರಿ, ಅನೇಕ ಆಕರ್ಷಣ ವಿಕರ್ಷಣಗಳ ಕರ್ಷಣ. ಸಾವೆಂದರೆ ಈ ಕರ್ಷಣಗಳಿಂದ ಬಿಡುಗಡೆ. ಒಳ ಬರುವ ಉಸಿರು ಆಮ್ಲಜನಕವನ್ನು ಹೊತ್ತು ತರುತ್ತದೆ. ಕೆಂಪು ರಕ್ತಕಣಗಳೊಂದಿಗೆ ಸೇರಿ ಶಕ್ತಿ ಧಾತುವಾಗುತ್ತದೆ. ಒಳಗಿನ ಅಗ್ನಿಷ್ಟಿಕೆಯನ್ನು ಹಚ್ಚುತ್ತದೆ. ಈ ಉರಿಯಿಂದೆದ್ದ ಧೂಮ ಇಂಗಾಲಾಮ್ಲವಾಗಿ ಹೊರ ಹೋಗುತ್ತದೆ. ದೇಹ ಹಗುರ ಗೊಳ್ಳುತ್ತದೆ. ಒಳಗೆ ಧಾವಿಸುವ ಉಸಿರಿಗೆ ಸದಾ ಪತರಗುಟ್ಟುವ ಕ್ರಿಯಾಶೀಲತೆ, ಉದ್ಬುದ್ಧ ಚಟುವಟಿಕೆ. ಹೊರಹೋಗುವ ಉಸಿರಿಗೆ ಈ ಎಲ್ಲ ಚಟುವಟಿಕೆಗಳಿಂದ, ಕರ್ಷಣದಿಂದ ಬಿಡುಗಡೆ. ನಮ್ಮ ದೈನಂದಿನ ಉಸಿರಾಟದ ಈ ಕ್ರಮವೇ ಇಡೀ ನಮ್ಮ ಬದುಕಿನ ಪ್ರಾರಂಭ ಮುಕ್ತಾಯಗಳ ಪ್ರತೀಕವಾಗಿದೆ. ಇದರ ಕೈಯೊಳಗಿರುವ ನಮ್ಮ ಸಾವು ಬದುಕುಗಳೂ ಪರಸ್ಪರ ವಿರುದ್ಧವಲ್ಲ, ಬದಲಾಗಿ ಪರಸ್ಪರ ಪೂರಕ. ಸಾವು ಇಲ್ಲದಿದ್ದರೆ ಹೊಸ ಹುಟ್ಟು ಇಲ್ಲ. ಹುಟ್ಟಿಲ್ಲದಿದ್ದರೆ ಸಾವಿಲ್ಲ. ಈ ಹುಟ್ಟು ಸಾವುಗಳು ಆರಂಭ ಅಂತ್ಯಗಳಂತೆ ಕಂಡರೂ ಅವು ಒಂದು ಇನ್ನೊಂದರ ಆರಂಭವೂ ಹೌದು ಅಂತ್ಯವೂ ಹೌದು. ಇದರ ಮೂಲ ಮಂತ್ರ ನಿರಂತರ ಬದಲಾವಣೆಗೆ ಪಕ್ಕಾಗುತ್ತಿರುವುದು. ಇಂಗ್ಲಿಷಿನಲ್ಲಿ Nothing is permanent except change ಎನ್ನುವ ಮಾತೊಂದಿದೆ. ಈ ಬದಲಾವಣೆಯೇ ನಿಶ್ಚಿತವಾದುದು ಹಾಗೂ ಶಾಶ್ವತವಾದುದು. ಇದನ್ನು ಚಲಾವಣೆಗೆ ತರುವುದು ನಮ್ಮ ಉಸಿರೇ.

ನಮ್ಮನ್ನು ಈ ಬ್ರಹ್ಮಾಂಡದ ಎಲ್ಲಾ ಜೀವ ಜಾಲದ ಜೊತೆಗೆ ಬೆಸೆಯುವ ಕೊಂಡಿಯೆಂದರೆ ಇದೊಂದೇ. ಮಾತ್ರವಲ್ಲ 'ಅಣು'ವನ್ನು 'ಮಹತ್ತಿ'ನೊಂದಿಗೆ, 'ಪರ'ವನ್ನು 'ಇಹ'ದೊಂದಿಗೆ ಕೂಡಿಸುವ ಸಾಧನವೂ ಇದೇ. ಕಣ್ಣಿಗೆ ಅಗೋಚರವಾದ ಇದು ಅನುಭವಕ್ಕೆ ಮಾತ್ರ ದಕ್ಕುವಂತಹುದು.

ನಮ್ಮ ದೈನಂದಿನ ಮಾತುಗಳಲ್ಲಿಯೂ ಇದು ರೂಪಕವಾಗಿ ಬೆರೆತು ಹೋಗಿದೆ. 'ಇಲ್ಲಿ ನನಗೆ ಉಸಿರು ಕಟ್ಟುತ್ತಿದೆ' 'ನಿರಾಳವಾಗಿ ಉಸಿರು ಬಿಟ್ಟೆ' ಮತ್ತು 'ಉಸಿರು ಹೊಯ್ದುಕೊ' ಎಂಬಂತಹ ಮಾತುಗಳು ನಮ್ಮ ಬದುಕಿನ ಬಂಧನ ಮತ್ತು ಸ್ವಾತಂತ್ರ್ಯದ ಸಂದರ್ಭಗಳನ್ನೇ ಉದ್ದೇಶಿಸುತ್ತವೆ. ಹೀಗಾಗಿ ಉಸಿರು ಅನೇಕ ಬೈನರಿಗಳಲ್ಲಿ ಕೆಲಸ

ಮಾಡುತ್ತದೆ. ಇವೆಲ್ಲಕ್ಕೂ ಒಂದು ದ್ವಂದ್ವಾತ್ಮಕ ಸಂಬಂಧವಿದೆ (Dialectic). ಬಿಗಿಗೊಳ್ಳುವುದು (ಕರ್ಷಣ, tension,) ಮತ್ತು ಸಡಿಲವಾಗುವುದು (relaxation), ಪಡೆಯುವುದು ಮತ್ತು ಕೊಡುವುದು, (giving and taking), ಸಂಪರ್ಕ ಮತ್ತು ನಿರೋಧ (contact and resistance), ಬಿಡುಗಡೆ ಮತ್ತು ಬಂಧನ (freedom and constriction) ಇವು ನಮ್ಮ ಉಸಿರಿನ ಮೂಲತತ್ವಗಳು.

ತೊಗಲಿನ ಸ್ಪರ್ಷವೆಂದರೆ ನೇರವಾದುದು, ಮತ್ತು ನಮ್ಮ ನಿಯಂತ್ರಣಕ್ಕೆ ಒಳಪಟ್ಟದ್ದು. ಒಬ್ಬರನ್ನು ಮುಟ್ಟುವುದು, ಮುಟ್ಟದಿರುವುದು ನಮ್ಮ ಐಚ್ಛಿಕ ಕ್ರಿಯೆ. ಆದರೆ ಗಾಳಿಯ ವಿಷಯಕ್ಕೆ ಮಾತ್ರ ಇಂತಹ ಅಸ್ಪೃಶ್ಯತೆಯನ್ನು ಮನುಷ್ಯ ಆಚರಿಸಲಾರ. ನಮಗೆ ಸಮ್ಮತವಿರಲಿ ಬಿಡಲಿ, ನಾವು ಉಸಿರಾಡುವ ಗಾಳಿ ಮಾತ್ರ ಈ ಜೀವ ಜಗದ ಎಂಜಲು. ನಮ್ಮ ಶತ್ರು ಬಿಟ್ಟ ಗಾಳಿಯನ್ನೇ ನಾವು ಪಡೆಯಬೇಕಾಗಿರುವುದು ನಮಗೆ ಅನಿವಾರ್ಯ. ಇದರಲ್ಲಿ ನಮ್ಮ ಆಯ್ಕೆಯ ಪ್ರಶ್ನೆಯೇ ಇಲ್ಲ. ಅಸ್ಪೃಶ್ಯತೆಯನ್ನೇ ಆತ್ಮಸಾತ್ ಮಾಡಿಕೊಂಡು ಬದುಕುತ್ತಿರುವ ನಮ್ಮ ತರ್ಕ ಈ ಉಸಿರಿನ ತಲೆಗೆ ಹತ್ತುವುದಿಲ್ಲ. ಅದರ ಹೃದಯಕ್ಕೆ ನಾಟುವುದಿಲ್ಲ. 'ನಾನು' ಎಂಬ ಗೋಡೆಯನ್ನು ಒದ್ದು ಬೀಳಿಸಿ ಅದನ್ನೇ ಸೇತುವೆಯನ್ನಾಗಿ ಮಾಡಿಕೊಂಡು ಅದು 'ನೀನು' ಎಂಬುದನ್ನು ಮುಟ್ಟುತ್ತದೆ. ಒಳಹೊಗುತ್ತದೆ. (ಇಂಗ್ಲಿಷಿನ 'ಐ' ಕ್ಯಾಪಿಟಲ್ ಅಕ್ಷರ ವನ್ನು ಒಮ್ಮೆ ಕಣ್ಣುಮುಂದೆ ತಂದುಕೊಳ್ಳಿ. ಅದು ಎದ್ದು ನಿಂತರೆ ಗೋಡೆಯಾಗುತ್ತದೆ. ಬಿದ್ದರೆ ಸೇತುವೆಯಾಗುತ್ತದೆ) ಈ 'ನೀನು', ಎನ್ನುವವ ಮನುಷ್ಯನೇ ಆಗಬೇಕಿಲ್ಲ. ಸಕಲ ಪ್ರಾಣಿ, ಜಲಜೀವ, ಸಸ್ಯ ಹಾಗು ಅಗೋಚರ ಹುಳು ಹುಪ್ಪಟೆ ಕ್ರಿಮಿಕೀಟಗಳೂ ಇದರೊಳಗೆ ಸೇರುತ್ತವೆ. ಈ ಎಲ್ಲವೂ ಸೇರಿ ಒಂದು ಜಾಲವನ್ನೇ ನಿರ್ಮಾಣ ಮಾಡಿವೆ. ಹೀಗಾಗಿ ಒಂದನ್ನು ಧಿಕ್ಕರಿಸಿ ಇನ್ನೊಂದು ಬದುಕುವ ಪ್ರಶ್ನೆ ಎಲ್ಲಿ? ಇಲ್ಲಿ 'ನೀನು ನಾನು ಆನು ತಾನು' ಎಲ್ಲ ಕಲಸು ಮೇಲೋಗರ. ಮನುಷ್ಯನ ದೇಹವನ್ನು ಆವರಿಸಿರುವ ತೊಗಲಿನ ವಿಸ್ತೀರ್ಣತೆಗಿಂತ (surface of our skin measures only one and a half to two square metres) ಉಸಿರಿನ ಆಡುಂಬೊಲವಾದ ಶ್ವಾಸಕೋಶದ ಕ್ಷಮತೆ ಹಾಗೂ ಒಳ ವಿಸ್ತೀರ್ಣವೇ ಹೆಚ್ಚು (our lungs have internal surface area of some seventy square metres) ಮನುಷ್ಯನ ದೇಹದಲ್ಲೇ, ಅತಿ ವಿಶಾಲವಾದ ಸಂಪರ್ಕ ಸಾಧ'ನ ಅಂಗವೆಂದರೆ ಇದೇ. ಯಾಕೆಂದರೆ ಎಲ್ಲಾ ವಿಭಿನ್ನ ಧ್ರುವಗಳೂ ಸಮಾವೇಶಗೊಳ್ಳುವ ತಾಣವಿದಲ್ಲಾ!

ಈ ಉಸಿರು ಸರ್ವವ್ಯಾಪಿ ಎಂಬುದು ಅರಿವೆಗೆ ಬರಬೇಕಾದರೆ, ಮಧ್ಯದ ಉಪಾಧಿಗಳು ಬಿದ್ದುಹೋಗಬೇಕು. 'ಆಲಯ'ಗಳು ಬಿದ್ದುಹೋದಕ್ಷಣವೇ 'ಬಯಲಾ'ಗಿಬಿಡುತ್ತವೆ. ಆಲಯ ಸಾಕಾರವಾದರೆ, ಬಯಲು ನಿರಾಕಾರ. ನಮ್ಮ ನಾಡಿನ ಸಂತರ, ಅವಧೂತರ, ಪರಿಭ್ರಮಣವೆಲ್ಲಾ ಈ ಪರಿಕಲ್ಪನೆಯ ಸುತ್ತಲೇ.

ಈ ಉಸಿರಿಗೆ ಇನ್ನೊಂದು ಹೆಸರೆಂದರೆ ಪ್ರೀತಿ. ಅಮೂರ್ತವಾದ ಇದರ ಕಾರ್ಯಸ್ವರೂಪವನ್ನು 'ಋತ' ವೆಂತಲೋ, 'ಭೌತಿಕ ನಿಯಮ' ವೆಂತಲೋ ವರ್ಗೀಕರಣಮಾಡಿ ಹೆಸರಿಸಿಬಿಡಬಹುದು. ಆದರೆ ಅನುಭವಕ್ಕೆ ಮಾತ್ರ ದಕ್ಕುವ ಈ ಜೀವದಾಯಕ ತತ್ವವನ್ನು 'ಪ್ರೀತಿ'ಎಂಬ ಹೆಸರಿನಿಂದ ಕರೆಯುವುದೇ ಸೂಕ್ತ. ಯಾಕೆಂದರೆ ಪ್ರೀತಿಗೆ ಮಾತ್ರ ಮನುಷ್ಯರನ್ನು ಜೀವಂತವಾಗಿಡುವ ಶಕ್ತಿಯಿದೆ. ಪ್ರೀತಿ ಇಲ್ಲವಾದ ಕ್ಷಣ ಈ ಜಗತ್ತೂ ನಾಶವಾಗಿಬಿಡುತ್ತದೆ. ಪ್ರೀತಿಯೆಂದರೆ ಆಕರ್ಷಣೆಯೂ ಹೌದು. ವಿರುದ್ಧ ಧ್ರುವಗಳ ಅಕರ್ಷಣೆ. ಈ ಆಕರ್ಷಣೆಯಿಂದಲೇ ಭೂಮಿ ತಿರುಗುತ್ತದೆ, ಹೂ ಅರಳುತ್ತದೆ. ಕಾದ ಭೂಮಿಗೆ ತಂಪೆರೆಯುವ ಮಳೆ ನದಿಯಾಗಿ ಹರಿಯುತ್ತದೆ. ಬೆಳಕು ಹರಿಯುತ್ತದೆ. ಆಕಾಶಕಾಯಗಳು ನಮ್ಮ ತಲೆಯಮೇಲೆ ಬೀಳದೇ ನಮ್ಮನ್ನು ಕಾಪಾಡಿವೆ. ಪ್ರೀತಿಯ ಆಕರ್ಷಣೆಗೆ ಸಿಲುಕಿಯೇ ಇವು ಎಲ್ಲ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿವೆ. ಇಂತಹ ಜಡವಾದ (inorganic) ಮೂಲವಸ್ತುಗಳೇ ಜೀವಕೋಶಗಳಾಗಿ ಪಲ್ಲವಿಸುವ ಬಗೆ ಎಂತಹ ವಿಸ್ಮಯಕಾರಿಯಾದುದು. ಅದಕ್ಕೆಂದೇ ಕವಿ ಕುವೆಂಪು ಅವರು "ತೆಗೆ ಜಡವೆಂಬುದೆ ಸುಳ್ಳು", "ಕಲ್ಲಲಿ ಮಣ್ಣಲಿ ಹೂವಲಿ ಹುಲ್ಲಲಿ ನನ್ನಲಿ ನಿನ್ನಲಿ ಎಲ್ಲೆಲ್ಲಿಯು ಚೈತನ್ಯ" ಎಂದು ಹಾಡಿದರು.

ಈ ಉಸಿರನ್ನು ಪ್ರಾಣ, ಆತ್ಮ, spirit, ಎಂದೆಲ್ಲಾ ಬೇರೆ ಬೇರೆ ಶಬ್ದಗಳಲ್ಲಿ ಕರೆಯಲಾಗುತ್ತದೆ. 'ತು ನ ಜಾನೇ ಆಸ್ ಪಾಸ್ ಹೈ ಖುದಾ' ಎನ್ನುವ ಹಿಂದಿ ಹಾಡೊಂದಿದೆ. ಅದು ಉಸಿರಲ್ಲದೆ ಮತ್ತೇನು? ಇಡೀ ದೇಹದ ಕಣ ಕಣಗಳಲ್ಲಿ ತುಂಬಿ ಹೊರಹೊಮ್ಮುವ ಇದು ಸರ್ವಾಂತರ್ಯಾಮಿ. ವಿಶ್ರಾಂತವಾಗಿ ನಮ್ಮಿಂದ ಹೊರಬಿದ್ದ ಇದು ಮತ್ತೆ ದುಪ್ಪಟ್ಟು ಶಕ್ತಿಯಾಗಿ ನಮ್ಮೊಳಗೇ ಪ್ರವೇಶಿಸುತ್ತದೆ. ಅದನ್ನು ಅರಿತವರಿಗೆ ಅಲ್ಲಿ ಶಕ್ತಿಯ ಆಸ್ಫೋಟ. 'ವಿಶ್ವಪ್ರಜ್ಞೆಯ ಉದಯ'. ಆ ಪ್ರಜ್ಞೆಯ ವಿಸ್ತಾರ. ಹೀಗೆ ಹೊರಹೋಗಿ ಒಳಬಂದು, ಮಾಡುವ ಈ ಚಕ್ರೀಭವನ ಕ್ರಿಯೆಯೊಳಗೆ ಪ್ರೀತಿಯ ಸ್ರೋತವೇ ಅಡಗಿದೆ. ಇದನ್ನೇ (ಉಸಿರು ಜೀವಂತವಾಗಿಟ್ಟಿರುವ ಜೀವ ಕೋಶಗಳನ್ನು) ಆಧ್ಯಾತ್ಮ ಗುರುವೊಬ್ಬರು 'ಭವಾನಿ' (ದೇವಿ) ಎನ್ನುತ್ತಾರೆ. ಪರ್ವೀನ್ ಸುಲ್ತಾನಳ 'ಭವಾನಿ ದಯಾನಿ' ಕೇಳಿದವರಿಗೆ ಈ ಪ್ರೀತಿಯ, ಶಕ್ತಿಯ ಆತ್ಮಸಾತ್ ಆಗುತ್ತದೆ.

ದ್ವೇಷವಾದರೆ ಮನಸಾರೆ ಹಳಿದು, ಬಾಯಿತುಂಬ ಬೈದು ದೇಹ ಮನಸ್ಸುಗಳನ್ನು ಹಗುರಾಗಿಸಿಕೊಳ್ಳಬಹುದು. ಆದರೆ ಅದೇ ದೇಹ ಮನಸ್ಸುಗಳನ್ನು ಇನ್ನಿಲ್ಲದಂತೆ ಆವರಿಸಿ ಅವುಗಳನ್ನು ಕರಗಿಸಿ ಮೇಣದ ಉಂಡೆ ಮಾಡಿಬಿಡುವ ಈ ಪ್ರೀತಿಯ ಭಾರವನ್ನು ಹೇಗೆ ಕಳೆದು ಕೊಳ್ಳಬಹುದು? ಒಂದು ಪಕ್ಷ ಈ ಪ್ರೀತಿಗೆ ಮೂಲಭೂತವಾದವನ್ನು ದಮನಮಾಡುವ ಶಕ್ತಿಯಿದ್ದಿದ್ದರೆ? ಭವಾನಿಯಂತೆ ಜ್ವಾಲಾಮುಖಿಯಾಗಿ ಚಂಡಿಯಾಗಿ ಕೆಟ್ಟದ್ದನ್ನು ಆಪೋಶನ ತೆಗೆದುಕೊಳ್ಳುವ ತಾಕತ್ತಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು.

In breathing there are two blessings
Drawing breath, releasing it again,
The one pressurizes us, the other refreshes us,
So wonderfully mixed is life.

(ಗಯಟೆ)

(ಪ್ರೇರಣೆ : **The Healing Power Of Illness** *by Thorwald Dethlefsen & Rudiger Dahlke)*

– **ಗಿರಿಜಾ ಶಾಸ್ತ್ರಿ**

ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ|| ಚಂದ್ರಶೇಖರ ಕಂಬಾರ

ಚಂದ್ರಶೇಖರ ಕಂಬಾರರು ಕನ್ನಡನಾಡು ತಂದ ಅಪೂರ್ವ ಸೃಜನಶೀಲ ಪ್ರತಿಭೆ. ಕವಿಯಾಗಿ, ನಾಟಕಕಾರರಾಗಿ, ಕಾದಂಬರಿಕಾರರಾಗಿ, ಜನಪದ ತಜ್ಞರಾಗಿ, ಹಾಡುಗಾರರಾಗಿ ಸಂಶೋಧಕರಾಗಿ, ನಾಟಕ ಸಿನಿಮಾ ನಿರ್ದೇಶಕರಾಗಿ, ಕಂಬಾರರು ರಾಷ್ಟ್ರಮಟ್ಟದಲ್ಲಿ ಕನ್ನಡ ಸಾಹಿತ್ಯದ ಹಿರಿಮೆಯನ್ನು ಎತ್ತಿಹಿಡಿದವರು. ಗಾಮೀಣ ಬದುಕಿನ ದೇಸೀ ಸಂಸ್ಕೃತಿಯ ನೆಲೆಯಾಗಿ, ಜಾನಪದ ತಂತ್ರವನ್ನು ಬಳಕೆಯನ್ನು ಬಳಸಿ ಅತ್ಯುತ್ತಮ ಬರಹಗಾರರೆಂದು ಖ್ಯಾತಿ ಗಳಿಸಿದ್ದಾರೆ. ಕಂಬಾರರಿಗೆ ಹಲವಾರು ಪ್ರಶಸ್ತಿಗಳು ಬಂದಿದ್ದರೂ 2009ನೇ ಸಾಲಿನ ಕನ್ನಡಕ್ಕೆ 8ನೆಯ ಬಾರಿಗೆ ಜ್ಞಾನಪೀಠ ಪ್ರಶಸ್ತಿಯಿಂದ ಕನ್ನಡಿಗರೆಲ್ಲರೂ ಹೆಮ್ಮೆಪಡುವ ವಿಷಯ ಆಗಿದೆ.

ಕಂಬಾರರು ಬೆಳಗಾಂ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಘೋಡಗೇರಿಯಲ್ಲಿ , 2.1.1937 ರಂದು ಜನಿಸಿದರು. ಇವರ ತಂದೆ ಕಮ್ಮಾರಿಕೆ ವೃತ್ತಿಯ ಬಸವಣ್ಣಪ್ಪ ಹಾಗೂ ತಾಯಿ ಚೆನ್ನಮ್ಮನವರು. ಈ ಹಳ್ಳಿಯಲ್ಲಿ ಎಲ್ಲಾ ಜಾತಿಯವರೂ ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದರು. ತಂದೆ ಬಸವಣ್ಣಪ್ಪ ವಿದ್ಯಾವಂತರು, ಬಯಲಾಟ ಹಾಡುಗಾರಿಕೆಯ ಬಗ್ಗೆ ಅಪಾರ ತಿಳುವಳಿಕೆ ಹೊಂದಿದ್ದರು. ತಾಯಿ ಚೆನ್ನಮ್ಮ ಹಾಡು ಕತೆಗಳ ಕಣಜವೇ ಆಗಿದ್ದರು. ಕಂಬಾರರಿಗೆ ಗಿಡಮರಗಳ ಬಗ್ಗೆ ಪ್ರಚಾರದಲ್ಲಿದ್ದ ಕತೆಗಳು ದೇವರು ದೆವ್ವಗಳ ಪ್ರಸಂಗ ಆಕರ್ಷಕವಾಗಿತ್ತು. ಗ್ರಾಮೀಣ ಬದುಕಿನ ಸಂಗ್ಯಾಬಾಳ್ಯ, ಶ್ರೀಕೃಷ್ಣ ಪಾರಿಜಾತ, ಲಾವಣಿ, ಗೀಗೀ ಪದ ಕಂಬಾರರಿಗೆ ತುಂಬಾ ಇಷ್ಟವಾಗಿತ್ತು. ಅವರೇ ಹೇಳುವಂತೆ ಅಪ್ಪ ನನಗೆ ಯೋಜನಾಕ್ರಮವನ್ನು ಕಲಿಸಿದರು. ತಾಯಿ ನನಗೆ Language ಕಲಿಸಿದಳು. ಅಪ್ಪನ ರಾಷ್ಟ್ರೀಯ ಚಳುವಳಿಗೆ ಕಂಬಾರರು ತಮ್ಮ ಕಾಣಿಕೆಯಿರಲಿ ಎಂದು ಲಾವಣಿ ಬರೆದು ಶಾಲೆಯನ್ನು ಹಾಡಿ ಮೆಚ್ಚುಗೆ ಗಳಿಸಿಕೊಂಡರು ಪುಸ್ತಕ ಓದುವುದರಲ್ಲಿ ಕಂಬಾರರು ನಿಸ್ಸೀಮರು. ಗ್ರಂಥಾಲಯದಲ್ಲಿ ಇದ್ದ 300 ಪುಸ್ತಕಗಳನ್ನು ಪ್ರಾಥಮಿಕ ಶಿಕ್ಷಣ ಮುಗಿಯುವಷ್ಟರಲ್ಲಿ ಓದಿ ಮುಗಿಸಿದ್ದರು.

ಗೋಕಾಕದ Muncipal High School ಸೇರಿದಾಗ ಕಾದಂಬರಿಕಾರರಾದ ಕೃಷ್ಣ ಮೂರ್ತಿ ಪುರಾಣಿಕರು ಗುರುಗಳಾದರು. High School Fee ಮಾಫಿ ಮಾಡಿ ತಿಂಗಳಿಗೆ ಮಠದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಿಕೊಟ್ಟರು. ಸಿದ್ಧರಾಮ ಸ್ವಾಮಿಗಳ ಬಗ್ಗೆ ಅಪಾರ ಗೌರವ ಇತ್ತು. ಅವರ ಬಳಿ ಲಾವಣಿ ಹಾಡಿ ಪ್ರೀತಿಗಳಿಸಿಗೊಂಡರು. ಕುವೆಂಪು ಮತ್ತು ಮಧುರಚೆನ್ನ ಮೆಚ್ಚಿನ ಕವಿಗಳಾಗಿದ್ದರು. S.S.L.C. ಗೆ ಬರುವಷ್ಟರಲ್ಲಿ ಕವನ ರಚಿಸಿ s.s. ಭೂಸನೂರು ಮಠ್ ರ ಮೆಚ್ಚುಗೆ ಗಳಿಸಿದರು. ಕಂಬಾರರ ಬರವಣಿಗೆಗೆ ಪ್ರೋತ್ಸಾಹ ನೀಡಿದರು.

ಅಪ್ಪನಿಗೆ ಮಗ Engineer ಆಗಬೇಕೆಂಬ ಆಸೆ ಇತ್ತು. ಆದರೆ ಕಂಬಾರರು Arts ತೆಗೆದುಕೊಂಡರು. Inter ಓದುತ್ತಿದ್ದಾಗ ಇವರು ಬರೆದ "ಬೆಂಬತ್ತಿದ ಕಣ್ಣು" ಏಕಾಂಕ ನಾಟಕ ಧಾರವಾಡದ ಆಕಾಶವಾಣಿಯಲ್ಲಿ ಬಿತ್ತರಗೊಂಡಿತು. ಸುಮತೀಂದ್ರ ನಾಡಿಗ್‌ರಿಂದ ಶಿವರಾಮ ಕಾರಂತ ಹಾಗೂ ಗೋಪಾಲಕೃಷ್ಣ ಅಡಿಗರ ಪರಿಚಯವಾಯಿತು. 1958 ರಲ್ಲಿ B.A. ಪದವಿ ಮುಗಿಯುತ್ತಿದ್ದಂತೆ ಪ್ರಥಮ ಕವನ "ಮುಗುಳು" ಪ್ರಕಟವಾಯಿತು. ಬೆಳಗಾವಿಯಲ್ಲಿ ಎ.ಕೆ.ರಾಮಾನುಜನ್ ಗುರುಗಳಾಗಿದ್ದರು. ಕರ್ನಾಟಕ ವಿಶ್ವವಿದ್ಯಾಲದಿಂದ M.A. ಪದವಿ ಗಳಿಸಿದರು. ಇವರ ಆತ್ಮ ಸ್ನೇಹಿತರೆಂದರೆ ಬಿ.ಟಿ.ದೇಸಾಯಿ, ಗಿರಡ್ಡಿ ಗೋವಿಂದರಾಜು, ಸಿದ್ಧಲಿಂಗಯ್ಯ ಪಟ್ಟಣಶೆಟ್ಟಿ, ಚಂದ್ರಶೇಖರ ಪಾಟೀಲ. ಕಂಬಾರರು 1973 ರಲ್ಲಿ Origin and Development of Karnataka Folk Theatre ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ಪಡೆದರು. ಗುರುಗಳಾದ ಎ.ಕೆ.ರಾಮಾನುಜನ್ ರವರಿಗಾಗಿ 1000 ಜನಪದ ಕತೆಗಳನ್ನು ಸಂಗ್ರಹಿಸಿಕೊಟ್ಟರು. ಸಾಗರದ ಕಾಲೇಜಿನಲ್ಲಿ ಅಡಿಗರು ಪ್ರಾಂಶುಪಾಲರಾಗಿದ್ದರು. ಅವರ ಪ್ರೋತ್ಸಾಹ ಉತ್ತೇಜನದಿಂದ ಕಂಬಾರರು "ಹೇಳತೇನ ಕೇಳ" ಕವನ ಸಂಕಲನದ ಪ್ರಕಟವಾಯಿತು. ಕಂಬಾರರಿಗೆ ಅಪಾರ ಜನಪ್ರಿಯತೆ ಈ ಕವನ ಸಂಕಲನ ತಂದುಕೊಟ್ಟಿತು. 1967 ರಲ್ಲಿ ರಾಮಾನುಜನ್ ರವರಿಂದ ಅಮೇರಿಕಾ ಗೆ ಹೋಗುವ ಅವಕಾಶ ಕಂಬಾರರಿಗೆ ದೊರೆಯಿತು. ಅಮೇರಿಕಾದಲ್ಲಿ ಅಧ್ಯಾಪಕರಾಗಿ ದುಡಿದುದಲ್ಲದೆ ಅಲ್ಲಿನ ನಾಟಕಗಳನ್ನು ನೋಡುವ ಅವಕಾಶ ದೊರೆಯಿತು. ಆಗ ಪ್ರಚಲಿತವಾಗಿದ್ದ Living Theatre ಪ್ರಭಾವ ಬೀರಿತು. ವಾಪಾಸ್ಸಾದ ಮೇಲೆ ಬೆಂಗಳೂರಿನ ವಿಶ್ವವಿದ್ಯಾಲಯದ ಕನ್ನಡವಿಭಾಗಕ್ಕೆ ಸೇರಿಕೊಂಡು ಅಂದಿನಿಂದ ಬೆಂಗಳೂರಿನ ನಿವಾಸಿಯಾದರು. ರಂಗಭೂಮಿಗೆ ಹೊಸಚಾಲನೆ ನೀಡಿದರು. ಹಂಪಿ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಅರ್ಥವತ್ತಾದ ಸೇವೆ ಸಲ್ಲಿಸಿದರು. ಕಂಬಾರರು ಸತ್ಯಭಾಮೆಯನ್ನು ಮದುವೆಯಾದರು. ಇವರಿಗೆ ಒಬ್ಬ ಮಗ ಹಾಗೂ 3 ಜನ ಹೆಣ್ಣು ಮಕ್ಕಳಿದ್ದಾರೆ ಮತ್ತು 4 ಮೊಮ್ಮಕ್ಕಳಿದ್ದಾರೆ.

ಕಂಬಾರರು ಸಾಹಿತ್ಯಕ್ಷೇತ್ರಕ್ಕೆ ಕೊಟ್ಟ ಕೊಡುಗೆ ಅಪಾರ ಮತ್ತು ಅನನ್ಯ ಕಾವ್ಯ, ನಾಟಕ, ಕಾದಂಬರಿ, ಜಾನಪದ ಇತರೆ ಪ್ರಕಾರಗಳಲ್ಲಿ ಉತ್ತಮವಾದ ಕೃತಿಗಳನ್ನು ರಚಿಸಿ ಅಪಾರ ಮನ್ನಣೆಯನ್ನು ಪಡೆದಿದ್ದಾರೆ. ಕಂಬಾರರು 8 ಕವನ ಸಂಕಲನಗಳನ್ನು ಬರೆದಿದ್ದಾರೆ. "ಮುಗುಳು", "ಹೇಳತೇನ ಕೇಳ", "ತಕರಾರಿನವರು", "ಸಾವಿರನೆರಳು", "ಬೆಳ್ಳಿಮೀನು", "ಅಕ್ಕಕ್ಕು ಹಾಡುಗಳೆ", "ಚಕೋರಿ", ಹಾಗೂ "Rocks of Hampi", ಇವರ 'ತಕರಾರಿನವರು' ಕವನ ಸಂಕಲನಕ್ಕೆ ರಾಜ್ಯಸಾಹಿತ್ಯ ಅಕಾಡೆಮಿ "ಸಾವಿರದ ನೆರಳು" ಸಂಕಲನಕ್ಕೆ ಕೇರಳದ ಆಷಾನ್ ಪ್ರಶಸ್ತಿ ದೊರೆತಿದೆ. "ಹೇಳತೇನ ಕೇಳ" 21 ನುಡಿಗಳ ಲಾವಣಿ, 'ಚಕೋರಿ' –ಮಹಾಕಾವ್ಯ. .. ಹಾಡುಗಾಗರಾದ ಕಂಬಾರರಾ ಬಾಯಿಂದ ಈ ಲಾವಣಿಗಳನ್ನುಕೇಳಿ ನಲಿಯಬೇಕು.

ಕಂಬಾರರಿಗೆ ಬಹಳಷ್ಟು ಪ್ರಿಯವಾದದ್ದು ನಾಟಕ ಕ್ಷೇತ್ರ. ಇವರು 20 ಕ್ಕೂ ಹೆಚ್ಚು ನಾಟಕಗಳನ್ನು ವೈವಿಧ್ಯಮಯ ಕಥಾವಸ್ತುಗಳನ್ನು ಇಟ್ಟುಕೊಂಡು ಬರೆದಿದ್ದಾರೆ. ಇವರ ಜಾನಪದ ಶೈಲಿಯ ದಾಟಿ, ಹಾಡುಗಳು, ಕಥೆಯ ನೋಟ ಎಲ್ಲರ ಮನಮುಟ್ಟಿದೆ.

ನಾರ್ಸಿಸಸ್, ಬೆಂಬತ್ತಿದ ಕಣ್ಣು, ಋಷ್ಯಶೃಂಗ, ಜೋಕುಮಾರಸ್ವಾಮಿ, ಚಾಳೇಶ, ಕಿಟ್ಟಿಯಕತೆ, ಜೈಸಿದ್ದನಾಯಕ, ಅಲಿಬಾಬ 40 ಕಳ್ಳರು, ಕಾಡುಕುದುರೆ, ನಾಯೀಕತೆ, ಖರೋಖರ,



ಕಂಬಾರರಿಗೆ ದೊರೆತಿರುವ ಪ್ರಶಸ್ತಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರ ಮಹೋತ್ಸವ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕಲ್ಕತ್ತಾದ ನಾಂದಿಕರ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ನಾಡೋಜ ಪ್ರಶಸ್ತಿ, ಕಬೀರ್ ಸಮ್ಮಾನ್, ಆಂಧ್ರದ ಜುಷುವಾ ಪ್ರಶಸ್ತಿ, ಜಾನಪದ ಯಕ್ಷಗಾನ ಪ್ರಶಸ್ತಿ, ಇನ್ನೂ ಹಲವಾರು ಪ್ರಶಸ್ತಿಗಳು ಲಭಿಸಿವೆ. 2001ರಲ್ಲಿ ಭಾರತ ಸರ್ಕಾರದ "ಪದ್ಮಶ್ರೀ ಪ್ರಶಸ್ತಿ, ಹಾಗೂ 2009 ನೆಯ ಸಾಲಿನ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ". .

✍ ವಿ. ರಂಗನಾಥರಾವ್

ಮತಾಂತರ, ಹರಕೆಯ ಕುರಿ, ಸಾಂಬಶಿವ ಪ್ರಹಸನ, ತುಕ್ರನ ಕನಸು, ಪುಷ್ಪರಾಣಿ, ಹುಲಿಯನೆರಳು, ಸಿರಿಸಂಪಿಗೆ, ಬೆಪ್ಪುತಕ್ಕಡಿ ಬೋಳೇ ಶಂಕರ, ಮಹಾಮಾಯಿ, ಶಿವರಾತ್ರಿ. ಇವು ಅವರ ಪ್ರಮುಖ ನಾಟಕಗಳು.

ಋಷ್ಯಶೃಂಗ: ಹೇಳತೇನ ಕೇಳ ಕವನ ಸಂಕಲನ ಮುಂದುವರಿದ ಭಾಗ, ಸಣ್ಣಾಟ, ದೊಡ್ಡಾಟ, ಶ್ರೀಕೃಷ್ಣ ಪ್ಪಾರಿಜಾತದ ಅಂಶಗಳನ್ನು ತಾಂತ್ರಿಕವಾಗಿ ಬಳಸಿದ್ದಾರೆ. ಗಂಡ, ಹೆಂಡತಿ, ಮಕ್ಕಳು ಇವರ ಆತ್ಮೀಯ ಸಂಬಂಧಗಳಿಗೆ ಹೋಲಿಕೆ ಕಾಣಬಹುದು. ಇದು 1970ರಲ್ಲಿ ಚಲನಚಿತ್ರವಾಗಿದೆ.

ಜೋಕುಮಾರಸ್ವಾಮಿ: ಕನ್ನಡ ರಂಗಭೂಮಿಯಲ್ಲಿ ಹೊಸ ತಿರುವನ್ನು ನೀಡಿದ ನಾಟಕ. ಆಗಿನ ಕೈಲಾಸಂ, ಶ್ರೀರಂಗರ ನಾಟಕಗಳನ್ನು ನೋಡುತ್ತಿದ್ದ ಪ್ರೇಕ್ಷಕರಿಗೆ ಈ ನಾಟಕದ ಹಾಡು, ಕುಣಿತ ಕಥೆ, ವೇಷಭೂಷಣಗಳು, ಹಿಮ್ಮೇಳದಿಂದ ಹೊಸ ಆಯಾಮ ಹೊಸ ರಂಗನ್ನು ನೀಡಿತು. "ಉಳುವವನೇ ಹೊಲದೊಡೆಯ" ಎಂಬ ಜನಪ್ರಿಯ ಘೋಷಣೆಯನ್ನು ಪೌರುಷವಂತನಿಗೆ ಹೆಣ್ಣನ್ನು ಒಲಿಸಿಕೊಳ್ಳುವ ಹಕ್ಕಿದೆ" ಎಂಬ ಸೂತ್ರಕ್ಕೆ ಅನ್ವಯಿಸಿ ಕತೆ ಹಣೆಯಲಾಗಿದೆ. ಜಮೀನ್ದಾರಿ ವ್ಯವಸ್ಥೆಗೆ ಸೆಡ್ಡುಹೊಡೆದ ಬಸಣ್ಣಾ ಊರಿನ ಗೌಡರಿಂದ ಸಾಯುತ್ತಾನೆ. ಈ ನಾಟಕಕ್ಕೆ ಕಮಲಾದೇವಿ ಚಟ್ಟೋಪಾಧ್ಯಾಯ ಪ್ರಶಸ್ತಿ ಬಂದಿದೆ.

ರಂಗಭೂಮಿಯ ಬಹುತೇಕ ತಂಡಗಳು ಈ ನಾಟಕವನ್ನು ಆಡಿದ್ದಾರೆ. ಗಿರೀಶ ಕಾರ್ನಾಡ್, ಎಚ್.ಎಸ್.ಸೋಮಶೇಖರ್ ರಾವ್, ನಾಗಾಭರಣ, ಶಿವಾನಂದ, ಸುಂದರಾಜ್, ವೈಶಾಲಿ ಕಾಸರವಳ್ಳಿ, ಬಿ.ವಿ.ಕಾರಂತರಂಥಹ ಹೆಸರಾಂತ ನಟ, ನಿರ್ದೇಶಕರಿಂದ ಈ ನಾಟಕ ಅತ್ಯಂತ ಜನಪ್ರಿಯವಾಗಿ ಹೊರಹೊಮ್ಮಿದೆ. ಈ ನಾಟಕದ ಪ್ರೇರಣೆಯಿಂದ ಹಲವಾರು ನಾಟಕಕಾರರು ಹೊಸ ಹೊಸ ನಾಟಕ ಗಳನ್ನು ಬರೆಯಲು ಮತ್ತು ಅಭಿನಯಿಸಲು ಕಾರಣವಾಯಿತೆಂದರೆ ತಪ್ಪಾಗಲಾರದು.

<u>ಕಾಡುಕುದುರೆ:</u> ಚಲನಚಿತ್ರವಾಗಿ panorama ಗೆ ಪ್ರವೇಶ ಪಡೆದ ಚಿತ್ರವಾಗಿತ್ತು. ಶಿವಮೊಗ್ಗ ಸುಬ್ಬಣ್ಣನವರು ಹಾಡಿದ "ಕಾಡುಕುದುರೆ ಓಡಿ ಬಂದಿತ್ತ" ಹಾಡಿಗೆ ರಾಷ್ಟ್ರಪ್ರಶಸ್ತಿ ಬಂದಿದೆ.

<u>ನಾಯೀಕಥೆ:</u> 'ಸಂಗೀತಾ' ಹೆಸರಿನಿಂದ ತಯಾರಾದ ಈ ಚಿತ್ರದಲ್ಲಿ ಜಯಮಾಲಾ ಮುಖ್ಯ ಪಾತ್ರ ವಹಿಸಿದ್ದರು. 4 ಪ್ರಶಸ್ತಿಗಳನ್ನು ಗಳಿಸಿದ ಈ ಚಿತ್ರ ಉತ್ತಮ ಸಂಗೀತ ನಿರ್ದೇಶನ ಪ್ರಶಸ್ತಿ ಕಂಬಾರರಿಗೆ ಲಭಿಸಿದೆ.

<u>ಹರಕೆಯ ಕುರಿ:</u> 1983 ರಲ್ಲಿ ರಾಷ್ಟ್ರೀಯ ಪ್ರಶಸ್ತಿ ಇದೇ ಹೆಸರಿನ ಚಿತ್ರಕ್ಕೆ ಲಭಿಸಿದೆ. ಇತರೆ ಭಾಷೆಗಳಿಗೆ ಅನುವಾದ ಆಗಿರುವ ನಾಟಕವಾಗಿದೆ.

<u>ಜೆ.ಸಿದ್ಧನಾಯಕ:</u> 1983 ರಲ್ಲಿ ರಾಷ್ಟ್ರೀಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಊಳಿಗಮಾನ್ಯ ವ್ಯವಸ್ಥೆಯನ್ನು ನಾಶಗೊಳಿಸಿ ಸಮಾನತೆಯನ್ನು ಆಧರಿಸಿದ ನಾಟಕ.

<u>ಸಿರಿಸಂಪಿಗೆ:</u> ಈ ನಾಟಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಜಾನಪದ ಕತೆಯೊಂದನ್ನು ಆಧರಿಸಿದ ಈ ನಾಟಕ ಹಲವಾರು ಪ್ರಯೋಗ ಕಂಡಿದೆ.

ಕಂಬಾರರ ಹಲವಾರು ನಾಟಕಗಳು ಇತರೆ ಭಾಷೆಗಳಿಗೆ ಆನುವಾದ ಕಂಡಿವೆ. ವಿಭಿನ್ನ ಶೈಲಿಯ ಕಥಾವಸ್ತುಗಳನ್ನು ಆಧರಿಸಿ ಬರೆದಿರುವ ಈ ನಾಟಕಗಳು ಇಂದಿಗೂ ಜನಪ್ರಿಯವಾಗಿದೆ. ಕಂಬಾರರೇ ಜೋಕುಮಾರಸ್ವಾಮಿ ನಾಟಕದಲ್ಲಿ ಹಿಮ್ಮೇಳಕರಾಗಿ, ಹಾಡುಗಾರರಾಗಿ ಹೆಸರುಗಳಿಸಿದ್ದಾರೆ. ಇವರು ಬರೆದಿರುವ ಇತ್ತೀಚಿನ ನಾಟಕ 'ಶಿವರಾತ್ರಿ' ಕೂಡ ರಾಜ್ಯದ ಹಲವಾರು ತಂಡಗಳು ಅಭಿನಯಿಸಿ ಜನಪ್ರಿಯತೆ ಗಳಿಸಿವೆ. ಕಂಬಾರರ ನಾಟಕಗಳನ್ನು ನೋಡುವ ಪ್ರೇಕ್ಷಕರು ಇಂದಿಗೂ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಅವರ ನಾಟಕಗಳಲ್ಲಿ ಉತ್ಸಾಹ, ಕುಣಿತ, ಮಾತಿನ ದಾಟಿ, ಎಂಥವರನ್ನಾದರೂ ಸೆಳೆಯುವ ಮೋಡಿ ಇದೆ ಎಂದರೆ ಅತಿಶಯೋಕ್ತಿಯಾಗಲಾರದು.

ಕಂಬಾರರು ತಮ್ಮ ಬರವಣಿಗೆಯನ್ನು ಕೇವಲ ನಾಟಕ ಹಾಗೂ ಕಾವ್ಯಕ್ಕೆ ಮೀಸಲಿಡದೆ ಕಾದಂಬರಿಗಳನ್ನು ಬರೆದಿದ್ದಾರೆ. 'ಅಣ್ಣತಂಗಿ', 'ಕರಿಮಾಯಿ', ಜೀಕೆ ಮಾಸ್ತರರ ಪ್ರಣಯ ಪ್ರಸಂಗ' ಹಾಗೂ 'ಸಿಂಗಾರವ್ವ ಮತ್ತು ಅರಮನೆ' ಕಾದಂಬರಿಗಳನ್ನು ಅರ್ಥಪೂರ್ಣ ವಾಗಿ ಬರೆದಿದ್ದಾರೆ. ಇವರ 'ಸಿಂಗಾರವ್ವ ಮತ್ತು ಅರಮನೆ' ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗಳಿಸಿದೆ. 'ಜೀಕೆ ಮಾಸ್ತರರ ಪ್ರಣಯ ಪ್ರಸಂಗ telefilm ಆಗಿ ಪ್ರಸಾರಗೊಂಡು ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ಲಭಿಸಿದೆ.

'ಕರಿಮಾಯಿ' ನಾಟಕದ ರೂಪಾಂತರವನ್ನು ಬಿ.ಜಯಮ್ಮ ನಿರ್ದೇಶಿಸಿ ಹಾಡುಗಳನ್ನು ಹಾಡಿ ಅಪಾರ ಜನಪ್ರಿಯತೆಗಳಿಸಿದ್ದಾರೆ. ಜನಪದ ಸಂಶೋಧನೆಗೆ ಕಂಬಾರರು ನೀಡಿರುವ ಕಾಣಿಕೆ ಮರೆಯಲಾಗದ್ದು. ಸಂಗ್ಯಾಬಾಳ್ಯ, ಬಯಲಾಟಗಳು, ಕನ್ನಡ ನಾಟಕ ಸಂಪುಟ, ಲಕ್ಷಾಪತಿರಾಜನ ಕಥೆ, ಕನ್ನಡ ಜಾನಪದ ವಿಶ್ವಕೋಶ, ಜೇಡರ ಹುಡುಗ ಮತ್ತು ಗಿಳಿ, ನಮ್ಮ ಜಾನಪದ ಹೀಗೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಜಾನಪದ ರಂಗಭೂಮಿಗೆ ಕಂಬಾರರು ನಿಜಕ್ಕೂ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ಕಂಬಾರರು 10 ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿ ಸಂಗೀತ ಸಂಯೋಜನೆಯನ್ನು ಮಾಡಿ ಅಪಾರ ಸೇವೆ ಸಲ್ಲಿಸಿದ್ದಾರೆ. 'ಮಾಡಿ ಮಡಿದವರು' ಮತ್ತು 'ವಂಶವೃಕ್ಷ' ಕನ್ನಡ ಚಲನಚಿತ್ರದಲ್ಲಿ ಸಣ್ಣ ಪಾತ್ರವನ್ನು ಅಭಿನಯಿಸಿದ್ದಾರೆ.

ಕಂಬಾರರ ವಿಶಿಷ್ಯ ಸೇವೆಯನ್ನು ನಾವು ಸ್ಮರಿಸಬಹುದಾದರೆ ಹಂಪಿ ವಿಶ್ವವಿದ್ಯಾಲಯದ ಕುಲಪತಿಯಾಗಿ ಅವರು ನಿರ್ವಹಿಸಿದ ಕಾರ್ಯ. ಇವರ 'ಕನಸಿನ ಕೂಸು', 'ಶಾಂತಿನಿಕೇತನ'ದ ಹಾಗೆ ಮಾಡಲು ಸತತ ಪ್ರಯತ್ನ ಇವರದಾಗಿತ್ತು. ವಿಶ್ವವಿದ್ಯಾಲಯ ಆವರಣಕ್ಕೆ 'ವಿದ್ಯಾರಣ್ಯ' ಹೆಸರು ಅರ್ಥಪೂರ್ಣ. ಇಲ್ಲಿನ ಕಟ್ಟಡಗಳು ಆಕರ್ಷಕವಾಗಿದೆ. ಅಧ್ಯಯನಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಪ್ರಸಾರರಂಗ ಮತ್ತು ಸಂಶೋಧನೆ ಇವರ ಇನ್ನಿತರ ಮಹತ್ಕಾರ್ಯ. ಇವರಿಗೆ ನೀಡಿರುವ "ನಾಡೋಜ" ಪ್ರಶಸ್ತಿ ವಿಶ್ವವಿದ್ಯಾಲಯದವರು ನೀಡುವ ಗೌರವ ಡಾಕ್ಟರೇಟ್‌ಗೆ ಸಮಾನವಾದಂಥ ಪ್ರಶಸ್ತಿ. ಕಂಬಾರರು ಸಲ್ಲಿಸಿರುವ ಸೇವಾಕ್ಷೇತ್ರಗಳು – ಹಲವಾರು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ, ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಸದಸ್ಯ. ಎನ್ ಎಸ್ ಡಿ ಅಧ್ಯಕ್ಷ, ಕರ್ನಾಟಕ ವಿಧಾನ ಪರಿಷತ್ ಸದಸ್ಯ, ರಂಗಾಯಣ ಸದಸ್ಯ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರು. ಇನ್ನೂ ಹಲವಾರು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

OBITUARY

We regret to inform that our member, Sri. Shridhar Sharma, expired on 06th February 2012 . He joined the Association in 1978 and contributed to many events. He served as Public Information often, Children film society for many years and as a Education Consultant since in his retirement. Many members remember him as the younger brother of Shri. S. Subramani past Secretary of the Association. He leaves behind his wife Vimla and two daughters and many memories to his many friends.

****

Smt. Radha Murthy was Stalwart in the field of Social work and women's empowerment. Daughter of the well known Advocate Shri.Venkatarangai Iyengar Smt. Radha Murthywas the chairman of Mahila Samaj of Kumara Park. She was also the trustee of Sri. Venugopala Swamy Devasthan and also chairman of Malleshwaram Co-op. Bank She is the mother of N.Sudarshan. Her demise on 06.12.2011 leaves many of us grieved.

****

We deeply regret to inform that our member Shashikanth Joshi's Father Shri. Shamrao Narshimhrao Joshi passed away on 26th January 2012. He was working as a Educational Officer since retirement. He has left behind 3 sons and 2 daughters. We pray the god may his soul rest in peace.

“ಸಿಂಗಪೂರ್”ನ ಅಸಾಮಾನ್ಯ ಅಂಚೆ ವ್ಯವಸ್ಥೆ



‘ಸಿಂಗಪೂರ್’ ಎಂದ ಕೂಡಲೇ ನಮ್ಮ ಮನಸ್ಸಿನ ಅಂಗಳದಲ್ಲಿ ಮೂಡುವ ಚಿತ್ರಣ ಝಗಮಗಿಸುವ ದೀಪಾಲಂಕಾರಗಳು ಕಣ್ ಮನ ಆಕರ್ಷಿಸಿ ನಿಮ್ಮನ್ನು ಸೆಳೆಯುವ ವ್ಯಾಪಾರ ಮಳಿಗೆಗಳು, ಅಂಗಡಿ ಮುಂಗಟ್ಟುಗಳು ‘ಮಾಲ್‌ಗಳು’ ಪ್ರವಾಸಿಗರನ್ನು ಬರಮಾಡಿಕೊಂಡು, ನೋಡಲೇಬೇಕೆನ್ನುವ ಅಗಣಿತ ಸ್ಥಳಗಳು ಇತ್ಯಾದಿ ... ಇತ್ಯಾದಿ... ಆದರೆ ಸಿಂಗಪೂರ್‌ನ ವಿಶೇಷತೆ ಅಷ್ಟಕ್ಕೆ ಸೀಮಿತಗೊಂಡಿಲ್ಲ. ನನ್ನ ವೈಯಕ್ತಿಕ ಅನುಭವಕ್ಕೆ ಬಂದ ಮತ್ತಷ್ಟು ವಿಷಯಗಳನ್ನು ಓದುಗರೊಂದಿಗೆ ಹಂಚಿಕೊಳ್ಳ ಬೇಕೆಂಬ ಕಾತುರ ನನ್ನನ್ನು ಕಾಡುತ್ತಿದೆ.

‘ಸಿಂಗಪೂರು’ ಅಂಚೆ ಚರಿತ್ರೆಯ ಪುಟಗಳ ಮೇಲೆ ಕಣ್ಣು ಹಾಯಿಸಿ ನೋಡಿದ್ದೇ ಆದರೆ ‘ಸಿಂಗಪೂರು’ ಎಂಬ ಸ್ವರ್ಗವನ್ನು ಸೃಷ್ಟಿಸಿದ ಬ್ರಹ್ಮ ಸರ್ ಸ್ಟಾಮ್‌ಫೋರ್ಡ್ (Sir. STAMFORD RAFFLES) ರ್‍ಯಾಫಲ್ಸ್ 1819 ರಲ್ಲಿ ಎಂಬುದು ಎಲ್ಲರಿಗೂ ತಿಳಿದ ವಿಷಯವೇ! ಅಂದೇ ಅಂಚೆ ವ್ಯವಸ್ಥೆಯೂ ಹುಟ್ಟಿಕೊಂಡಿತು. ಇಂದಿನ ಪಾರ್ಲಿಮೆಂಟ್ ಹೌಸ್‌ನಲ್ಲಿ ಕಚೇರಿ, ವ್ಯವಹಾರ ಕಡಿಮೆ, 3 ಜನ ಸಿಬ್ಬಂದಿ ಸಾಕಾಗಿತ್ತು. 1949 ರ “ಮಲೇಶಿಯ ಅಂಚೆ ಒಕ್ಕೂಟ ಒಡಂಬಡಿಕೆಯ” (Malayan postal union agreement) ಪ್ರಕಾರ ವಸಾಹತು (colonial) ವ್ಯವಸ್ಥೆಯ ನೀತಿ ನಿಯಮಗಳು ಎರಡರ ಮೇಲೂ ಹೇರಲ್ಪಟ್ಟಿತು. ನಂತರ, 1965 ರ 9ನೆಯ ಆಗಸ್ಟ್ ‘ಸಿಂಗಪೂರು’ ಸ್ವತಂತ್ರ ದೇಶವಾದ ಮೇಲೆ ಹಂತ ಹಂತವಾಗಿ ಕಾರ್ಯನಿರ್ವಹಿಸಲು ಆರಂಭಿಸಿ “ಸಾರ್ವತ್ರಿಕ ಅಂಚೆ ಒಕ್ಕೂಟದಲ್ಲಿ (Universal Postal Union, UPU) ಸೇರ್ಪಡೆಯಾಯಿತು.

‘ಅಂಚೆ’ಯ ವಿಂಗಡನೆ, ವರ್ಗೀಕರಣೆಯ ವಿಕಾಸ, ಸ್ವಯಂಚಲಿಸುವ ಯಂತ್ರಗಳು ಎಂತಹವರನ್ನೂ ಚಕಿತಗೊಳಿಸುವುದು!

(1) ರಸ್ತೆ ಬದಿಯಲ್ಲಿನ ಅಂಚೆ ಪೆಟ್ಟಿಗೆಗಳಿಂದ, ಶಾಖಾ ಕಚೇರಿಗಳಿಂದ, ವಿಮಾನ ನಿಲ್ದಾಣದಿಂದ, ರೇವು ಪಟ್ಟಣದಿಂದ (Seaports) ಬಂದಿರುವ ಪತ್ರಗಳನ್ನು ಉರುಳಿಸುವ ಪೆಟ್ಟಿಗೆಗಳಲ್ಲಿ “ಲಿಫ್ಟ್” ಮೂಲಕ ಮೇಲಕ್ಕೆ ಕೊಂಡೊಯ್ಯಲ್ಪಡುತ್ತವೆ.

(2) ಎರಡನೆಯ ಹಂತದಲ್ಲಿ ಸ್ಟ್ಯಾಂಪ್ ಲಗತ್ತಿಸಲಾದ ಪತ್ರಗಳನ್ನು “ಕಲ್ಲರ್ ಫೇಸರ್ ಕ್ಯಾನ್‌ಸೆಲ್ಲರ್” (Culler Facer Cancellor CFC) ನಲ್ಲಿ ವ್ಯವಸ್ಥಿತವಾಗಿ ಜೋಡಿಸುತ್ತಾರೆ. ಆಯಂತ್ರ ವಿಲಕ್ಷಣವಾಗಿರುವ ವಸ್ತುಗಳನ್ನು ಬೇರ್ಪಡಿಸುತ್ತದೆ. ಅಲ್ಲಿ “ಅಂಚೆ ಮುದ್ರೆ” ಹಾಕಲ್ಪಡುತ್ತದೆ. ಅಷ್ಟೇ ಅಲ್ಲ. ವಿಳಾಸದ ವಿವರಗಳ ಸ್ವರೂಪಗಳನ್ನು ಪರಿಷ್ಕರಿಸಿ “ಆಫ್‌ಲೈನ್ ಆಪ್ಟಿಕಲ್ ಕ್ಯಾರೆಕ್ಟರ್ ರೀಡರ್ ಹಾಗೂ ವಿಡಿಯೋ ಕೋಡಿಂಗ್ (OCR) ವ್ಯವಸ್ಥೆ (Off line optical character Reader and Video Coding System) ಹಿಡಿದಿರಿಸುತ್ತದೆ. ಎಲ್ಲಿಯೂ ಏನೂ ಎಡವಟ್ಟಾಗದಂತೆ, ದಾಖಲಿಸುತ್ತದೆ ಈ ವ್ಯವಸ್ಥೆ! ಅಂಚೆಮುದ್ರೆ ಪಡೆದ ಅಂಚೆಗಳ ಮೇಲೆ ಲಕೋಟೆ ಹಿಂಭಾಗದಲ್ಲಿ ಗುರುತಿನ “ಬಾರ್ ಕೋಡು” (Barcode) ಮುದ್ರಿಸಲ್ಪಡಲಾಗುತ್ತದೆ. ಆ ನಂತರ, ಪತ್ರಗಳನ್ನು “ಬಾರ್ ಕೋಡು ಸಾರ್ಟರ್” (sorter) ಗೆ ಕಳುಹಿಸಲಾಗುತ್ತದೆ.

(3) ಅಂಚೆ ಚೀಟಿಗಳು ಇಲ್ಲದ ಪತ್ರಗಳು ಪತ್ತೆ ಆದರೆ, ಮತ್ತೆ ಅವುಗಳನ್ನು ಒ.ಸಿ.ಆರ್. (OCR) ಯಂತ್ರಕ್ಕೆ ಸಾಗಹಾಕುತ್ತಾರೆ. ಅಲ್ಲಿಯೂ ವಿವರಗಳು ಸಿಗದಿದ್ದ ಪಕ್ಷದಲ್ಲಿ “ವಿಡಿಯೋ ಕೋಡಿಂ”ಗ್‌ಗೆ ಕಳುಹಿಸುತ್ತಾರೆ (VC) ಅಲ್ಲಿರುವ ಕಾರ್ಯನಿರ್ವಾಹಕನು ವಿಳಾಸಗಳ ವಿವರಗಳ ಸ್ವರೂಪವನ್ನು ಓದಿಕೊಂಡು ವಿಂಗಡಿಸಿದ ‘ಅಂಚೆ’ ಪತ್ರಗಳ ಮೇಲೆ ಗಮ್ಯ ಸ್ಥಾನದ ಬಾರ್‌ಕೋಡ್ ಮುದ್ರಿಸಿ, ಬಟವಾಡ್ ಬಾರ್‌ಕೋಡ್ ಮುದ್ರಿಸಿ ಬಟವಾಡ್ ಬಾರ್‌ಕೋಡ್ ವಿಂಗಡನೆಗೆ ಕೊನೆಯದಾಗಿ ಸಾಗಹಾಕುತ್ತಾರೆ. ಇಲ್ಲಿ ‘ಡೆಲಿವರಿ ಬಾರ್ ಕೋಡ್ ಸಾರ್ಟರ್’ ನಲ್ಲಿ (Delivery Sorter) ‘ಅಂಚೆಯವನು ಪತ್ರಗಳನ್ನು ‘ಬಟವಾಡೆ’ ಮಾಡುವ ಕ್ರಮದಲ್ಲಿ ‘ವಿಂಗಡನೆ’ ಮಾಡಲ್ಪಡುತ್ತದೆ.

(4) ಫ್ಲಾಟ್ (Flats) ಹಾಗೂ ಪಲವು ಬಾರಿ ಕೈನಿಂದಲೇ (Manual) ವಿಂಗಡನೆ ಮಾಡುವ ಯಂತ್ರದ ಮೂಲಕ) ದಪ್ಪನೆಯ ಹಾಗೂ ಮಾಸಪತ್ರಿಕೆಗಳು ಮುಂತಾದುವುಗಳ ವಿಳಾಸ,

✍ ವನಜಾರಾಜನ್

ವಿವರಗಳನ್ನು ಪುನಃ ಪರಿಷ್ಕರಿಸಲ್ಪಡಲಾಗುತ್ತದೆ. ಇದೇ ರೀತಿ ಪಾರ್ಸಲ್‌ಗಳು ಕೂಡ ಮುದ್ರಿಸಲಾದ ಬಾರ್‌ಕೋಡ್ ಪ್ರಕಾರ ಅಂಚೆ ವಿಭಾಗದಲ್ಲಿ ಪರಿಷ್ಕರಿಸಲಾಗುತ್ತವೆ. ಈ ರೀತಿ 'ಸಿಂಗಪೂರು' ಟಪಾಲು ಅಂಚೆ ಕೇಂದ್ರದಲ್ಲಿ "ನಾಲ್ಕು" ಅಂತಸ್ತಿನಲ್ಲಿ ಎಲ್ಲಾ ಕಾರ್ಯಾಚರಣೆಗಳು ಜರುಗುತ್ತವೆ. ಕೊನೆಯಲ್ಲಿ 'ಬಟವಾಡ್‌ಗಾಗಿ' ಅಂಚೆಯವನ ಸುಪರ್ದಿಗೆ ವಹಿಸಲಾಗುತ್ತದೆ.

ಅಂದಿನ ದಿನಗಳಲ್ಲಿ ಎಲ್ಲಾ ರೀತಿಯ ವ್ಯವಹಾರಗಳೂ ಪತ್ರಗಳ ಮೂಲಕವೇ ನಡೆಯುತ್ತಿತ್ತು. ಆ ಬಗ್ಗೆ ಯೋಚಿಸಿಯೇ ಮೈ ಪುಳಕಗೊಂಡಿತು.

ಮೇಲಿನ ಭಾವಚಿತ್ರದಲ್ಲಿ ಕೆಂಪು ಡಬ್ಬದಲ್ಲಿ ಇಣುಕಿ ನೋಡುತ್ತಿರುವ ಮಕ್ಕಳಿಗೆ ವಿಶ್ವವೇ ಅದರಲ್ಲಡಗಿದೆ ಎಂದೆನ್ನಿಸಿದ್ದರೆ ಆಶ್ಚರ್ಯವೇನು? ಈಗ ಕಾಗದಗಳನ್ನು ಬರೆಯುವವರನ್ನು ಕಾಣುವುದೇ ಅಪರೂಪ! ಇಂದಿನ ದಿನಗಳಲ್ಲಿ, ಮೊಬೈಲ್, ಇ-ಮೇಲ್, ಗಣಕಯಂತ್ರದ ಮೂಲಕ ಮಾಹಿತಿಗಳು, ಸುದ್ದಿ-ಸಮಾಚಾರಗಳ ಪರಸ್ಪರ ವಿನಿಮಯ 'ತಟ್ಟನೆ' ನಡೆಯುವುದೇನೋ ನಿಜ! ಆದರೆ ಅದರಲ್ಲೇನಿದೆ ಮಜ? ಪತಿ, ಪರದೇಶದಲ್ಲಿಯೋ ಇಲ್ಲಿ ದೂರದೇಶದಲ್ಲಿಯೋ ಇದ್ದಾಗ, ಪತ್ನಿಯ ವಿರಹ ವೇದನೆ, ಕಾತುರ, ಭಾವೋದ್ವೇಗ, ಪ್ರೇಮ ಉಕ್ಕಿ ಬಂದು 'ಶಾಯಿ' ಯಲ್ಲಿ ಹರಿದು ಬಂದಾಗ ಆ ಕಾಗದದ ಮೇಲೆ 'ಕಾವ್ಯ'ವೇ ಸೃಷ್ಟಿಯಾಗುತ್ತಿತ್ತು. 'ಪತಿ'ಯಿಂದ ಪ್ರತ್ಯುತ್ತರಕ್ಕಾಗಿ ಕಾದು ಕುಳಿತ 'ಪತ್ನಿ'ಯಲ್ಲಿ 'ನಿರೀಕ್ಷೆ'ಯ ಮಧುರ ಯಾತನೆ! ಅನುಭವಿಸಿದವರಿಗೇ ಗೊತ್ತು ಆ ಸುಖ! ಅಷ್ಟೇ ಏನು ಎಸ್.ಎಮ್.ಎಸ್. ನಿಂದ ಭಾಷೆಯ ಸೊಗಡು ಸಹ ಸೊರಗಿದೆ. ಭಾಷಾಜ್ಞಾನ ಕೈ ಬರಹ, ಶಬ್ಧಭಂಡಾರ ಶ್ರೀಮಂತವಾಗ ಬೇಕಾದರೆ, ಪತ್ರಗಳನ್ನು ಬರೆಯುವ ಅಭ್ಯಾಸ ರೂಡಿಸಿಕೊಳ್ಳಬೇಕು. ಅದು ಒಂದು "ಕಲೆ" – ಅಲ್ಲವೇ? ಪ್ರಧಾನವಮಂತ್ರಿ ಜವಾಹರಲಾಲ್ ನೆಹರು ರವರು ಕಾರಾಗೃಹದಿಂದ ತಮ್ಮ ಪುತ್ರಿ 10 ವರ್ಷದ ಇಂದಿರಾಗೆ ಬರೆದ ಪತ್ರಗಳು "Letter from Father to his daughter" ಇಂದೂ ಬಹಳ ಪ್ರಸಿದ್ಧವಾಗಿದೆ. □

MATRIMONIAL

Alliance invited for a boy, D.O.B. 08.0.1982 ,Heiht 5′.9″, Vishwamitra Gotra, Vishakha Nakshatra, Tula Rashi, Qualification Ph.D. (Physics)U.S.A.

Preference: Age-21-26 yrs, Height-5′.2″ to 5′.6″ & above, Complexion-Fair,

***

Wanted Alliance for Iyer Brahmin Boy, Age: 37 yrs, Gauthama Gothram, Shravan Nakshatram, Makara Rasi, Qualification: B.Com, Working with IBM.
Employed or non employed, Kannada Brahmin Girl required.
Interested parties may contact: Mr.V.S.S.Mani: 99200038300/ 24143631

"ಶ್ರೇಷ್ಠ ಹೊರನಾಡ ಕನ್ನಡಿಗ" ಪ್ರಶಸ್ತಿಗೆ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಆಯ್ಕೆ

ಸರ್ವೋಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಾಧೀಶರಾದ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ಅವರನ್ನು 'ದೆಹಲಿ ಕನ್ನಡಿಗ' ಪತ್ರಿಕೆ ಸ್ಥಾಪಿಸಿರುವ ಈ ಸಾಲಿನ ಪ್ರತಿಷ್ಠಿತ 'ಶ್ರೇಷ್ಠ ಹೊರನಾಡ ಕನ್ನಡಿಗ' ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಶ್ರೀಕೃಷ್ಣ ಅವರು ಸಮಾಜಕ್ಕೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಉನ್ನತ ಸಮಿತಿ ಈ ಪ್ರಶಸ್ತಿಗೆ ಶ್ರೀಕೃಷ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಾಮಗ ಅವರು ತಿಳಿಸಿದರು. ದಿಲ್ಲಿಯಲ್ಲಿ ಎಪ್ರಿಲ್ 7ರಂದು ನಡೆಯಲಿರುವ 29ನೇ ರಾಷ್ಟ್ರೀಯ ಕನ್ನಡ ಸಮ್ಮೇಳನದಲ್ಲಿ ಶ್ರೀಕೃಷ್ಣ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಮುಂಬಯಿಯಲ್ಲಿ ಸಂಗೀತ ನೃತ್ಯ ತಾಳವಾದ್ಯ ಪರೀಕ್ಷಾಕೇಂದ್ರ

ಸಂಗೀತ-ನೃತ್ಯ ಮತ್ತು ತಾಳವಾದ್ಯ ಪರೀಕ್ಷಾ ಕೇಂದ್ರವನ್ನು ಮುಂಬಯಿಯಲ್ಲಿ ನಡೆಸಲು ಕರ್ನಾಟಕ ಪ್ರೌಢ ಪರೀಕ್ಷಾ ಮಂಡಳಿ, ಬೆಂಗಳೂರು. ಒಪ್ಪಿ ಆದೇಶ ನೀಡಿದೆ. ಇದು ಎಸ್.ಎಸ್.ಎಲ್.ಸಿ. ಬೋರ್ಡಿನ ಇತಿಹಾಸದಲ್ಲಿ ಪ್ರಥಮ ದಾಖಲೆ. ಕಳೆದ ಎರಡು ವರ್ಷಗಳಿಂದ ಕನ್ನಡ ಸಾಹಿತ್ಯ ಪರಿಷತ್ತು – ಮಹಾರಾಷ್ಟ್ರ ಘಟಕವು ಮಾಡಿದ ಪ್ರಯತ್ನದಿಂದ ಈ ಸೌಲಭ್ಯವು ದೊರೆಯಿತು. ಇನ್ನು ಆಸಕ್ತ ವಿದ್ಯಾರ್ಥಿಗಳಿಗೆ ಪರೀಕ್ಷೆಗಾಗಿ ಬೆಂಗಳೂರಿಗೆ ಹೋಗುವ ಅವಶ್ಯಕತೆ ಇಲ್ಲ. ಪರೀಕ್ಷಾ ವ್ಯವಸ್ಥೆಯನ್ನು ಮುಂಬಯಿಯಲ್ಲಿ ಮಾಡಲಾಗುತ್ತಿದೆ. ಈ ಅವಕಾಶವನ್ನು ಒದಗಿಸಿ ಕೊಟ್ಟ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಗೆ ಕನ್ನಡ ಸಾಹಿತ್ಯ ಪರಿಷತ್ತು ಮಹಾರಾಷ್ಟ್ರ ಘಟಕದ ಅಧ್ಯಕ್ಷರಾದ ಎಚ್.ಬಿ.ಎಲ್.ರಾಯರು ಅಭಿನಂದನೆ ಮತ್ತು ಕೃತಜ್ಞತೆಯನ್ನು ವ್ಯಕ್ತ ಪಡಿಸಿದ್ದಾರೆ.

ಪರೀಕ್ಷಾ ಕೇಂದ್ರದ ವಿಳಾಸ:
The National Kannada
Educationa Society
Indulal D. Bhuva Marg Road
No. 9 A, Scheme 57
Wadala (West), Mumbai – 400 031

ವಿಜ್ಞಾನ ಪ್ರಪಂಚದ ಅಜ್ಞಾತ ಪ್ರಚಂಡೆಯರು

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ನೆನಪಿಗೆ

[''ಮಹಿಳೆಯರು ಏನನ್ನೇ ಮಾಡಿದರೂ, ಪುರುಷರಿಗಿಂತ ಅರ್ಧದಷ್ಟು ಚೆನ್ನಾಗಿ ಮಾಡಿದ್ದೇವೆ ಎಂದೆನಿಸಿಕೊಳ್ಳಲೂ, ಅವರಿಗಿಂತ ಎರಡರಷ್ಟು ಚೆನ್ನಾಗಿ ಮಾಡಬೇಕು. ಅದೃಷ್ಟವಶಾತ್, ಇದೇನೂ ಕಷ್ಟವಲ್ಲ'' - ಷಾರ್ಲಟ್ ವ್ಹಿಟನ್]



ರಾಸಲಿಂಡ್ ಫ್ರ್ಯಾಂಕ್ಲಿನ್
(1920-1958)

ನೊಬೆಲ್ ಪ್ರಶಸ್ತಿಯ ಮೂಲದಲ್ಲೇ ದ್ವಿವಿಕ್ರಮವನ್ನು ಸ್ಥಾಪಿಸಿ, ಆ ಹೆಸರಿಗೇ ಲೋಕೋತ್ತರ ಘನತೆ - ಗೌರವಗಳನ್ನು ತಂದುಕೊಟ್ಟವರು. ಆದ್ಯ ವೈಜ್ಞಾನಿಕೆ ''ಮೇರಿ ಕ್ಯೂರಿ'' ಆದರೆ, ತದನಂತರದ ಅನೇಕ ಮಹೋನ್ನತ ವಿಜ್ಞಾನ ಸಾಧಕಿಯರು ಪ್ರಖ್ಯಾತರಾಗುವುದಿರಲಿ, ಕನಿಷ್ಠ ಗಮನವನ್ನೂ ಗಳಿಸದೆ, ಗುಟ್ಟಾಗಿ ಗತಿಸಿಹೋದುದು ಇತಿಹಾಸದ ಒಂದು ದುರಂತ. ಉದಾಹರಣೆಗಾಗಿ, ಮುಖ್ಯ ಜೀವರಾಸಾಯನಿಕ ದ್ರವ್ಯಗಳ ಸ್ವರೂಪನಿರ್ಣಯದಲ್ಲಿ ಕ್ಷ-ಕಿರಣ ತಂತ್ರಗಳ ಅಳವಡಿಕೆಗಾಗಿ 1964ರ ರಸಾಯನಶಾಸ್ತ್ರ ನೊಬೆಲ್ ಪಡೆದ, ಮತ್ತು ವಿಜ್ಞಾನ ಹಾಗೂ ಜಾಗತಿಕ ವಿದ್ಯಮಾನ ಕುರಿತಿ ಐತಿಹಾಸಿಕ ಪಗ್ವಾಷ್ ವಿಚಾರಗೋಷ್ಠಿಗಳಲ್ಲಿ ಕೇಂದ್ರಶಕ್ತಿಯಾಗಿದ್ದ 'ಡೋರತಿ ಹಾಡ್ಜ್‌ಕಿನ್' ಅವರ ಹೆಸರು ಎಷ್ಟು ಪರಿಚಿತವಾಗಿದೆ? ಅಂತೆಯೇ, ''ಮರೀಆ -ಗಪರ್ಟ್‌ಮೇಅರ್'' ಎಂದರೆ ಯಾರೆಂಬುದನ್ನು ತಿಳಿಯಲಾದರೂ ಅದೆಷ್ಟು ಮಂದಿ ಲಕ್ಷಿಸಿದ್ದಾರು? (ಪರಮಾಣು ಕವಚ ರಚನೆ ಕುರಿತ ಫಲಿತಾಂಶಗಳಿಗಾಗಿ ಈಕೆ 1963ರ ಭೌತಶಾಸ್ತ್ರ ನೊಬೆಲ್‌ನ ಸಹವಿಜೇತರಾದರು. ಮತ್ತು ಇಂದಿಗೂ, ಮೇರಿ ಕ್ಯೂರಿ ತರುವಾಯದ 'ಜಗದೇಕ ಭೌತಶಾಸ್ತ್ರ ನೊಬೆಲ್ ಮಹಿಳೆ' ಎಂಬ ಪ್ರತಿಷ್ಠೆಯನ್ನುಳಿಸಿಕೊಂಡಿದ್ದಾರೆ.)

'ಅಮೆರಿಕದ ಮೊಟ್ಟಮೊದಲ ನೊಬೆಲ್ ಮಹಿಳೆ' (ಗ್ಲೈಕಜನ್‌ನ ಶೀಘ್ರ ಪರಿವರ್ತನಾ ಮಾರ್ಗವನ್ನು ಗುರುತಿಸಿದ್ದಕ್ಕಾಗಿ), ಮತ್ತು ನೊಬೆಲ್ ಕೀರ್ತಿಮಂಟಪದಲ್ಲಿ ಪ್ರವೇಶಗೌರವ ಪಡೆದ 'ಪ್ರಪ್ರಥಮ ಮಹಿಳಾ ವೈದ್ಯಕೀಯ ವಿಜ್ಞಾನಿ' 'ಗರ್ಟೀ ಕೋರೀ', ನರ ಬೆಳವಣಿಗೆಯ ಧಾತುವನ್ನು ಕಂಡುಹಿಡಿದುದಕ್ಕಾಗಿ 1986ರ ವೈದ್ಯಕೀಯ ನೊಬೆಲ್ ಸನ್ಮಾನಕ್ಕೆ ಸಹಭಾಜನರಾಗಿ, ನೊಬೆಲ್ ಗಣ್ಯರ ಸರಣಿಯಲ್ಲಿಯೇ ಅತ್ಯಂತ ದೀರ್ಘಾಯುಷಿಯಾಗಿ ಇನ್ನೇನು 102ನೇ ಹುಟ್ಟುಹಬ್ಬವನ್ನು ಆಚರಿಸಲಿರುವ ಇಟ್ಲೀಯ ನರವಿಜ್ಞಾನ ತಜ್ಞೆ, ವಿಜ್ಞಾನವೃದ್ಧೆ ''ರೀಟಾ ಲೀವಿ - ಮಾಂಟ್ಲ್‌ಚೀನಿ'' - ಇವರಂಥವರನ್ನು ಕುರಿತೂ ಮೇಲಿನ ವಿಷಮ ಪ್ರಶ್ನೆಗಳನ್ನೇ ಮತ್ತೆ ಕೇಳಬಹುದು.

ವಿಜ್ಞಾನ ಧುರೀಣೆಯರು ಅಪ್ರಸಿದ್ಧರಾಗಿ ಉಳಿದರೇಕೆ ಎಂದೊಡನೆ ತಲೆಯೆತ್ತುವ ಒಂದು ಗಂಭೀರ ಪ್ರಶ್ನೆಯೆಂದರೆ, ಪದವಿ - ಪದಕಗಳನ್ನು, ಪ್ರಶಸ್ತಿ - ಪ್ರಶಂಸೆಗಳನ್ನು ನೀಡುವು ದರಲ್ಲಿರುವ ಸ್ತ್ರೀ ವಿರೋಧಿ ವೃತ್ತಿ ಧೋರಣೆಯನ್ನು ಕುರಿತದ್ದು. ವಾಸ್ತವವಾಗಿ, ನೊಬೆಲ್ ಬಿರುದಾಂಕಿತೆಯರಾಗಿರಲಿ, ಬಿಡಲಿ ತಾವು ಸ್ತ್ರೀಯರಾಗಿರುವ ಒಂದೇ ಜನ್ಮಜಾತ ಕಾರಣದಿಂದಾಗಿ, ಕಾಲಗತಿಯುದ್ದಕ್ಕೂ, ಎಲ್ಲ ಪ್ರತಿಭಾನ್ವಿತ ವಿಜ್ಞಾನವಂತೆಯರೂ, ಅವರವರ ವೃತ್ತಿ ಕ್ಷೇತ್ರವನ್ನು ಆಳುವ ಮಹಾಸ್ವಾಮಿಗಳ ಕೈಯಲ್ಲಿ ಒಂದಲ್ಲ ಇನ್ನೊಂದು ರೀತಿಯ ಅನಾದರ ಅನ್ಯಾಯ, ಅಪಹಾಸ್ಯ - ಅಪಮಾನ, ಹಾಗೂ ಕಿರುಕುಳ - ಕ್ರೌರ್ಯಗಳಿಗೆ ತುತ್ತಾಗುತ್ತಲೇ ಬಂದಿದ್ದಾರೆ. ಹೀಗಾಗಿ, 1901ರಲ್ಲೇ ಪ್ರಾರಂಭವಾದ ವಿಜ್ಞಾನ ನೊಬೆಲ್ ಶ್ರೇಣಿಯಲ್ಲಿ ಈವರೆವಿಗೂ ಕೇವಲ 16 ಸ್ತ್ರೀಯರು ನೋಡಸಿಗುತ್ತಾರೆಂಬುದು ಅಷ್ಟೇನೂ ಆಶ್ಚರ್ಯಾಸ್ಪದವಾಗದು.

ಈ ಸನ್ನಿವೇಶದಲ್ಲಿ ನಾಲ್ಕು ಸಾರ್ವಕಾಲಿಕ ಶ್ರೇಷ್ಠ ವಿಜ್ಞಾನವೇತ್ತೆಯರನ್ನು ವಿಶೇಷವಾಗಿ ಪ್ರಸ್ತಾಪಿಸುವುದು ಉಚಿತವೆನಿಸುತ್ತದೆ. ವಿಜ್ಞಾನವಲಯದಲ್ಲಿ ಜನಶ್ರುತವಾಗಿರುವ ಆರೋಪಗಳಂತೆ, ಈ ನಾಲ್ವರಿಗೂ ಸಲ್ಲಬೇಕಿದ್ದ ನೊಬೆಲ್ ಹಿರಿಮೆ- ಗರಿಮೆಗಳ ಹಕ್ಕುಪಾಲವನ್ನು, ಅವರದು 'ಸ್ತ್ರೀಜಾತಿ' ಎಂಬ ಒಂದೇ 'ಕಾರಣ'ದಿಂದ ಅವರಿಗೆ ನಿರಾಕರಿಸಲಾಯಿತು. ಈ ವಿಷಾದನೀಯ ಪಂಕ್ತಿಯಲ್ಲಿ ಬಹು ಪ್ರಕಟಿತ, ಪ್ರಚಲಿತ ಪ್ರಸಂಗವು ಬ್ರಿಟಿಷ್ ಆಣವಿಕ ಜೀವಭೌತಶಾಸ್ತ್ರವಿದೆ ಮತ್ತು ಕ್ಷ- ಕಿರಣ ಸ್ಪಟಿಕ ವಿಜ್ಞಾನಿ 'ರಾಸಲಿಂಡ್ ಫ್ರ್ಯಾಂಕ್ಲಿನ್' (1920-1958) ಅವರನ್ನು ಕುರಿತದ್ದಾಗಿದೆ. ಡಿ.ಎನ್.ಎ., ಆರ್.ಎನ್.ಎ., ವಿಷಾಣುಗಳು, ಕಲ್ಲಿದ್ದಲು, ಗ್ರಾಫೈಟ್ ಇಂಥ ವಸ್ತುಗಳ ಆಣವಿಕ ವಿನ್ಯಾಸದ ಮರ್ಮವನ್ನು ಭೇದಿಸುವುದರಲ್ಲಿ ಕ್ರಾಂತಿಕಾರಿ ಕಾಣ್ಕೆ - ಕಾಣಿಕೆಗಳನ್ನು ಕೊಟ್ಟು, ಸಹಕರ್ಮಿ ಪುರುಷರ ನೊಬೆಲ್ ಬಹುಮಾನದಲ್ಲಿ ಭಾಗಿಯಾಗುವುದರಿಂದ ಮಾತ್ರ ವಂಚಿತರಾದ ಇವರು ' ಡಿ.ಎನ್.ಎ.ಯ ಗುಪ್ತ ಮಹಿಳೆ' ಎಂದೇ ಕೀರ್ತಿಶೇಷರಾದರು.

''ನಮ್ಮದೇ ಆದ ಮೇರಿ ಕ್ಯೂರಿ'' ಎಂದು ಜಗದ್ವಂದ್ಯ ಐನ್.ಸ್ಟೈನ್ ಮಹೋದರಿಂದಲೇ ವಂದಿಸಲ್ಪಟ್ಟು. ಅಗ್ರಮಾನ್ಯ ವಿಜ್ಞಾನಿ ಆಟೋಹಾನ್ ಅವರ ಸಹಯೋಗದೊಡನೆ ಪರಮಾಣು ವಿಭಜನೆಯನ್ನು ಸಾಧಿಸಿದ ಆಸ್ಟ್ರಿಯ - ಸಂಜಾತ ಸ್ವೀಡಿಷ್ ಭೌತಸಿದ್ಧಾಂತವರೇಯಿ 'ಲೀಜ ಮೈಟ್ನರ್' ಅವರನ್ನೂ ನೊಬೆಲ್ ವಿವಾದ ಸಾಹಿತ್ಯದಲ್ಲಿ ''ಲಿಂಗಭೇದಭಾವದ ಬಲಿಪಶು'' ಎಂದು ಎತ್ತಿತೋರಲಾಗುತ್ತದೆ. ಇದೆ ಕಾರಣದಿಂದಾಗಿ ನೊಬೆಲ್ ಮನ್ನಣೆಗೆ ಅತಿಶಿಯವಾದ ಅರ್ಹತೆಯಿದ್ದೂ ಪಾತ್ರರಾಗದೇ ಹೊರಗುಳಿದ ಇನ್ನಿಬ್ಬರು ವಿಜ್ಞಾನವರಿಷ್ಠೆಯರೆಂದರೆ : ' ನವ್ಯಭೌತವಿಜ್ಞಾನಾಗ್ರೇಸರೆ' ಮತ್ತು ''ಚೀನೀ ಮೇರಿ ಕ್ಯೂರಿ'' ಎಂದು ಶ್ಲಾಘಿಸಲ್ಪಟ್ಟು, ಲೋಕವಿಶ್ರುತ ಮ್ಯಾನ್ ಹ್ಯಾಟ್ನ್ ಯೋಜನೆಯ ಧುರಂಧರೆಯಾಗಿ, ವಿಶ್ವದ ವಿರಾಡ್ರೂಪದ ಬಗ್ಗೆ ಆವರೆಗಿದ್ದ ಮೂಲನಕ್ಷೆಯನ್ನೇ ಬುಡಮೇಲಾಗಿಸಿದ,

✍ ಎಸ್.ಜಿ. ಸೀತಾರಾಮ್.

ಚೀನೀ ಅಮೆರಿಕೀ ಭೌತವೈಜ್ಞಾನಿಕೆ ''ಚೆನ್ - ಷುಂಗ್ ವು'' (1912-1997) ಮತ್ತು ನೊಬೆಲ್ -ವಿಭೂಷಿತ ಪಲ್ಸಾರ್ ಅನ್ವೇಷಣೆಯಲ್ಲಿ ಮೇಲ್ವಿಚಾರಕ ಆ್ಯಂಟನಿ ಹ್ಯೂಯಿಷ್ ಅವರ ಸಹಭಾಗಿ, ಬ್ರಿಟಿಷ್ ರೇಡಿಯೋ ಖಭೌತ ಶಾಸ್ತ್ರಸಂಪನ್ನೆ ''ಜಾಸಲಿನ್ ಬರ್ನೆಲ್'' (1943)

ಬಹುಪ್ರತಿಷ್ಠಿತ ''ನ್ಯೂ ಸಯನ್ಟಿಸ್ಟ್'' ವಾರಪತ್ರಿಕೆಯು 2009ರಲ್ಲಿ ಮೇರಿ ಕ್ಯೂರಿ ಅವರನ್ನು ''ಚರಿತ್ರೆಯ ಅತ್ಯಂತ ಪ್ರೇರಣಾತ್ಮಕ ಮಹಿಳಾ ವಿಜ್ಞಾನಿ'' ಎಂದು ಘೋಷಿಸಿದಾಗ (ನ್ಯಾಯವಾಗಿ, 'ಮಹಿಳಾ' ಎಂಬ ಲಿಂಗಸೂಚಿ ಪೂರ್ವ ಪ್ರತ್ಯಯವಿಲ್ಲದೆ, ನಿರ್ವಿಶೇಷವಾಗಿ, ''ಚರಿತ್ರೆಯ ಅತ್ಯಂತ ಪ್ರೇರಣಾತ್ಮಕ ವಿಜ್ಞಾನಿ'' ಎಂದೇ ಈ ವಿಜ್ಞಾನ ಯೋಗಿಯನ್ನು ಕೀರ್ತಿಸಬೇಕಿತ್ತು), ಅದರ ''ಮೊದಲ ಹತ್ತು'' ಪಟ್ಟಿಯಲ್ಲಿ, ಪೂರ್ವೋಕ್ತ ವ್ಯಕ್ತಿಗಳ ಜೊತೆಗೆ ಇನ್ನೂ ಹಲವು ವಿಜ್ಞಾನಘನರು ಸೇರಿದ್ದರು: ''ಅ್ಯಲೆಕ್ಸ್ಯಾಂಡ್ರಿಯದ ಹೈಪೇಶಾ''' (ಗಣಿತ ಕೋವಿದೆ), ''ಏಯ್ಡಾ ಕಿಂಗ್'' (ಪ್ರಪಂಚದ ಜ್ಯೇಷ್ಠ ಮಹಿಳಾ ಪ್ರೋಗ್ರ್ಯಾಮರ್ ಬ್ಯಾಬೇಜ್‌ನ 'ಆ್ಯನಲಿಟಿಕಲ್ ಎಂಜಿನ್' ಕಾರ್ಯದಲ್ಲಿ ಪ್ರಧಾನ ಪಾತ್ರಧಾರಿಯಾದ ಬ್ರಿಟಿಷ್ ಗಮಿತ ಪರಿಣತೆ), ''ಮೇರಿ-ಸೋಫಿ ಜರ್ಮೇನ್'' ('ಸ್ಥಿತಿ ಸ್ಥಾಪಕ ಸಿದ್ಧಾಂತ' ಖ್ಯಾತಿಯ ಪ್ರೆಂಚ್ ಗಣಿತಜ್ಞೆ), ''ರೇಚಲ್ ಕಾರ್ಸನ್'' (ಡಿ.ಡಿ.ಟಿ. ಮತ್ತಿತರ ಆತಂಕಕಾರಿ ಕೀಟಾಣು ನಾಶಕಗಳ ನಿಷೇಧಕ್ಕೆ ಕಾರಣವಾದ 'ಸೈಲಂಟ್ ಸ್ಪ್ರಿಂಗ್' ಎಂಬ ಶಂಖನಾದಕರ ಪುಸ್ತಕವನ್ನು ವಿರಚಿಸಿದ ಅಮೆರಿಕೀ ಸಾಗರಿಕ ಜೀವವಿಜ್ಞಾನಿ), ಮತ್ತು ಜೇನ್ ಗುಡಾಲ್ ('ಚಿಂಪಾಜಿ ಮಾನವ'ನೊಡನೆ ಸಂಭಾಷಿಸು

ಲೀಜ ಮೈಟ್ನರ್

ಈ ಪ್ರಾಣಿವರ್ತನ ವೈಜ್ಞಾನಿಕೆಯ ಬಗ್ಗೆ ಕೇಳದವರೂ ಉಂಟೇ?)

ಈ ಪಟ್ಟಿಯ ಮೇಲೆ ಕಣ್ಣುರುಳಿಸುವಾಗ, ಇನ್ನೂ ಚರಿತ್ರಾರ್ಹ ವಿಜ್ಞಾನವಿಶಾರದೆಯರು ನಮ್ಮ ಸ್ಮೃತಿಪಟಲವನ್ನು ಥಟ್ಟನೆ ತಟ್ಟುತ್ತಾರೆ. ಸಾಪೇಕ್ಷ ಸಿದ್ಧಾಂತ ಮತ್ತು ಅಮೂರ್ತ ಬೀಜಗಣಿತದ ಬೆಳವಣಿಗೆಗೆ ಪ್ರಾಣಾಧಾರ ಪೋಷಕಾಂಶಗಳನ್ನಿತ್ತ ಅತ್ಯುತ್ಕೃಷ್ಟ ಗಣಿತ ಪಂಡಿತೆ 'ಎಮಿ ನಟರ್' (1935-1935); ಪರ್ನಿಷಸ್ ಅನೀಮಿಯಾ ಚಿಕಿತ್ಸೆ ಕುರಿತ ಪರಿಶೋಧನೆಯಲ್ಲಿ ಪಾಲ್ಗೊಂಡಿದ್ದೂ, ಅದರ ನೊಬೆಲ್ ವೈಭವವದಲ್ಲಿ ಮಾತ್ರ ಸಹಾಧ್ಯಾಯಿ ಜಾರ್ಜ್ ವಿಪ್ಲ್‌ರೊಡನೆ ಪಾಲ್ಗೊಳ್ಳಲಾಗದೇ ಹೋಗಬೇಕಾದ ರೋಗ ಲಕ್ಷಣ ವಿಜ್ಞಾನ ವಿದುಷಿ ''ಫ್ರೀಡ ರಾಬ್ ಶೆಲ್ಡ್ - ರಾಬಿನ್ಸ್'' (1893-1968); ಮತ್ತು ರಾಯಲ್ ಸೊಸೈಟಿಯ ಪ್ರಥಮ ಮಹಿಳಾ ಫೆಲೋ, 'ಬ್ರಿಟಿಷ್ ಅಸೋಸಿಯೇಷನ್ ಪಾರ್ ದ ಅಡ್ವಾನ್ಸ್‌ಮೆಂಟ್ ಆಫ್ ಸಯನ್ಸ್' ಸಂಸ್ಥೆಯ ಪ್ರಪ್ರಥಮ ಅಧ್ಯಕ್ಷೆ, ಮೊದಲಾದ 'ಪ್ರಥಮ'ಗಳ ಮಾಲೆಯಿಂದ, ಜೊತೆಗೆ ಬಹುಮೂಲ್ಯ 'ಡೇವಿ ಪದಕ'ದಿಂದ ಅಲಂಕೃತಳಾಗಿದ್ದ ಸ್ಫಟಿಕ ವಿಜ್ಞಾನೋತ್ತಮೆ 'ಕ್ಯಾತ್ಲೀನ್ ಲಾನ್ಸ್‌ಡೇಲ್' (1903-1971)

ಸ್ತ್ರೀ -ಪ್ರತಿರೋಧಿ ಹೃದಯಕಾರ್ಪಣ್ಯವು ತುಚ್ಛ ಮಟ್ಟದಲ್ಲಿ ಮುಂದುವರೆದ ರಾಷ್ಟ್ರಗಳಲ್ಲೂ ಬೇರೂರಿತ್ತು. ಹಾಗೂ ಮಹಾನ್ ಪುರುಷ ವಿಜ್ಞಾನಿಗಳೂ ಈ ಅಲ್ಪತೆಯಿಂದ ಹೊರತಾಗಿರಲಿಲ್ಲ ಎಂಬುದನ್ನು ಈ ದಿನಗಳಲ್ಲಿ ಒಪ್ಪಿಕೊಳ್ಳುವುದು ಸುಲಭವಾಗದು. ಆದರೆ, ನೆಬೆಲ್ ಪ್ರಶಸ್ತಿ ಪ್ರದಾನ ಉಚ್ಚಮಟ್ಟದಲ್ಲಿರಲಿ, ಇತ್ತೀಚಿನವರೆಗೂ ಪ್ರಾಥಮಿಕ ಶಾಲಾ ಮಟ್ಟದಲ್ಲೇ, ಬಾಲಕಿಯರಲ್ಲಿರುವ ವಿಜ್ಞಾನಚೇತನವನ್ನು ಆನಂದಿಸುವ ಬದಲು, ಕೂಡಲೆ ನಂದಿಸಲಾಗುತ್ತತ್ತು ಎಂಬುದೊಂದು ಕಟುಸತ್ಯ ಸಂಗತಿ.

ಶ್ರೀಮತಿಯರು ವಿಜ್ಞಾನಮತಿಯರಾದ ಮಾತ್ರಕ್ಕೇ, ಎಲ್ಲಿ 'ವಿಪರೀತಮತಿ'ಗಳೂ ಆಗಿಹೋದರೋ ಎಂಬ ಸಂದೇಶಮತಿಯು ಅದು ಪುರುಷ ಪರಿಣತಮತಿ ಗಳನ್ನಾವರಿಸಿತ್ತು. ಆದರೆ, ಸಮಾಧಾನವೆಂದರೆ, ನಾವೀಗ ಆ ಅಂಧಕಾಲದಿಂದ ದೂರದೂರ ಸಾಗಿಹೋಗುತ್ತಿದ್ದೇವೆ. ಇಂದು ವಿಜ್ಞಾನ ದಿಗಂತದಲ್ಲಿ ಮಹಿಳೆಯರು ಒಂದು ವಿಶಿಷ್ಟ, ವ್ಯಾಪಕ ಶಕ್ತಿಯಾಗಿ ಹೊರಹೊಮ್ಮಿದ್ದಾರೆ, ವೈಜ್ಞಾನಿಕ ಬೌದ್ಧಿಕತೆ - ಸೃಜನಶೀಲತೆಗಳ ಮುಂಚೂಣಿಯಲ್ಲೇ ನಿಂತು ಮಿಂಚುತ್ತಿದ್ದಾರೆ. 2009ರ ನೊಬೆಲ್ ಶಿಖರಾಗ್ರವನ್ನು ಮೆಟ್ಟಿ ಮೆರೆದ ಮೂವರು ವಿಜ್ಞಾನಧೀರೆಯರಿಗಿಂತಲೂ ಉತ್ತಮ ನಿದರ್ಶನ ಇದಕ್ಕೆ ಬೇಕಿಲ್ಲ: ರೈಬಸೋಮ್‌ನಾಕೃತಿ ಮತ್ತು ಪ್ರಕೃತಿಗಳನ್ನು ಕುರಿತು ತನಿಖೆಗಾಗಿ ಥಾಮಸ್ ಸ್ಟೈಲ್ಟ್‌ಜ್ ಮತ್ತು ಭಾರತದ ವೆಂಕಟ್ರಾಮನ್ - ರಾಮಕೃಷ್ಣನ್ ಅವರೊಡನೆ ರಸಾಯನ ವಿಜ್ಞಾನ ಪಾರಿತೋಷಕವನ್ನು ಹಂಚಿಕೊಂಡ ಇಸ್ರೇಲಿ 'ಏಯ್ಡಾ ಜೋನ್ಯಾಟ್' ಹಾಗೂ ಟೆಲಮೀರ್ ಮತ್ತು ಟೆಲಾಮರೇಶ್‌ಗಳ ಮೂಲಕ ಕ್ರೋಮಸೋಮ್ ಸಂರಕ್ಷಣೆ ವಿಷಯದ ಸಂಶೋಧನೆ ಜ್ಯಾಕ್ ಜಾಸ್ಟ್ಯಾಕ್ ಅವರೊಡನೆ ವೈದ್ಯ ಶಾಸ್ತ್ರೀಯ ಪಾರಿತೋಷಕವನ್ನು ಹಂಚಿಕೊಂಡ ಅಮೆರಿಕೀ ಜೋಡಿ ''ಇಲಿಜಬತ್ ಬ್ಲ್ಯಾಕ್‌ಬರ್ನ್ ಕ್ಯಾರಲಿನ್ ಗ್ರೈಡರ್''

ತಮ್ಮ ಹಾದಿಯಲ್ಲಿ ಒಡ್ಡಿದ್ದ ಪೆಡಂಭೂತ ತೊಡರು -ತೊಂದರೆಗಳನ್ನೂ, 'ಅಸಮಭಾಜಕವೃತ್ತ'ದ ಸರಹದ್ದು ಸವಾಲುಗಳನ್ನೂ ಒದ್ದೆದ್ದು, ತಮ್ಮ ಉಜ್ವಲ ಆದರ್ಶ, ಅಲೌಕಿಕ ಧೀಶಕ್ತಿ, ತಪಸ್ಸಿನಂಥ ತನ್ಮಯತೆ ಮತ್ತು ಸೃಷ್ಟ್ಯಾತ್ಮಕ - ಸಾಹಸಶೀಲ ಕೃಷಿಯಿಂದ, ಜ್ಞಾನವಿಕಾಸಕ್ಕೂ, ಸಮಾಜೋನ್ನತಿಗೂ ಚಿರಸ್ಥಾಯಿ ಕಾಣಿಕೆಗಳನ್ನಿತ್ತು ನಿರ್ಗಮಿಸಿದ ನಿನ್ನೆಯ ವಿಜ್ಞಾನದಿಗ್ಗಜೆಯರ ಜೀವನ ಸಾಧನೆಗಳಿಂದ ಇಂದು ನಾವೆಲ್ಲರೂ ಸ್ಫೂರ್ತಿಯನ್ನು ಸೆಳೆಯುವುದು ಅರ್ಥಪೂರ್ಣವೂ, ಅತ್ಯವಶ್ಯವೂ ಆಗಿದೆ. ಅವರ ಸಂಕೀರ್ಣ ವಿದ್ವಚ್ಛಕ್ತಿಯು ನಮ್ಮ ಅಧ್ಯಯನ ಸಂಶೋಧನೆಗಳ ದಿಕ್ಕನ್ನು ಅತಿತಂತ್ರಜ್ಞಾನದಿಂದ ಶುದ್ಧವಿಜ್ಞಾನಮಾರ್ಗದೆಡೆಗೂ, ನಮ್ಮ ಮನೋಧರ್ಮ ವನ್ನು ಪಕ್ಷಪಾತಿತ್ವದಿಂದ ಗುಣಗ್ರಾಹಿತ್ವ ದೆಡೆಗೂ, ನಮ್ಮ ಅಂತಃಸತ್ತ್ವವನ್ನು ಅಜ್ಞಾನ - ತಮಸ್ಸಿನಿಂದ ವಿಜ್ಞಾನ - ಜ್ಯೋತಿಯೆಡೆಗೂ ಪರಿವರ್ತಿಸಬಲ್ಲದು ಎಂಬುದರಲ್ಲಿ ಅನುಮಾನವಿಲ್ಲ. □

ಕಣ್ಣು

ಮುಸ್ಸಂಜೆ ಮುಂಜಾವು
ಒಂದು ಇರುಳು ಒಂದು ಹಗಲು
ಹರಿಯುವುವು ಎಳೆಗಳು
ಎಲ್ಲೊ ಬಿದ್ದ ಗರಿಗಳು
ಆಸೆ ಮೂಡಿ ಕನಸು ತೂರಿ
ಹಗುರ ಹಾರಿ ಬರುವುವು
ಒಂದು ಕಡ್ಡಿ ಒಂದು ಗರಿಕೆ
ಒಂದು ಹುಲ್ಲು ಒಂದು ಕುಣಿಕೆ
ಆಯ್ದು ತಂದು ಕಟ್ಟಿ ಗೂಡು
ಇಟ್ಟುಬಿಟ್ಟ ತತ್ತಿ ಜೋರು
ಇದ್ದುದಂತೆ ಇರುವುದಿಲ್ಲ
ಯಾವುದೂ ಇದ್ದಂತೆಯೆ
ಚಿಟಿಲಿ ಕುಕಿಲ ಸದ್ದು ಇಲ್ಲ
ಯಾವ ಹಾವೊ ಯಾವ ಬೆಕ್ಕೊ
ಹಗಲು ಇರುಳು ಒಂದೆಯಾನ
ಹಾಯಿ ಪಟವೆ ಹರಿದ ಗಾನ

ಬೆಳ್ದಿಂಗಳು ಕದ್ದಿಂಗಳು
ಅರಿಯದಾದ ಪಾಕಶಾಲೆ
ಹಗಲಿರುಳೂ ರಾಗವೊಂದೆ ?

- ಶ್ರೀಧರ ಪಿಸ್ಸೆ

ಮೈಸೂರು ಅಸೋಸಿಯೇಶನ್ ಮುಂಬಯಿ ಹಾಗೂ ಕರ್ನಾಟಕ ಸಂಘ ಮುಂಬಯಿ ಮತ್ತು ಕನ್ನಡ ಕಲಾಕೇಂದ್ರ ಜತೆಗೂಡಿ ಅರ್ಪಿಸಿದ ಫೆಬ್ರವರಿ 10, 11 ಹಾಗೂ 12 ರ ಸಂಜೆ ''ರಂಗಾಯಣ'' ಮೈಸೂರು ತಂಡದ ಕನ್ನಡ ನಾಟಕೋತ್ಸವ - ''ಶೂದ್ರ ತಪಸ್ವಿ'' ನಾಟಕದ ದೃಶ್ಯಗಳು.

(ಮುಂದುವರೆದ ಭಾಗ)

ದಾಸಾಗ್ರೇಸರ ಶ್ರೀ ಕನಕದಾಸರ ಮುಂಡಿಗೆಗಳು

ಕನಕದಾಸರ ಮುಂಡಿಗೆ – 3

ರಮಣಿ ಕೇಳಲೆ ಮೋಹನ ಶುಭಕಾಯನ
ಅಮರವಂದಿತ ಶತಕೋಟಿ ತೇಜನ॥
ವಿಮಲಚರಿತ್ರದಿ ಮೆರೆವ ಶ್ರೀಕೃಷ್ಣನ
ಕಮಲವದನೆ ನೀ ತೋರೆಲೆ ರಮಣಿ ॥

ಬಾಯೊಳಗಿಹಳ[1] ಗಂಡನ[2] ನಿಜತಮ್ಮನ[3]
ತಾಯ[4] ಪಿತನ[5] ಮಡದಿಯ[6] ಧರಿಸಿದನ[7] ।
ಸ್ತ್ರೀಯಳ[8] ಸುತನ[9] ಕೈಯಲಿ ಶಾಪಪಡೆದನ[10]
ದಾಯಾದ್ಯನ[11] ಮಗನ[12] ॥1॥
ಸಾಯಕವದು[13] ತೀವ್ರದಿ ಬರುತಿರೆ ಕಂಡು
ಮಾಯಾಪತಿ[14] ಭೂಮಿಯನೊತ್ತಿ ತನ್ನಯ
ಬೀಯಗನ[15] ತಲೆಕಾಯಿದಂಥ
ರಾಯನ ಕರೆದು ತೋರೇ ರಮಣಿ ॥2॥

ನಾಲಿಗೆಯೆರಡರವನ[16] ಭುಂಜಿಸುವನ[17]
ಮೇಲೇರಿ ಬಹನ[18] ತಂದೆಯು[19] ಇಹ
ಗಿರಿಯನು[20]
ಲೀಲೆಯಿಂದಲಿ ಕಿತ್ತೆತ್ತಿದ ಧೀರನ[21]
ಕಾಳಗದಲಿ ಕೊಂದನ[22] ॥2॥

ಲೋಲ ಲೋಚನೆಯ[23] ಮಾತೆಯ[24]
ಪುತ್ರನ[25] ಣುಗನ[26]
ಮೇಲು ಶಕ್ತಿಗೆ[27] ಉರವನಾಂತು[28] ತನ್ನವರನ್ನ[29]
ಪಾಲಿಸಿದಂಥ ದಾತನಹದೇವನ ।
ಲೋಲೆ ನೀಕರೆದು ತೋರೆ ರಮಣಿ ॥4॥

ಉರಿಯೊಳು ಜನಿಸಿದ[30]ವನ ನಿಜ ತಂಗಿಯ[31]
ಸೆರಗ ಪಿಡಿದ ಖಳ[32] ನಣ್ಣನ[33] ತಂಗಿಯ[34]
ವರನ[35] ತಲೆಯನು ಕತ್ತರಿಸಿದ ಧೀರನ[36]
ಗುರು[37] ವಿನೊಳುದಿಸಿದನ[38] ॥5॥

ಶರವ[39] ತಪ್ಪಿಸಿ ತನ್ನದಾಸರ್ಗೆ[40] ಅನುದಿನ
ಕರೆದು ವರವ ನಿತ್ತು ಮನ್ನಿಸಿ ಸಲಹುವ
ಉರಗಗಿರಿ[41] ವೆಂಕಟಾದಿ ಕೇಶವನ
ಗರತಿ[42] ನೀ ಕರೆದು ತಾರೆ ರಮಣಿ ॥6॥

ಮುಂಡಿಗೆ ಬಿಡಿಸಿದಾಗ. . . . .
ಇದೊಂದು ರೀತಿಯಲ್ಲಿ ಪತಿ ಪತ್ನಿಯರ ಸಂಭಾಷಣೆಯಂತಿದೆ. ಕನಕದಾಸರೇ ತಮ್ಮ ಪತ್ನಿಯನ್ನು (ದಾಸರಿಗೆ ಪತ್ನಿಯಿದ್ದಳೇ ಎನ್ನುವುದು ತಿಳಿದಿಲ್ಲ!) ಸಾಕ್ಷಾತ್ ಭಗವಂತನನ್ನು ತೋರಿಸು ಎಂದು ಕೇಳುವ ರೀತಿ ಈ ಮುಂಡಿಗೆಯಲ್ಲಿದೆ.

1 ಬಾಯೊಳಗಿಹಳ=ಸರಸ್ವತಿ ; 2 ಗಂಡನ=ಬ್ರಹ್ಮ; 3 ನಿಜತಮ್ಮನ=ಮನ್ಮಥ ; 4 ತಾಯ=ಲಕ್ಷ್ಮಿ; 5 ಪಿತನ=ಸಮುದ್ರರಾಜ ; 6 ಮಡದಿ=ಗಂಗೆ ; 7 ಧರಿಸಿದನ=ಶಿವ ; 8 ಸ್ತ್ರೀಯಳ=ಪಾರ್ವತಿ ; 9 ಸುತನ=ಗಣಪತಿ ; 10 ಕೈಯಲಿ ಶಾಪ ಪಡೆದವನ=ಚಂದ್ರ; 11 ದಾಯಾದ್ಯ=ಸೂರ್ಯ ; 12 ಮಗನ=ಕರ್ಣ 13 ಸಾಯಕ=ಸರ್ಪಾಸ್ತ್ರ; 14 ಮಾಯಾಪತಿ=ಕೃಷ್ಣ; 15 ಬೀಯಗನ=ಅರ್ಜುನನ (ಅಭಿಮನ್ಯುವಿನ ತಂದೆ) 16 ನಾಲಿಗೆಯೆರಡರವನ=ಹಾವು; 17 ಭುಂಜಿಸುವ=ನವಿಲು; 18 ಮೇಲೇರಿಬಹನ=ಷಣ್ಮುಖ; 19 ತಂದೆಯ=ಈಶ್ವರ 20 ಗಿರಿಯನು=ಕೈಲಾಸ; 21 ಲೀಲೆಯಿಂದಲಿ ಕಿತ್ತೆತ್ತಿದ ಧೀರ=ರಾವಣ; 22 ಕಾಳಗದಲಿ ಕೊಂದನ=ರಾಮಚಂದ್ರ; 23 ಲೋಲ ಲೋಚನೆಯ=ಸೀತಾದೇವಿ; 24 ಮಾತೆ=ಭೂಮಿ; 25 ಪುತ್ರನ=ನರಕಾಸುರನ; 26 ಅಣುಗನ+ಭಗದತ್ತನ; 27 ಮೇಲು ಶಕ್ತಿಗೆ=ವರಾಹಾಸ್ತ್ರ; 28 ಉರವನಾಂತ=ಎದೆಯೊಡ್ಡಿ; 29 ತನ್ನವರನ್ನು=ಪಾಂಡವರನ್ನು ಪಾಲಿಸಿದ=ಶ್ರೀಕೃಷ್ಣ 30 ಉರಿಯೊಳು ಜನಿಸಿದವನ=ಧೃಷ್ಟದ್ಯುಮ್ನ 31 ನಿಜತಂಗಿಯ=ದ್ರೌಪದಿಯ; 32 ಸೆರಗಪಿಡಿದ ಖಳ=ದುಶ್ಯಾಸನ; 33 ಅಣ್ಣನ=ದುರ್ಯೋಧನ ; 34 ತಂಗಿ=ದುಶ್ಯಲೆ; 35 ವರನ=ಜಯದ್ರಥ ; 36 ತಲೆಯ ಕತ್ತರಿಸಿದ ಧೀರನ=ಅರ್ಜುನ; 37 ಗುರು=ದ್ರೋಣ; 38 ಉದಿಸಿದನ=ಅಶ್ವತ್ಥಾಮ; 39 ಶರವ=ನಾರಾಯಣಾಸ್ತ್ರ; 40 ತನ್ನದಾಸಗೆ=ಭಕ್ತರಾದ ಪಾಂಡವರಿಗೆ; ಸದಾ ಅನುಗ್ರಹಿಸುವ–ಕಾಪಾಡುವ; 41 ಉರಗಗಿರಿ=ಶೇಷಾಚಲ; 42 ಗರತಿ=ಆದಿಕೇಶವನ ಪತ್ನಿ ಲಕ್ಷ್ಮಿ.

ಇಲ್ಲಿ ದಾಸರು ಮೂರು ಮಹಾಭಾರತದ ಪ್ರಸಂಗಗಳನ್ನು ಮುಂಡಿಗೆ ರೂಪದಲ್ಲಿ ವಿವರಿಸುತ್ತಾರೆ.
1. ಕರ್ಣ ಪ್ರಯೋಗಿಸಿದ ಸರ್ಪಾಸ್ತ್ರವನ್ನು ಕೃಷ್ಣ ಹೇಗೆ ವ್ಯರ್ಥ ಮಾಡಿದ
2. ನರಕಾಸುರನ ಮಗ ಭಗದತ್ತ ಪ್ರಯೋಗಿಸಿದ ವರಾಹಾಸ್ತ್ರವನ್ನು ಹೇಗೆ ನುಂಗಿದ 3. ಅಶ್ವತ್ಥಾಮ ಬಿಟ್ಟ ನಾರಾಯಣಾಸ್ತ್ರವನ್ನು ತನ್ನೊಳಗಡಗಿಸಿ ಕೊಂಡದ್ದನ್ನು ಅನೇಕ ಸಂಬಂಧಗಳ ಮೂಲಕ ಪೋಣಿಸಿ ವರ್ಣಿಸುವ ರೀತಿ ಅತ್ಯದ್ಭುತ.

– ಶ್ರೀ. ಎಂ.ಎ.ಜಯರಾಮ ರಾವ್

ಮೈಸೂರು ಸಂಗೀತ ವಿದ್ಯಾಲಯದ ಶ್ರೀ ಪುರಂದರದಾಸರ ಶ್ರೀ ತ್ಯಾಗರಾಜರ ಆರಾಧನಾ ಮಹೋತ್ಸವ ಕಾರ್ಯಕ್ರಮದ ಸಂದರ್ಭದಲ್ಲಿ ಗಾನಕಲಾಭೂಷಣ ವಿದ್ವಾನ್ ಆರ್. ಕೆ. ಪದ್ಮನಾಭ ಅವರಿಗೆ ಸನ್ಮಾನ

ಚಿತಳೆ ಮಾಸ್ತರ್

ಮೂಲ ಲೇಖಕರ ಬಗ್ಗೆ: ದಿ. ಪು.ಲ.ದೇಶಪಾಂಡೆ (8 ನವೆಂಬರ್ 1919 –12 ಜೂನ್ 2000) ಮರಾಠಿ ಸಾಂಸ್ಕೃತಿಕ ಜಗತ್ತಿನ ಒಬ್ಬ ದಿಗ್ಗಜ. ಸಾಹಿತ್ಯ, ಸಂಗೀತ, ನಾಟಕ, ಸಿನಿಮಾ, ಅಭಿನಯ ಹೀಗೆ ಅನೇಕ ಪ್ರಕಾರಗಳಲ್ಲಿ ಕೈಯಾಡಿಸಿ ಸೈ ಎನ್ನಿಸಿಕೊಂಡವರು. ಇವರ ಕೃತಿಗಳು, ಅದರಲ್ಲಿಯೂ ಹಾಸ್ಯ ಸಾಹಿತ್ಯ, ಮರಾಠಿಗರ ಮನೆಮಾತು. ಇವರು ಜನಜೀವನದಿಂದ ಹೆಕ್ಕಿ ತೆಗೆದ ವ್ಯಕ್ತಿ ಚಿತ್ರಗಳು ಅನನ್ಯವಾದವುಗಳು. **"ಚಿತಳೆ ಮಾಸ್ತರ್"** ಅಂಥವುಗಳಲ್ಲಿ ಒಂದು. ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಗೆದ್ದ **"ವ್ಯಕ್ತಿ ಆಣಿ ವಲ್ಲಿ"** ಸಂಕಲನದಿಂದ ಇದನ್ನು **ಆರಿಸಲಾಗಿದೆ.**

ಪು. ಲ. ದೇಶಪಾಂಡೆ

ಕಾಲವೊಂದಿತ್ತು. ನಮ್ಮ ಊರಿನಲ್ಲಿ ಮಗುವನ್ನು ಎಳೆದೊಯ್ದು ಶಿಶುವಿಹಾರದಲ್ಲಿ ಬಿಟ್ಟು ಬಂದರೆ, ಆ ಮಗು ಮ್ಯಾಟ್ರಿಕ್ ಪಾಸು ಅಥವಾ ನಪಾಸು ಆಗುವವರೆಗೂ ಅದರಪ್ಪ ಅಮ್ಮ ಅದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. "ಹುಡುಗ ಚಿತಳೆ ಮಾಸ್ತರರ ಸುಪರ್ದಿನಲ್ಲಿ ಸುಖವಾಗಿದ್ದಾನೆ" ಅನ್ನುವುದು ಒಂದು ಸಾರ್ವತ್ರಿಕ ತಿಳುವಳಿಕೆಯಾಗಿತ್ತು. ಕಾಲ ವೊಂದಿತ್ತು ! ಹೌದು. ಈಗಿಲ್ಲ. ಈಗ ಕಾಲ ಬದಲಾಗಿದೆ. ಊರು ಬದಲಾಗಿದೆ. ಗೋಪಾಲಕೃಷ್ಣ ಗೋಖಲೆಯುವರ ಹೆಸರಿನಲ್ಲಿ ಶಾಲೆ ಪ್ರಾರಂಭವಾದರೂ, ಯಾರೂ ಅದನ್ನು ಗೋಖಲೆ ಸ್ಕೂಲು ಎಂದು ಕರೆದದ್ದಿಲ್ಲ; ಎಲ್ಲರ ಬಾಯಲ್ಲಿಯೂ ಅದು ಚಿತಳೆ ಮಾಸ್ತರರ ಶಾಲೆ. ವಾಸ್ತವವಾಗಿ ಚಿತಳೆ ಮಾಸ್ತರ್ ಶಾಲೆಯ ಸಂಸ್ಥಾಪಕರಲ್ಲ. ಆಡಳಿತ ಮಂಡಳಿಯ ಸದಸ್ಯರೂ ಅಲ್ಲ. ಅಷ್ಟೇ ಏಕೆ, ನಾನು ಮೂರನೆಯ ತರಗತಿಯಲ್ಲಿದ್ದಾಗ, ಅದೃಷ್ಟವಶಾತ್ ಹೆಡ್ ಮಾಸ್ತರ್ ಹುದ್ದೆ ಸಿಕ್ಕಿದರೂ, ಹದಿನೈದೇ ದಿನ ಆ ಪಟ್ಟದಲ್ಲಿ ಕೂತು ಬೇಸರಪಟ್ಟು ಮರಳಿ ಮಾಸ್ತರ್ ಪಟ್ಟಕ್ಕೆ ತಿರುಗಿ ಬಂದವರು ಅವರು.

ಉಟ್ಟ ಧೋತರದ ಚುಂಗು ಎಡಗೈಯಲ್ಲಿ, ಯಾವಾಗಲೋ ನೀಲಿ ಬಣ್ಣದ್ದಿರಬಹುದೆಂಬ ಅನುಮಾನ ಬರುವಂತಹ ಖಾದಿಯ ದೊಗಲೆ ಶರಟು. ಈಶಾನ್ಯ–ನೈರುತ್ಯ ದಿಕ್ಕಿಗೆ ಮುಖಮಾಡಿ ಕೂತಿರುವ ಕರಿ ಟೊಪ್ಪಿ. ಅದರಿಂದ ಹೊರಗೆ ಇಣುಕುತ್ತಿರುವ ಬೋಳು ತಲೆಯಲ್ಲಿನ ಅಳಿದುಳಿದ ಕೂದಲುಗಳು. ನಿನ್ನೆ ಶಾಲೆಯಲ್ಲಿ ಮರೆತು ಬಂದಿರದಿದ್ದ ಪಕ್ಷದಲ್ಲಿ, ಕಾಲಲ್ಲಿ ಚಪ್ಪಲಿ ಉಂಟು. ಬಲಭುಜದ ಮೇಲೆ ಬಲಗೈಯಲ್ಲಿ ಆಧರಿಸಿ ಹಿಡಿದ ಪುಸ್ತಕಗಳು, ಇದೇ ವೇಷದಲ್ಲಿ ಚಿತಳೆ ಮಾಸ್ತರು ಕಳೆದ ಮೂವತ್ತು ವರ್ಷ ಮನೆಯಿಂದ ಶಾಲೆಗೆ, ಶಾಲೆಯಿಂದ ಮನೆಗೆ ಹಾದಿ ಸವೆಸಿದ್ದಾರೆ. ಚಿತಳೆ ಮಾಸ್ತರು ನನಗೆ ಕಲಿಸಿದವರು. ಈಗ ನನ್ನ ಸೋದರಳಿಯಂದಿರ ಮಕ್ಕಳಿಗೆ ಕಲಿಸುತ್ತಿದ್ದಾರೆ. ಅವರ ಬಗ್ಗೆ ಹೇಳಬೇಕೆಂದರೆ "ನೈನಂ ಛಿಂದಂತಿ ಶಸ್ತ್ರಾಣಿ ನೈನಂ ದಹತಿ ಪಾವಕಃ. . . ." ಅವರು ಮೊದಲ ಮಹಾಯುದ್ಧ ನೋಡಿದ್ದಾರೆ. ಎರಡನೆಯದನ್ನೂ ನೋಡಿದ್ದಾರೆ. ಬಹುಶಃ ಮೂರನೆಯದನ್ನೂ ನೋಡಿಯಾರು.

ಒಂದನೆಯ ತರಗತಿಯಿಂದ ಹಿಡಿದು ಮ್ಯಾಟ್ರಿಕ್‌ವರೆಗೆ ಚಿತಳೆ ಮಾಸ್ತರ್ ನನಗೆ ಅನೇಕ ವಿಷಯಗಳನ್ನು ಕಲಿಸಿದರು. ಅದರಲ್ಲೆಲ್ಲಾ ಮಹತ್ವದ್ದು ಅಂದರೆ ಇಂಗ್ಲೀಷ್. ಹಾಗೆ ನೋಡಿದರೆ ಡ್ರಾಯಿಂಗ್ ಹಾಗೂ ಡ್ರಿಲ್ ಇದೆರಡು ವಿಷಯಗಳನ್ನು ಹೊರತುಪಡಿಸಿ ಬಾಕಿ ಎಲ್ಲಾ ವಿಷಯಗಳನ್ನೂ ಅವರು ಕಲಿಸುತ್ತಿದ್ದುದಿತ್ತು! ಘಂಟೆಯ ಮತ್ತು ವೇಳಾಪತ್ರಿಕೆಯ ಪಾಲನೆ ಮಾತ್ರಾ ಅವರಿಂದ ಎಂದೂ ಸಾಧ್ಯವಾಗಲೇ ಇಲ್ಲ. ಪ್ರತಿಯೊಂದು ವಿಷಯಕ್ಕೂ ಒಬ್ಬ ಸ್ವತಂತ್ರ ಶಿಕ್ಷಕನನ್ನಿಡುವುದು ಆ ಕಾಲದಲ್ಲಿ ನಮ್ಮ ಶಾಲೆಯ ಸಾಮರ್ಥ್ಯಕ್ಕೆ ಮೀರಿದ್ದಾಗಿತ್ತು. ಸಂಪೂರ್ಣ ಶಾಲೆಯನ್ನು ಎಂಟೋ ಹತ್ತೋ ಶಿಕ್ಷಕರು ಸಂಭಾಳಿಸುತ್ತಿದ್ದ ಕಾಲ ಅದು. ಈಗ ಮಳೆಗಾಲದ ನದಿಯಂತೆ ಶಾಲೆ ಮಕ್ಕಳಿಂದ ಉಕ್ಕಿ ಹರಿಯುತ್ತಿದೆ. ದೊಡ್ಡ ಕಟ್ಟಡ. ಪ್ರತಿ ತರಗತಿಗೂ ಎಂಟೆಂಟೂ ಭಾಗಗಳು. ಬೆಳಿಗ್ಗೆ ಮಧ್ಯಾಹ್ನದ ಬೇರೆಬೇರೆ ಶಿಫ್ಟ್‌ಗಳು. ಎರಡೆರಡು ಸಾವಿರ ವಿದ್ಯಾರ್ಥಿಗಳು ಇವೆಲ್ಲಾ ನಾವು ಕಂಡು ಕೇಳರಿಯದ ಸಂಗತಿಗಳಾಗಿದ್ದವು. ಈಗಿನ ಮಕ್ಕಳಿಗೆ ಶಿಕ್ಷಕರ ಹೆಸರೂ ಕೂಡಾ ಗೊತ್ತಿರಲಿಕ್ಕಿಲ್ಲ. ನಮ್ಮ ಶಿಕ್ಷಕರಿಗೆ ಪ್ರತಿಯೊಂದು ಹುಡುಗ/ಹುಡುಗಿಯ ಹೆಸರೂ ಬಾಯಿಪಾಠ! ಚಪ್ಪಲಿ ಹಾಕಿಕೊಂಡು ಶಾಲೆಗೆ ಬರುವ ಹುಡುಗ ಅಂದರೆ ಒಂದೋ ಡಾಕ್ಟರ ಮಗ ಅಥವಾ ಮಾಮಲೇದಾರರ ಮಗ ಮಾತ್ರಾ!

ಶಾಲೆಯಲ್ಲಿಯ ಅತಿ ಜಾಣ ಅಥವಾ ಅತಿ "ಢ" ವಿದ್ಯಾರ್ಥಿಗೆ ಮಾಸ್ತರ ಮನೆಯಲ್ಲಿ ಪುಕ್ಕಟೆಯಾಗಿ ವಿಶೇಷ ಶಿಕ್ಷಣ. "ಕುಮಾರ ಅಶೋಕ್ ಗಣಿತದಲ್ಲಿ ಯೋಗ್ಯ ಪ್ರಗತಿ ಸಾಧಿಸದ ಕಾರಣ ಅವನಿಗೆ ವಿಶೇಷ ಕೋಚಿಂಗ್ ಕೊಡಿಸಬೇಕು" ಎಂಬ ಚೀಟಿ ಪಾಲಕರಿಗೆ ಆಗ ಬರುತ್ತಿರಲಿಲ್ಲ. ಯಾರಾದರೂ ನಪಾಸಾಗುವುದು ಅಂದರೆ ಶಿಕ್ಷಕರ ಮರ್ಯಾದೆಯ ಪ್ರಶ್ನೆಯಾಗಿತ್ತು. ಕರಿಹಲಗೆ, ಸೀಮೆಸುಣ್ಣದಂತೆ, ತೆಳ್ಳನೆಯ ಬೆತ್ತವೂ ಶಾಲೆಯ ಒಂದು ಅವಶ್ಯಕ ವಸ್ತುವಾಗಿತ್ತು.

ಚಿತಳೆ ಮಾಸ್ತರು ಮಾತ್ರಾ ತಮ್ಮ ಮೂವತ್ತು

✍ ಮೂಲ ಮರಾಠಿ: **ಪು.ಲ.ದೇಶಪಾಂಡೆ**
ಕನ್ನಡಕ್ಕೆ : **ನಾರಾಯಣ ನವಿಲೇಕರ್**

ಮೂವತ್ತೆರಡು ವರ್ಷಗಳ ಸರ್ವಿಸಿನಲ್ಲಿ ಬಹುಶಃ ಬೆತ್ತವನ್ನು ಎಂದೂ ಪ್ರಯೋಗ ಮಾಡಲಿಲ್ಲ. ಅವರ ನಾಲಿಗೆಯ ಪ್ರಹಾರ ಬೆತ್ತದ ಪ್ರಹಾರಕ್ಕಿಂತ ಹೆಚ್ಚು ಚುರುಕು ಮುಟ್ಟಿಸುತ್ತಿತ್ತು. ಭಾರೀ ಸಿಟ್ಟು ಬಂದರೆ, ಹುಡುಗರ ಭುಜ ಅಮುಕುವುದು ಅಷ್ಟೆ.

ಸಂಜೆ ಶಾಲೆ ಬಿಡುತ್ತಿದ್ದಂತೆ ಚಿತಳೆ ಮಾಸ್ತರರ ಅವತಾರ ನೋಡುವಂತಿತ್ತು ಸೀಮೆಸುಣ್ಣದ ಧೂಳು ಮುಖದ ಮೇಲೆಲ್ಲಾ ಕೂತು, ಅವರು ಹಿಟ್ಟಿನ ಗಿರಣಿಯ ಕಾರಕೂನನಂತೆ ಕಂಗೊಳಿಸು ತ್ತಿದ್ದರು. ಅಷ್ಟಾದರೂ ಅವರ ಕಲಿಸುವ ಕಾರ್ಯ ಮುಗಿಯುತ್ತಿರಲಿಲ್ಲ. ಸಂಜೆಯಾಗುತ್ತಿದ್ದಂತೆ ಹಿಂದೆ ಬಿದ್ದ ಹುಡುಗರ ವಿಶೇಷ ತರಗತಿಗಳು ಶುರುವಾಗುತ್ತಿದ್ದವು.

ಅವರ ಶಬ್ಧಕೋಶ ವಿಶಿಷ್ಟವಾಗಿತ್ತು. ಮೊದಲ ತಾಸಿನ ಇಂಗ್ಲೀಷು ತರಗತಿಗೆ ನಾವು ತಯಾರಿ ಮಾಡಿಕೊಳ್ಳುವಾಗ ಚಿತಳೆ ಮಾಸ್ತರ್ ಸುರುಳಿ ಸುತ್ತಿದ ಜಗತ್ತಿನ ನಕಾಶೆಯನ್ನು ಬಂದೂಕಿನಂತೆ ಹೆಗಲ ಮೇಲಿಟ್ಟುಕೊಂಡು ಒಳ ಪ್ರವೇಶಿಸುವರು. ನಂತರ "ಅಭ್ಯಂಕರ್, ಆಪಟೆ, ಬಾಗ್ವೆ, ಚಿತ್ರೆ. . . " ಎಂದು ಅವರು ಹಾಜರಿ ಕರೆಯುವುದು ಮುಗಿಯುತ್ತಿದ್ದಂತೆ ಶಾಲೆಯ ಘಂಟೆಯಷ್ಟೆ ಹಳಬನಾದ ಜವಾನ ದಾವೂ ಶಿಪಾಯಿ ದುಂಡನೆಯ ಭೋಗೋಳವನ್ನು ತಂದು ಮೇಜಿನ ಮೇಲಿಡುತ್ತಿದ್ದ.

ಪೃಥ್ವಿಯನ್ನು ಕೈಯಲ್ಲಿ ಹಿಡಿದು ತರುವ ಅವನನ್ನು ಮಾಸ್ತರು "ಹರ್ಕ್ಯುಲಿಸ್" ಎಂದು ಕರೆಯುತ್ತಿದ್ದರು. ಹಾಜರಿ ಮುಗಿಯುತ್ತಿದ್ದಂತೆ, ಮುಂದಿನ ಬೆಂಚಿನ ಜಾಣ ವಿದ್ಯಾರ್ಥಿಯೊಬ್ಬನನ್ನುದ್ದೇಶಿಸಿ ಮಾಸ್ತರು ಕೇಳುತ್ತಿದ್ದರು.

"ಏನೋ, ಬೃಹಸ್ಪತಿ, ಹಿಂದಿನ ಕ್ಲಾಸಿನಲ್ಲಿ ಎಲ್ಲಿಯವರೆಗೂ ಬಂದಿದ್ದೆವು?"

"ಸರ್, ಈಗಿನ ಕ್ಲಾಸ್ ಇಂಗ್ಲೀಷ್"

"ಮತ್ತೆ ಭೂಗೋಳ ಯಾವಾಗ?"

"ಮೂರನೇ ತಾಸು"

"ಮೂರನೇ ತಾಸಿನಲ್ಲಿ ತರ್ಖಡಕರರ ಶ್ರಾದ್ಧ ಮಾಡೋಣ. ಈಗ ಭೂಗೋಳದ ಪುಸ್ತಕ ತೆಗೆಯಿರಿ"

ಈ ಪುಸ್ತಕ ತೆಗೆಯುವುದರಲ್ಲಿ ಯಾವುದೇ ಅರ್ಥ ಇರುತ್ತಿರಲಿಲ್ಲ. ಚಿತಳೆ ಮಾಸ್ತರ್ ಯಾವುದೇ ಪುಸ್ತಕ ಹಿಡಿದು ಕಲಿಸಿದ್ದು ನಮಗೆ ಯಾರಿಗೂ ಗೊತ್ತೇ ಇಲ್ಲ. ಭೂಗೋಳ, ಇತಿಹಾಸ, ಗಣಿತ, ಇಂಗ್ಲೀಷ್ ಯಾವುದೇ ಇರಲಿ "ಈಗ ಯಾವ ವಿಷಯ" ಎಂಬ ಪ್ರಶ್ನೆಗೆ "ಚಿತಳೆ ಮಾಸ್ತರ ವಿಷಯ" ಅನ್ನುವುದು ಯೋಗ್ಯ ಉತ್ತರವಾಗುತ್ತಿತ್ತು. ಎಲ್ಲರಿಗೂ ಬೇಕಾದ ಯಾವುದಾದರೂ ವಿಷಯ ಆರಿಸಿ ಮಾಸ್ತರರು ಮಗ್ನತೆಯಿಂದ ಶುರುಮಾಡುತ್ತಿದ್ದರು. ಅವರು ಬಹಳಷ್ಟು ಕಲಿಸಿದರೂ ಕೆಲವೊಂದು ವಿಷಯಗಳು ಅವರಿಂದ ಸಾಧ್ಯವಾಗಲೇ ಇಲ್ಲ. ಉದಾಹರಣೆಗೆ ಹಿಂದೂಸ್ತಾನದ ನಕಾಶೆ. ಕರಿಹಲಗೆಯ ಮೇಲೆ ಹತ್ತು ನಿಮಿಷ ಸೀಮೆಸುಣ್ಣದಿಂದ ಪ್ರಯತ್ನಪಟ್ಟು ಆಚೀಚೆ ಗೆರೆ ಎಳೆದು ಅಂತೂ ಇಂತೂ ಎತ್ತೆತ್ತಲೋ ಚಾಚಿಕೊಂಡಿರುವ ಹಿಂದೂಸ್ಥಾನದ ನಕಾಶೆ ತಯಾರಾಗುತ್ತಿತ್ತು.

"ಹಿಂದೂಸ್ಥಾನದ ನಕಾಶೆ ಸ್ವಲ್ಪ ದಕ್ಷಿಣ ಅಮೇರಿಕಾದ ಥರಾ ಕಾಣುತ್ತೇನೋ ತಮ್ಮಾ "ತಮ್ಮನ್ನು ತಾವೇ ಲೇವಡಿ ಮಾಡುತ್ತಾ, ಸುತ್ತಿ ತಂದ ನಕಾಶೆಯನ್ನು ಬಿಚ್ಚುತ್ತಾ ಹೇಳುತ್ತಿದ್ದರು.

"ಲೋ ಪಾಂಡು, ನಿನ್ನ ಮಾತೃಭೂಮಿಯ ನಕಾಶೆಯನ್ನು ಬಿಡಿಸು ನೋಡೋಣ"

ನಮ್ಮಲ್ಲಿ ಡ್ರಾಯಿಂಗಿನಲ್ಲಿ ಹೆಸರುವಾಸಿಯಾಗಿದ್ದ ಪಾಂಡು ಘರತ್ ಮಾಸ್ತರರು ಬರೆದ ನಕಾಶೆ ಅಳಿಸಿ ಸುಂದರವಾದ ಹೊಸ ನಕಾಶೆ ಬರೆಯುತ್ತಿದ್ದ.

"ದೇವರು ಯಾವ ಕೈಯಲ್ಲಿ ಯಾವ ಕಲೆ ಇಟ್ಟಿರುತ್ತಾನೋ ನೋಡಿ" ಎಂದು ಪ್ರಶಂಸೆ ಮಾಡುತ್ತಲೇ ಮುಂದಿನ ಪ್ರಶ್ನೆ ಒಗೆಯುತ್ತಿದ್ದರು. "ಪಾಂಡು ಅಣ್ಣಾ, ಮಾನ್ಸೂನಿನ ಗಾಳಿ ಎಲ್ಲಿಂದ ಬೀಸುತ್ತದೆ ಹೇಳು?"

ಪಾಂಡೂ ಬೆಪ್ಪಾಗಿ ನಿಲ್ಲುತ್ತಿದ್ದ.

ಒಮ್ಮೆ ಭೂಮಿ ಮತ್ತು ಸಮುದ್ರದ ಮೇಲೆ ಬೀಸುವ ಗಾಳಿಯ ಬಗ್ಗೆ ಪಾಠ ನಡೆದಿತ್ತು.

"ಗೋದೂ ಅಕ್ಕಾ, ಹೇಳಿ, ಈಗ ಗಾಳಿ ಯಾವ ಕಡೆ ಬೀಸುತ್ತಿದೆ?"

ಶಾಲೆಯ ಹೆಣ್ಣುಮಕ್ಕಳಿಗೆ ಮಿಸ್ ಜೋಶಿ, ಮಿಸ್ ಸಾಠೆ ಎಂದು ಸಂಬೋಧಿಸುವ ಮಾಸ್ತರು ಆಗ ಇರಲೇ ಇಲ್ಲ. ಹುಡುಗರಾದರೆ ಬಂಡ್ಯಾ, ಬಾಳ್ಯಾ,ಯೇಶ್ಯಾ, ಪುರುಷ್ಯಾ ಎಂಬ ಸಂಬೋಧನೆ ಹುಡುಗಿಯರಿಗೆ ಕುಸುಮೇ, ಶಾಂತೇ, ಭಬೇ, ಕಮಲೇ ಇತ್ಯಾದಿ ಕೂಗುವುದು ಪದ್ಧತಿ. ಅದರಲ್ಲೂ "ಢ" ವಿದ್ಯಾರ್ಥಿಗಳಿಗೆ ಚಿತಳೆ ಮಾಸ್ತರ್ ಅಗತ್ಯಕ್ಕಿಂತ ಹೆಚ್ಚು ಗೌರವಕೊಟ್ಟು ಮಾತನಾಡಿಸುತ್ತಿದ್ದರು. ಅಂಥವರಲ್ಲೊಬ್ಬಳು ಅಂದರೆ ಈ ಗೋದೀ ಗುಳವಾಣೇ ಎಂಬ ಹುಡುಗಿ. ಬೆಳ್ಳಗೆ, ಡುಮ್ಮಕ್ಕಿದ್ದ, ಮೆಳ್ಳಗಣ್ಣಿನ ಗೋದಿ ನಾಲ್ಕು ಐದನೆಯ ತರಗತಿಯವರೆಗೆ ಹೇಗೆ ಹೇಗೋ ಮಾಡಿ ಬಂದಳು. ಆಮೇಲೆ ಅಣ್ಣಾ ಗುಳವಾಣೆಯೊಂದಿಗೆ ಮದುವೆಯಾಗಿ ಹೊರಟುಹೋದಳು.

ಅವಳ ಮದುವೆಗೆ ಹೋದ ಚಿತಳೆ ಮಾಸ್ತರ್ ಅವನನ್ನುದ್ದೇಶಿಸಿ "ಇವಳು ನನ್ನ ಶಿಷ್ಯೆ. ಚೆನ್ನಾಗಿ ಸಂಸಾರ ನಡೆಸಿಯಾಳು. ಆದರೆ ದುಡ್ಡು ಕೊಟ್ಟು ಪೇಟೆಗೆ ಸಾಮಾನು ತರಿಸಲಿಕ್ಕೆ ಮಾತ್ರಾ ಕಳಿಸಬೇಡಿ. ಡಜನ್ನಿಗೆ ಹನ್ನೆರಡಾಣೆ ದರದ ಮಾವಿನಹಣ್ಣನ್ನು ಹದಿನಾಲ್ಕಾಣೆ ಕೊಟ್ಟು, ಅರ್ಧ ಡಜನ್ ತಂದಾಳು. ಏನಂತೀ ಗೋದಕ್ಕಾ?" ಎಲ್ಲರೆದುರಿಗೆ ಹೇಳಿದರು. ಆ ಗೋದಕ್ಕ, ಅತ್ತೆ ಮನೆಗೆ ಹೋಗುವಾಗ ತಂದೆ ತಾಯಿ ಜೊತೆಗೆ ಚಿತಳೆ ಮಾಸ್ತರಿಗೂ ಅಡ್ಡಬಿದ್ದು ಹೊರಟಿದ್ದಳು. "ಏನು ಅಳಿಯಂದಿರೇ, ಅಷ್ಟಪುತ್ರ ಅನ್ನಲೋ ಇಷ್ಟಪುತ್ರ ಅನ್ನಲೋ" ಗದ್ಗದ ಸ್ವರದಲ್ಲಿ ಮಾಸ್ತರು ಕೇಳಿದ್ದರು. ಅವಳು ಗಾಡಿ ಹತ್ತುತ್ತಿದ್ದಂತೆ ತಿರುಗಿ ಕಣ್ಣೊರಿಸಿಕೊಂಡದ್ದು ನಮಗೆ ಕಣ್ಣಿಗೆ ಬಿತ್ತು.

"ಗುಬ್ಬಿಗಳ ಹಾಗೆ ಹತ್ತು ಹನ್ನೆರಡು ವರ್ಷ ಕಟ್ಟೆಯ ಮೇಲೆ ಹಾರಾಡುತ್ತಾ, ಆ ಮೇಲೊಂದು ದಿನ ಬುರ್ರಂತ ಹಾರಿಹೋಗುತ್ತಾರೆ ರೀ" ಗೋದಿಯ ಅಪ್ಪ ಅಮ್ಮನಿಗೆ ಮಾಸ್ತರು ಹೇಳುತ್ತಿದ್ದರು.

ಇದೇ ಗೋದಿಗೆ ಶಾಲೆಯಲ್ಲಿ ಗೋದಕ್ಕಾ ಎಂದು ಮಾಸ್ತರು ಎಷ್ಟು ಚೇಷ್ಟೆ ಮಾಡಿದ್ದರು ಅಂದರೆ ಈಗಿನ ಕಾಲದಲ್ಲಿಯಾದರೆ ಪಾಲಕರಿಂದ ಹೆಡ್ ಮಾಸ್ತರಿಗೆ ದೂರು ಹೋಗುತ್ತಿತ್ತೋ ಏನೋ. ಆ ಕಾಲದಲ್ಲಿ ದೂರು ಹೋಗಲಿ. ಮಾಸ್ತರರು ತಮ್ಮ ಮಗನಿಗೆ ಬೆತ್ತದ ಪೂಜೆ ಮಾಡಿದರು ಅಂತ ಗೊತ್ತಾದಾಗ ಪಾಲಕರು ಮನೆಯಲ್ಲಿ ತಮ್ಮ ಪಾಲಿನ ಉತ್ತರ ಪೂಜೆ ನಡೆಸಿ ಕೃತಾರ್ಥರಾಗುತ್ತಿದ್ದರು.

"ಗೋದಕ್ಕಾ, ಗಾಳಿ ಯಾವ ದಿಕ್ಕಿನಿಂದ ಕಡೆ ಬೀಸುತ್ತದೀ, ಹೇಳು?" ಮಾಸ್ತರು ಮತ್ತೆ ಕೇಳಿದರು. ಗೋದಕ್ಕ ಗುಡುಮ್ಮನೇ ಕೂತಲ್ಲೇ ಕೂತಿದ್ದಳು. "ಹೆಣ್ಣೇ, ಬುಡ ಅಲುಗಿಸಿ ಎದ್ದು ನಿಲ್ಲು ನೋಡೋಣ" ಮಾಸ್ತರು ಮುಂದುವರಿಸಿದರು. ಮ್ಯಾಟ್ರಿಕ್ ಓದುವ ವಯಸ್ಸಿಗೆ ಬಂದರೂ, ಹೀಗೆ "ಬುಡ ಅಲುಗಿಸುವ" ಪ್ರಸ್ತಾಪದ ಬಗ್ಗೆ ಮಾಸ್ತರರಿಗೆ ಹೋಗಲಿ ಅವರ ವಿದ್ಯಾರ್ಥಿಗಳಿಗೂ ಯಾವುದೇ ತಕರಾರಲಿಲ್ಲ. ನಿಧಾನಕ್ಕೆ ಗೋದಿ ಕೆಳಗಿನ ತುಟಿ ಮುಂದು ಮಾಡಿ ಶುದ್ಧ ಶುಂಠರ ಭಂಗಿಯಲ್ಲಿ ಎದ್ದು ನಿಲ್ಲುತ್ತಿದ್ದಳು.

"ಹೇಳು, ಈಗ ಯಾವ ಗಾಳಿ ಬೀಸುತ್ತಿದೆ?" ಗೋದಿ ನಿಂತೇ ಇದ್ದಳು.

"ಗೋದುತಾಯಿ ನಿನ್ನ ಸೆರಗು ಯಾವ ಕಡೆ ಹಾರುತ್ತಿದೆ ನೋಡು – ಗುಡ್ಡದ ಕಡೆಗೋ, ಸಮುದ್ರದ ಕಡೆಗೋ? ರಾಮ್ಯಾ ನೀನು ಹೇಳು ನೋಡೋಣ" ಎದ್ದು ನಿಂತ ರಾಮು ಗೋಗಟೆ ಗೋಡಿಯನ್ನುದ್ದೇಶಿಸಿ ಕೂಗಿದ "ಏ ಗೋದೀ ಸ್ವಲ್ಪ ಸರಿಯಾಗಿ ನಿಂತುಕೋ"

"ಯಾಕೋ ರಾಮ್ಯಾ?" ಮಾಸ್ತರು ವಿಚಾರಿಸಿದರು.

"ಅವಳ ಸೆರಗು ಸರಿಯಾಗಿ ಕಾಣಿಸುತ್ತಿಲ್ಲ"

"ಅವಳ ಸೆರಗು ಯಾಕೋ ಕಾಣಿಸಬೇಕು?"

"ಮತ್ತೆ ಗಾಳಿ ಸಮುದ್ರದ ಕಡೆಗೋ ಗುಡ್ಡದ ಕಡೆಗೋ ಅಂತ ಗೊತ್ತಾಗುವುದು ಹೇಗೆ?"

"ಮೂರ್ಖಾ, ಪರೀಕ್ಷೆಲೀ ಗೋದೀನ ಎದುರು ನಿಲ್ಲಿಸಿಕೊಂಡು ಉತ್ತರ ಬರೀತಿಯೇನು? ಅರೆ, ಹಗಲು ಹೊತ್ತಿನಲ್ಲಿ ಬೀಸುವುದು ಯಾವುದೋ Land winds ಅಥವಾ sea winds?"

ಇದಾದ ಮೇಲೆ ಸಂಪೂರ್ಣ ಕ್ಲಾಸು "ಹಗಲು ಹೊತ್ತಿನಲ್ಲಿ ಬೀಸುವ ಗಾಳಿ ಅಂದರೆ . . . " ಎಂದು ಇಪ್ಪತ್ತೈದು ಸಾರಿ ಹೇಳಿ ಬಾಯಿಪಾಠ ಮಾಡಬೇಕು. ಅಷ್ಟಾದ ಮೇಲೆ ಮಾಸ್ತರರು ಕೇಳುವರು "ಗೋದೀ ಸೆರಗಿಗೂ Land windsಗೂ ಸಂಬಂಧ..."

"ಇಲ್ಲsss" ಎಂದು ಎಲ್ಲರೂ ಕೋರಸ್ಸಿನಲ್ಲಿ ಕೂಗುತ್ತಿದ್ದೆವು.

ಇಂಗ್ಲೀಷ್ ಭಾಷೆಯ ಮೇಲೆ ಅವರಿಗೆ ಅಪಾರ ಪ್ರೇಮ. ಶುದ್ಧ ದೇಶೀ ಉಚ್ಚಾರಣೆಯಲ್ಲಿ, ಅವರು ಇಂಗ್ಲೀಷ್ ಕಲಿಸುತ್ತಿದ್ದರು. ಒಂದು, ಎರಡನೆಯ ತರಗತಿಯ ಹೊರಗೆ ನಿಂತು ನೋಡುವವರಿಗೆ ಒಳಗೆ ನಡೆಯುತ್ತಿರುವುದು ಜ್ಞಾನೇಶ್ವರಿಯ ಪಾಠವೋ, ಇಲ್ಲಾ ಇಂಗ್ಲೀಷ್ ಪಾಠವೋ ಎಂದು ತಿಳಿಯುವುದು ಕಠಿಣವಾಗಿತ್ತು. "ಏ", "ಗೋ", "ವಿ", "ಗೋ", "ಹಿ?" "ಗೋ sssಸ್" ಎಂಬ ಸಮೂಹೋಚ್ಚಾರದ ಧ್ವನಿ ನನಗಿನ್ನೂ ನೆನಪಿದೆ. ಇಂಗ್ಲೀಷನ್ನು ಕಲಿಸುವುದು ಅಭಿನಯಪೂರ್ವಕವಾಗಿ, "ಅಯ್ ಆಮ್" ಎಂದು ಹೇಳಿ, ತಿನ್ನುವಂತೆ

ನಟಿಸುತ್ತಿದ್ದರೆ ಮಕ್ಕಳು "ಈಟಿಂಗ್" ಎಂದು ಕೂಗುತ್ತಿದ್ದವು. ಬೇಗ ಬೇಗ ನಡೆಯುವಂತೆ ಅಭಿನಯಿಸುತ್ತಾ "ಅಯ್ ಅಮ್" ಅಂದರೆ "ವಾಕಿಂಗ್" ಎಂಬ ಉದ್ಗಾರ ಮೊಳಗುತ್ತಿತ್ತು. ಕುರ್ಚಿಯ ಮೇಲೆ ತಲೆ ಒರಗಿಸಿ ಕಣ್ಣು ಮುಚ್ಚಿ "ಆಯ್ ಆಮ್" ಅಂದರೆ "ಸ್ಲೀಪಿಂಗ್" ಎಂದು ಉತ್ತರ ಹೊರಡುತ್ತಿತ್ತು. ಹೀಗೆ ಮಾಡುವಾಗ ಅವರ ತಲೆಯ ಟೊಪ್ಪಿ ಖುರ್ಚಿಯಿಂದ ಕೆಳಗೆ ಬಿದ್ದು, ಮಕ್ಕಳ ನಗೆಗೆ ಕಾರಣವಾಗುತ್ತಿತ್ತು. ಮಾಸ್ತರರಿಗೆ ತಮ್ಮ ಟೊಪ್ಪಿ ಬಿದ್ದದ್ದು ಲಕ್ಷ್ಯಕ್ಕೆ ಬಂದು " ನಮ್ಮ ಕಿರೀಟ ಬಿದ್ದು ಹೋಯಿತು ಅಂತ ಕಾಣುತ್ತೆ" ಎನ್ನುತ್ತಾ ಅದನ್ನು ಎತ್ತಿಕೊಳ್ಳುತ್ತಿದ್ದರು. ಹೀಗೆ ಮಕ್ಕಳಿಗೆ ಕಲಿಸುವುದರಲ್ಲಿ ತಮ್ಮನ್ನೇ ತಾವು ಮರೆಯುವ ಮತ್ತೊಬ್ಬ ಮಾಸ್ತರರನ್ನು ನಾನು ಜನ್ಮದಲ್ಲಿ ನೋಡಲಿಲ್ಲ. ಹಾಗೇ "ಅಯ್ ಆಮ್ ಕ್ರಾಲಿಂಗ್" ಎಂದು ತೋರಿಸುವಾಗ ಸ್ವತಃ ಮೊಣಕಾಲೂರಿ ಅಂಬೆಗಾಲಿಕ್ಕುತ್ತಾ ಹೋಗಿದ್ದುಂಟು. ಚಿತಳೆ ಮಾಸ್ತರ್ ತರಗತಿಯಲ್ಲಿ ಮಕ್ಕಳ ಗಲಾಟೆ ಎಷ್ಟು ಅಂದರೆ ಪಕ್ಕದ ತರಗತಿಯ ಮಾಸ್ತರೂ ಬಂದು ಹಣಕಿ ಹಾಕಿ ನೋಡುವಷ್ಟು. ಅವರಿಗೆ ತಮ್ಮ ಪೀರಿಯಡ್ ಮುಗಿದದ್ದೂ ಲಕ್ಷ್ಯಕ್ಕೆ ಬರುತ್ತಿರಲಿಲ್ಲ. ಮುಂದಿನ ಪೀರಿಯಡ್ಡಿನ ಮಾಸ್ತರರು ಬಂದು ಬಾಗಿಲ ಹೊರಗೆ ಕಾಯುತ್ತಿದ್ದದ್ದೂ ಅವರಿಗೆ ತಿಳಿಯುತ್ತಿರಲಿಲ್ಲ. ಇಷ್ಟರ ಮೇಲೆ ಮಹಾ ಮರೆವು ಬೇರೆ. ತೆಗೆದಿಟ್ಟ ಚಪ್ಪಲಿ ಮರೆಯುವುದಂತೂ ಬಹಳ ಸಾಮಾನ್ಯ ಸಂಗತಿಯಾಗಿತ್ತು. ಅದನ್ನು ನೋಡಿದ ಯಾವುದಾದರೂ ವಿದ್ಯಾರ್ಥಿ ಬೇರೆ ಯಾವುದೋ ತರಗತಿಯಲ್ಲಿ ಪಾಠ ಮಾಡುತ್ತಿರುವ ಅವರಿಗೆ ತೆಗೆದುಕೊಂಡು ಹೋಗಿ ಕೊಡಬೇಕು. "ಭರತ ಹದಿನಾಲ್ಕು ವರ್ಷ ಪಾದುಕೆ ಸಂಭಾಳಿಸಿದ, ನಿಮಗೆ ಒಂದೂ ತಾಸು ಸಂಭಾಳಿಸಲು ಸಾಧ್ಯವಿಲ್ಲವೇ?" ಎಂದು ತಮಾಷೆ ಮಾಡುತ್ತಾ ಅದನ್ನು ಹಾಕಿಕೊಳ್ಳುವರು.

ಜತೆಯ ಮಾಸ್ತರರಿಗೆ ಇವರೆಂದರೆ ತಮಾಷೆ. ಇದು ಶಾಲಾ ಪ್ರವಾಸದ ಸಂದರ್ಭದಲ್ಲಿ ಇನ್ನೂ ಹೆಚ್ಚಾಗಿ ಪ್ರಕಟವಾಗುತ್ತಿತ್ತು. ಚಿತಳೆ ಮಾಸ್ತರರಿಗೆ ಶಾಲಾ ಪ್ರವಾಸ ಎಂದರೆ ಎಲ್ಲಿಲ್ಲದ ಉತ್ಸಾಹ. ಅವರೊಂದಿಗೆ ನಾವು, ಸಿಂಧುದುರ್ಗ, ವಿಜಯಾದುರ್ಗ ಮುಂತಾದ ಕೋಟೆಗಳನ್ನು ನೋಡಿದ್ದೇವೆ. ಅವರು ನಮ್ಮ ಸ್ಕೌಟ್ ಮಾಸ್ತರೂ ಕೂಡಾ. ಊರಿನ ಅನೇಕ ಮಕ್ಕಳಿಗೆ ಈಜು ಕಲಿಸಿದವರೂ ಅವರೇ. ಊರಿನ ಸಾಹುಕಾರ ಮೆಹೆಂದಳೆಯವರ ತೋಟದ ಭಾವಿಗೆ ಶನಿವಾರ ಮಧ್ಯಾಹ್ನ ಮಕ್ಕಳನ್ನು ಕಟ್ಟಿಕೊಂಡು ಹೋಗುವರು. ಅಲ್ಲಿ ಕಟ್ಟೆಯಿಂದ ಅವರನ್ನು ಭಾವಿಗೆ ನೂಕುವರು. ಹಿಂದಿನಿಂದಲೇ ತಾವೂ ಧುಮುಕುವರು. ಕೆಲವೊಮ್ಮೆ ಮಕ್ಕಳನ್ನು ಹೆಗಲ ಮೇಲೆ ಕೂರಿಸಿಕೊಂಡು ಧುಮುಕಿದ್ದೂ ಇದೆ. ಹುಡುಗರಿಗೂ ಹುಡುಗಿಯರಿಗೂ ಒಂದೇ ನಿಯಮ. ಏಳೆಂಟು ಬಾರಿ ಕಣ್ಣು, ಮೂಗಿನಲ್ಲಿ ನೀರು ಹೋಗಿಸಿಕೊಂಡು, ಅಂತೂ ಮಕ್ಕಳು ಈಜು ಕಲಿಯುತ್ತಿದ್ದರು. ಈಜಿದ ಮೇಲೆ ಒದ್ದೆ ತಲೆಗಳನ್ನು ತನ್ನ ಪಂಜೆಯಿಂದಲೇ ಒರೆಸುವುವರು. ದೇವರಿಗೆ ಹರಕೆ ಬಿಟ್ಟ ಕೋಣಗಳಂತೆ ನಮ್ಮೆಲ್ಲರನ್ನೂ ನಮ್ಮ ಅಪ್ಪ ಅಮ್ಮ, ಚಿತಳೆ ಮಾಸ್ತರರ ಸುಪರ್ದಿಗೆ ಬಿಟ್ಟು ನಿಶ್ಚಿಂತರಾಗಿರುತ್ತಿದ್ದರು. ಬರಿಯ ಶಾಲೆಯಲ್ಲಿಯೇ ಏಕೆ, ರಸ್ತೆಯಲ್ಲಿ, ಅಥವಾ ದೇವಸ್ಥಾನದಲ್ಲಿಯೂ ಕೂಡಾ ಹುಡುಗರ ಕಿವಿ ಹಿಂಡುವ ಪರ್ಮಿಷನ್ ಅವರಿಗೆ ಪಾಲಕರು ಧಾರಾಳವಾಗಿ ನೀಡಿಬಿಟ್ಟಿದ್ದರು.

ಮ್ಯಾಟ್ರಿಕ್ ತಲುಪಿದಾಗ ಕೆಲ ಆರಿಸಿದ ಹುಡುಗರಿಗೆ ಹೆಚ್ಚಿನ ನಂಬರು ತೆಗೆಯುವ ಸಲುವಾಗಿ ಚಿತಳೆ ಮಾಸ್ತರ್ ಮನೆಯಲ್ಲಿಯೇ ವಿಶೇಷ ತರಬೇತಿ ಕೊಡುತ್ತಿದ್ದರು. ಇದಕ್ಕಾಗಿ ಬೆಳಗಿನ ಝಾವವೇ ಹೋಗ ಬೇಕಾಗುತ್ತಿತ್ತು. ಅಷ್ಟು ಹೊತ್ತಿಗಾಗಲೇ ಮಾಸ್ತರು ಸ್ನಾನ ಮುಗಿಸಿ, ಗಟ್ಟಿಯಾಗಿ ಯಾವುದೋ ಮಂತ್ರ ಹೇಳುತ್ತಾ ನಿಂತಿರುತ್ತಿದ್ದರು. ಹಳೆಬಂಗಲೆಯೊಂದರ ಔಟ್ ಹೌಸಿನಲ್ಲಿ ಅವರ ಬಿಡಾರ. ಅವರ ಹೆಂಡತಿಗೆ ವಿದ್ಯಾರ್ಥಿಗಳೇನು, ಸ್ವತಃ ಮಾಸ್ತರರೇ 'ಕಾಕೂ' ಎಂದು ಸಂಬೋಧಿಸುತ್ತಿದ್ದರು.

"ಕಾಕೂ, ಹುಡುಗರು ಬಂದಿದ್ದಾರೆ ನೋಡು, ಖರವಸ್ ಕೊಡಬೇಕು ಅಂತಿದ್ದೆಯಲ್ಲಾ" ಎಂದು ನೆನಪು ಮಾಡಿಕೊಡುವರು. ತಿಂದಾದ ಮೇಲೆ ಪಾಠ ಶುರು. ಸಂಪೂರ್ಣ ಪುಕ್ಕಟೆ. ಆಗಿನ್ನೂ ನಮ್ಮೂರಿಗೆ ವಿದ್ಯುತ್ ಬಂದಿರಲಿಲ್ಲ. ಮಾಸ್ತರ ಮನೆಯಲ್ಲಿ ಹಚ್ಚಿಟ್ಟ ಡಿಟ್ ಮಾರ್ ಲಾಟೀನಿನ ಜೊತೆಗೆ ನಾವು ಕೊಂಡೊಯ್ದ ಚಿಮಣಿ ಬುಡ್ಡಿಯ ಬೆಳಕಿನಲ್ಲಿ ಪಾಠ ಸಾಗುತ್ತಿತ್ತು. ಒಂದು ಬರಿಯ ಅಡ್ಡ ಪಂಚೆ ಸುತ್ತಿಕೊಂಡ ಮಾಸ್ತರು ಗೋಡೆಯ ಪಕ್ಕದ ಪೆಠಾರಿಯ ಮೇಲೆ ಕೂರುವರು. ಅವರ ಮಕ್ಕಳು ಗೋಪು, ವೇಣು ಮತ್ತು ಚಿಂತಾಮಣಿ, ನಮ್ಮ ವಾರಗೆಯುವರೇ ಆಗಿದ್ದು, ಅವರೂ ನಮ್ಮೊಂದಿಗೆ ಪಾಠಕ್ಕೆ ಕೂರುತ್ತಿದ್ದರು. ಶಾಲೆಯಲ್ಲಿ ಅವರಿಗೆ ಸ್ವಂತ ಮಕ್ಕಳು ಎಂಬ ಯಾವ ಪಕ್ಷಪಾತವನ್ನು ಚಿತಳೆ ಮಾಸ್ತರ್ ತೋರಿಸಲಿಲ್ಲ. ಬಾಕಿ ಎಲ್ಲರಂತೆ ಅವರಿಗೂ "ಗೋಪಾಲರಾವ್ ಚಿತಳೆ, ಎದ್ದು ನಿಲ್ಲಿ, ಉತ್ತರ ಹೇಳಿ" ಎಂದು ಹುಸಿ ಗೌರವ ಕೊಟ್ಟು ಚುಡಾಯಿಸುತ್ತಿದ್ದರು. ಕಿವಿ ಹಿಡಿದು ಎತ್ತುತ್ತಿದ್ದರು. ಮಾಸ್ತರರ ಸೌಭಾಗ್ಯದಿಂದ ಆ ಮಕ್ಕಳೆಲ್ಲರೂ ಸುಗುಣಿಗಳಾಗಿ, ಬುದ್ಧಿವಂತರಾಗಿ ಬೆಳೆದರು. ಮಾಸ್ತರರ ಮನೆಯ ಆ ಕತ್ತಲೆಯಲ್ಲಿ ಚಿಮಣಿ ಬುಡ್ಡಿಯ ಬೆಳಕಿನಲ್ಲಿ ಪಾಠ ಕಲಿತಿದ್ದು ನನ್ನ ನೆನಪಿನಲ್ಲಿ ಇನ್ನೂ ಹಸುರಾಗಿದೆ. ಅಲ್ಲಿ ನಾನು ರಘುವಂಶ ಕಲಿತೆ; ಟೆನಿಸನ್, ವರ್ಡ್ಸ್ ವರ್ಥ್ ಇವರ ಕವಿತೆಗಳನ್ನು ಓದಿದೆ.

ನಾವು ಮೆಟ್ರಿಕ್ ಪಾಸಾದ ಮೇಲೆ ಪೇಡೆ ಕೊಡಲೆಂದು ಅವರ ಮನೆಗೆ ಹೋದೆವು.

"ಕಾಕೂ, ಕುರುಕ್ಷೇತ್ರ ಯುದ್ಧದಲ್ಲಿ ಗೆದ್ದ ವೀರರು ಬಂದಿದ್ದಾರೆ. ತೆಂಗಿನಕಾಯಿ ಹಾಕಿ ಕರ್ಜೀಕಾಯಿ ಮಾಡಿದ್ದೆಯಲ್ಲ?" ಎಂದು ಹೆಂಡತಿಯನ್ನು ಕೂಗಿ "ಎಲ್ಫಿಸ್ಟನ್ ಕಾಲೇಜಿಗೆ ಸೇರಬೇಕು ತಿಳಿಯತೇನು? ನಿಮ್ಮ ಅಪ್ಪನಿಗೂ ನಾನು ಇದೇ ಮಾತು ಹೇಳಿದ್ದೆ. ಮತ್ತೆ ಯಾವುದಾದ್ರೂ ನಾಲಾಯಕ್ ಕಾಲೇಜು ಸೇರಿಗಿರೀರಿ. ಪುಣೆಯಲ್ಲಿ ಆದ್ರೆ ಫರ್ಗ್ಯುಸನ್. . . ಯಾವ ಕಾಲೇಜು?"

"ಎಲ್ಫಿನ್‌ಸ್ಟನ್"

"ಎಲ್ಲಿ ಸ್ಪೆಲ್ಲಿಂಗ್ ಹೇಳಿ ನೋಡೋಣ!"

ಅಷ್ಟರಲ್ಲಿ ಕಾಕೂ ಕರ್ಜೀಕಾಯಿ ತರುತ್ತಾ ಹೇಳುವರು "ಈಗೆಂಥಾ ಸ್ಪೆಲಿಂಗ್ ಕೇಳುತ್ತೀರಿ, ಎಲ್ಲಾ ಮುಗಿಯಿತಲ್ಲಾ. ಮುಂದೇನು ಮುಂಬಯಿಯೋ, ಪುಣೆಯೋ?"

"ನೋಡಬೇಕು, ಅಪ್ಪ ಎಲ್ಲಿ ಹಾಕುತ್ತಾರೋ ಅಲ್ಲಿ..." ಇಲ್ಲಿಗೆ ಚಿತಳೆ ಮಾಸ್ತರ್ ಹಾಗೂ ಅವರ ಅಸಂಖ್ಯ ವಿದ್ಯಾರ್ಥಿಗಳ ದಾರಿ ಬೇರೆ ಬೇರೆಯಾಗುತ್ತಿತ್ತು. ಅನೇಕ ವರ್ಷಗಳವರೆಗೆ ಮತ್ತೆ ಅವರ ದರ್ಶನವಾಗುತ್ತಿರಲಿಲ್ಲ. ಆದರೂ ದಿನನಿತ್ಯದ ವ್ಯವಹಾರಗಳಲ್ಲಿ ಆಗಾಗ ಅವರ ನೆನಪಾಗದೇ ಇರುವುದಿಲ್ಲ. "ಒಂದು ಸಾಲಿನಲ್ಲಿ ಎಂಟಕ್ಕಿಂತ ಹೆಚ್ಚು ಶಬ್ಧಗಳು ಇರಕೂಡದು!" ಎಂಬ ಅವರ ಕಾನೂನು ಕೈಯಲ್ಲಿ ಕೂತು ಬಿಟ್ಟಿದೆ. "ಒಂಭತ್ತನೇ ಶಬ್ಧ ಬಂತು ಅಂದರೆ ಸುಮ್ಮನೇ ಸೊನ್ನೆ ಸುತ್ತುತ್ತೇನೆ" ಎಂದು ಹೆದರಿಸಿ ಅದರಂತೆ ಮಾಡುವುದು.

ಒಮ್ಮೆ ಮುಂಬಯಿಯ ನನ್ನ ಮನೆಯ ಕರೆಘಂಟೆ ಸದ್ದಾಯಿತು. ಕೈಯಲ್ಲಿ ಚೀಲ ಹಿಡಿದು ಸಾಕ್ಷಾತ್ ಚಿತಳೆ ಮಾಸ್ತರ್ ನಿಂತಿದ್ದರು! ಅದೇ ಕೋಟು, ಅದೇ ಟೊಪ್ಪಿ.

"ಸರ್ ನೀವು" ನಾನು ಆಶ್ಚರ್ಯದಿಂದ ಉದ್ಗರಿಸಿದೆ.

"ನಿನ್ನ ಮುಂಬಯಿ ಧನ್ಯವಾಯಿತಪ್ಪಾ" ಒಳಗೆ ಬರುತ್ತಾ ಉಸಿರುಬಿಟ್ಟರು.

"ಯಾಕೆ ಏನಾಯಿತು?"

"ಏನಾಗಬೇಕು? ನೋಡು, ಈ ಚೀಲದಲ್ಲಿ ಮಾವಿನಹಣ್ಣಿದೆ. ಬೀಳಿಸಿಗೀಳಿಸೀಯೇ" ಹೆಂಡತಿಯ ಕೈಗೆ ಕೊಡುತ್ತಾ ಹೇಳಿದರು.

ನನ್ನ ಹೆಂಡತಿಯೂ ಅವರ ವಿದ್ಯಾರ್ಥಿನಿಯೇ

ಆದ್ದರಿಂದ ಅವರಿಗೆ ಮತ್ತಷ್ಟು ಸಲಿಗೆ.

“ಯಾಕೆ ಮುಂಬಯಿ ಏನು ಮಾಡಿತು ನಿಮಗೆ?” ನಾನು ಮತ್ತೆ ಕೇಳಿದೆ.

“ನಿನ್ನ ಹಳೆಯ ಮನೆ ಇದ್ದ ಜಾಗ ಗೊತ್ತಿತ್ತು. ಈ ವರಳಿ ಪ್ರದೇಷ ನೋಡಿಯೇ ಇಲ್ಲ. ಹಿಂದೊಮ್ಮೆ ಸ್ಕೌಟಿನ ಜಾಂಬೋರಿ ಇದ್ದಾಗ ಬಂದಿದ್ದೆಷ್ಟೋ ಅಷ್ಟೇ. ಆಗಂತೂ ಇಲ್ಲೆಲ್ಲಾ ಪೂರಾ ಕಾಡು. ಅಂತೂ ನಿನ್ನ ಮನೆ ಹುಡುಕೋ ಹೊತ್ತಿಗೆ ಸಾಕಾಯಿತು. ಇರಲಿ, ನೀನು ಲೋಕಮಾನ್ಯ ತಿಲಕರ ಅಪ್ಪ. . .”

“ನಾನು!”

“ಅಂದರೆ ಜಗತ್ಪ್ರಸಿದ್ಧ! ನೀನು ಅಂದರೆ ಇಲ್ಲಿ ಎಲ್ಲರಿಗೂ ಗೊತ್ತಿರುತ್ತೆ ಅಂದುಕೊಂಡಿದ್ದೆ. ನೋಡಿದರೆ ಪಾನ್ ಅಂಗಡಿಯವನಿಗೂ ನೀನು ಯಾರು ಅಂತ ಗೊತ್ತಿಲ್ಲ. ನಾಟಕ ಮಾಡುತ್ತಾರೆ ಅವರು, ಪರದೇಶಕ್ಕೂ ಹೋಗಿಬಂದಿದ್ದಾರೆ ಅಂತ ಅವನ ಹತ್ತಿರ ಹೇಳಿದರೆ ಅವನೇನು ಹೇಳಿದ ಗೊತ್ತೆ? “ಅಯ್ಯೋ ಅದಕ್ಕೇನು, ಈಗೀಗ ಝಾಡಮಾಲಿಗಳೂ ಪರದೇಶಕ್ಕೆ ಹೋಗುತ್ತಾರೆ!” ಅವನು ಹೇಳಿದ್ದೂ ನಿಜ ಅನ್ನು. ನಮ್ಮದು ನಮಗೆ ಹೆಚ್ಚು ಅಷ್ಟೇ. ಬಾಕಿಯವರಿಗೇನು? ಕೊನೆ ಪಕ್ಷ ನಿನ್ನ ನಾಟಕವನ್ನಾದರೂ ಇವರಿಗೆ ಪುಕ್ಕಟೆ ಆಡಿ ತೋರಿಸು. ಆಗಲಾದರೂ ನೆನಪಿಟ್ಟುಕೊಂಡಾರು”

“ಯಾವಾಗ ಬಂದಿರಿ?”

“ಇವತ್ತಿಗೆ ಸರಿಯಾಗಿ ಹತ್ತು ದಿನ ಆಯಿತು”

“ಮತ್ತೆ ಎಲ್ಲಿದ್ದಿರಿ? ವೇಣು ಮನೆಯಲ್ಲಿಯೇನು?”

“ಛೆ, ಇಲ್ಲ ಅವಳ ಗಂಡನಿಗೆ ನಾಸಿಕಕ್ಕೆ ವರ್ಗವಾಯಿತು. ನಾನು ಜನೂ ಪಾನಶೇ ಮನೆಯಲ್ಲಿ ಡೇರೆ ಹಾಕಿದ್ದೇನೆ”

“ಜನೂ ಪಾನಶೇ ಅಂದರೆ?”

“ಹಾಲುಮಾರುತ್ತಿದ್ದನಲ್ಲ ಪಾನಶೇ ಅವನ ಮಗನೋ. ನಿನ್ನ ಕ್ಲಾಸಿನಲ್ಲಿಯೇ ಇದ್ದನಲ್ಲ. ಇಲ್ಲ, ಇಲ್ಲ, ಅವನದ್ದು 36 ರ ಬ್ಯಾಚು. ಶುದ್ಧ ಢ ಹುಡುಗ. ಬಾಜೀರಾಯನ ಜುಟ್ಟನ್ನು ಅಹಮದ್ ಶಾ ಅಬ್ದಾಲಿಗೆ ಅಂಟಿಸುವಂತಹವನು. . . .”

ಚಿತಳೆ ಮಾಸ್ತರ್ ಬದಲಾಗಲು ತಯಾರಿರಲಿಲ್ಲ. ಈ ಬಾಜೀರಾಯನ ಜುಟ್ಟಿನ ವಿನೋದ ಮೂರು ತಲೆಮಾರಿನ ಅವರ ವಿದ್ಯಾರ್ಥಿಗಳು ಕೇಳಿ ಕೇಳಿ ದೊಡ್ಡವರಾಗಿದ್ದ ಸಂಗತಿಯಾಗಿತ್ತು.

ಕುರ್ಚಿಯಲ್ಲಿ ಕೂತು ಸುಧಾರಿಸಿಕೊಂಡ ಮೇಲೆ ಕೇಳಿದೆ “ಸರ್, ಮುಂಬಯಿಗೆ ಬಂದ ಉದ್ದೇಶ?”

“ಭಿಕ್ಷಾಂದೇಹಿ, ಮತ್ತೇನು, ಶಾಲೆಯಲ್ಲಿ ಬಯಲು ರಂಗಮಟಪ ಕಟ್ಟಬೇಕಾಗಿದೆ.”

“ಏನಂದಿರಿ?” ನಾನು ಹಾರಿ ಬಿದ್ದೆ.

“ಯಾಕೆ ಬೆಚ್ಚಿ ಬೀಳುತ್ತೀ? ನೀನೂ ನಾಟಕದವನೆ ತಾನೇ. ಸರಕಾರದಿಂದ ಅರ್ಧ ಭಾಗ ಸಿಕ್ಕಿದೆ. ಬಾಕಿ ನಾವು ಒಟ್ಟು ಮಾಡಬೇಕು. ಕಳೆದ ವರ್ಷ ನಮ್ಮ ಹುಡುಗರಿಗೆ ಜಿಲ್ಲಾ ಮಟ್ಟದ ನಾಟಕೋತ್ಸವದಲ್ಲಿ ಮೊದಲ ಪಾರಿತೋಷಕ ಸಿಕ್ಕಿತು” ಇದೋ ನನಗೆ ಹೊಸದು.

“ನಾಟಕ ಮಾಡಲಿಕ್ಕೆ ನೀವು ಪ್ರೋತ್ಸಾಹ ಕೊಡುತ್ತಿದ್ದೀರಿ ಅಂದರೆ ನಂಬಲಿಕ್ಕೆ ಆಗುತ್ತಿಲ್ಲ. ನಮ್ಮ ಗ್ಯಾದರಿಂಗ್ ಕಾಲದಲ್ಲಿ ನಾಟಕ ಮಾಡುತ್ತೇನೆ ಅಂದಿದ್ದಕ್ಕೆ ವರ್ಗದಿಂದ ಹೊರಗೆ ನಿಲ್ಲಿಸಿದ್ದಿರಿ. ನೆನಪಿದೆಯೇ?

“ಪುರುಷ್ಯಾ, ನಿನಗೆ ಬುದ್ಧಿ ಇಲ್ಲ. ಅರೆ, ಟೈಮ್ಸ್ ಹ್ಯಾವ್ ಛೇಂಜ್ಡ್! ಈಗ ನಮ್ಮಲ್ಲಿ ಎರಡೆರಡು ಶಿಫ್ಟು, ಫ್ಯಾಕ್ಟರಿ ಥರಾ. ಐವತ್ತೆರಡು ಶಿಕ್ಷಕರಿದ್ದಾರೆ. ಚಂದ್ರಸೂರ್ಯ. . .”

“ಚಂದ್ರಸೂರ್ಯ, ಅಂದರೆ?”

“ಒಂದೇ ಆಕಾಶದಲ್ಲಿ ಚಂದ್ರ ಸೂರ್ಯ ಇದ್ದಂತೆ. ಒಬ್ಬ ಮುಳುಗುತ್ತಿದ್ದಂತೆ ಇನ್ನೊಬ್ಬ ಹುಟ್ಟುತ್ತಾನೆ . . .”

“ಸರಿ, ಸರಿ, ಊಟ ಮಾಡಿಕೊಂಡೇ ಹೋಗಿ”

“ಇಲ್ಲ, ಇಲ್ಲ, ನೂರೂ ಕಾಜಿ ಮನೆಯಲ್ಲಿ ಊಟ, ನಲವತ್ತರ ಬ್ಯಾಚಿನವನು. ನಮ್ಮ ಇಸ್ಮಾಯಿಲ್ ಕಾಜಿಯ ಮಗ. ಜಾಣ. ಸಚಿವಾಲಯದಲ್ಲಿದ್ದಾನೆ. ಶಿಕ್ಷಣ ಇಲಾಖೆಯಲ್ಲಿ. ಅವನಿಂದಲೇ ಗ್ರಾಂಟ್ ಸಿಕ್ಕಿದ್ದು. .

ಒಂದು ತಮಾಷೆ ಹೇಳುತ್ತೀನಿ ಕೇಳು. ಈ ಕಾಜಿ ಆಫೀಸಿಗೆ ಮತ್ತೊಬ್ಬ ಆಫೀಸರ್ ಬದಲಿ ಆಗಿ ಬಂದನಂತೆ. ಅವನ ಫೈಲಿನ ನೋಟಿಂಗ್ಸ್ ಇವನು ನೋಡುತ್ತಿದ್ದನಂತೆ. ಪ್ರತಿ ಸಾಲಿನಲ್ಲಿಯೂ ಎಂಟೆಂಟೇ ಪದಗಳು. ಹಾಗೇ ಏನೋ ಅನ್ನಿಸಿ ಆ ಆಫೀಸರನಿಗೆ ಫೋನು ಮಾಡಿ ಕೇಳಿದನಂತೆ– ನೀವು ಚಿತಳೆ ಮಾಸ್ತರರ ವಿದ್ಯಾರ್ಥಿಯೇನು? ಅಂತ. ಆ ಕಡೆಯಿಂದ ಮಾತಾಡುತ್ತಿದ್ದ ಆಫೀಸರ್, ಜೋಗಳೇಕರ್, ಕುರ್ಚಿಯಿಂದ ಕೂತಲ್ಲೇ ಹಾರಿಬಿದ್ದು, ಅದು ಹೇಗೆ ನಿನಗೆ ಗೊತ್ತಾಯಿತು? ಅಂದ. ನಿನ್ನ ಫೈಲ್ ನೋಟಿಂಗ್ಸ್‌ನಲ್ಲಿ ಒಂಭತ್ತನೇ ಪದ ಬಂದಿದೆಯೋ ಅದನ್ನೆಲ್ಲಾ ಹೊಡೆದು ಹಾಕಿ ಮುಂದಿನ ಸಾಲಿನಲ್ಲಿ ಮುಂದುವರಿಸಿದ್ದೀಯಾ. ಅದಕ್ಕೇ ಅನ್ನಿಸಿತು ಅಂದನಂತೆ ಕಾಜಿ ಈ ಜೋಗಳೇಕರ್ ಶಾಲೆಯಲ್ಲಿ ಜಾಣ ಹುಡುಗ. ಬಿ.ಎ.ಪರೀಕ್ಷೆಯಲ್ಲಿ ರಾಜ್ಯಕ್ಕೇ ಎರಡನೆಯ ಸ್ಥಾನ ತೆಗೆದು, ಈಗ ಹಣಕಾಸು ಇಲಾಖೆಯಲ್ಲಿ ಆಫೀಸರನಾಗಿದ್ದಾನೆ.

“ಹಾಗಾದರೆ ಈಗ ಕಾಜಿ ಮನೆಗೆ ಊಟಕ್ಕೆ ಹೋಗಬೇಕೇನು?”

“ಹೌದು ಹೇಳಿಬಿಟ್ಟಿದ್ದೀನಿ. ನೋಡು ನೀನು ಮಟನ್, ಚಿಕನ್ ಊಟ ಹಾಕಿದರೆ, ನಿನ್ನ ಶಿಕ್ಷಣ ಮಂತ್ರಿಗೆ ಖುದ್ದು ಪತ್ರ ಬರೆದು, ನೀನು ಮೂರನೆಯ ತರಗತಿಯಲ್ಲಿದ್ದಾಗ ಭೂಗೋಲದ ಪತ್ರಿಕೆಯಲ್ಲಿ ಕಾಪಿಹೊಡೆದಿದ್ದೆ ಎಂದು ತಿಳಿಸಿಬಿಡುತ್ತೇನೆ ಅಂತ!”

“ಸರಿ, ಹಾಗಾದರೆ ಈಗೇನು ಕಾಫಿಯೋ, ಚಹವೋ?”

“ನಿನ್ನ ಸಹಧರ್ಮಿಣಿ ಏನು ಕೊಡುತ್ತಾಳೋ ಅದು. ನಿನ್ನ ಕಾಕೂ ನಿನ್ನ ನೆನಪು ಮಾಡುತ್ತಿರುತ್ತಾಳೆ”

“ಆರೋಗ್ಯ ಹೇಗಿದೆ?”

“ಪರವಾಗಿಲ್ಲ. ಮೋತಿಬಿಂದು ಆಗಿದೆ. ಮಾಸ್ತರನನ್ನು ಮದುವೆ ಮಾಡಿಕೊಂಡದ್ದಕ್ಕೆ ಕೊರಳಿನಲ್ಲಿ ಮೋತಿ ಕಾಣದಿದ್ದರೂ ಕಣ್ಣಿಗಂತೂ ಬಂತು!. ಆಪರೇಷನ್ ಮಾಡಿಸೋಣ ಅನ್ನುತ್ತಿದ್ದಾನೆ ಗೋಪು. ನಮ್ಮ ಸಾನೆ ಈಗ ಕಣ್ಣಿನ ಡಾಕ್ಟರಾಗಿದ್ದಾನಲ್ಲ.”

“ಇಲ್ಲಿಯವರೆಗೆ ಎಲ್ಲೆಲ್ಲಿ ಭಿಕ್ಷಾಂದೇಹಿ ಆಯಿತು? ಅಂದ ಹಾಗೆ ಈ ಥಿಯೇಟರ್ ಶಾಲೆಯಲ್ಲಿಯೇ ಕಟ್ಟುತ್ತೀರಾ?”

“ಪರವಾಗಿಲ್ಲ ನೀನೂ ನಾಟಕದವ ನಾಗಿದ್ದರೂ ಇಷ್ಟು ಮಡಿಯೇ? ಅರೆ, ನಮ್ಮ ನಾಟಕ “ಬೇಬಂದಶಾಹಿ” ನೋಡಿದರೆ ನೀನೇ ನನ್ನ ಬೆನ್ನು ತಟ್ಟಿ ಶಭಾಷ್ ಅನ್ನುತ್ತಿದ್ದೀ!”

“ನಿಮಗೆ?”

“ಮತ್ತೆ ನಾಟಕದ ಡೈರೆಕ್ಟರ್ ನಾನೇ!”

“ಮತ್ತೇನು ತಿಳಕೊಂಡೀದ್ದೀ? ಹುಡುಗರಿಗೆ ಬಾಯಿಪಾಠ ಮಾಡಲು ಹಚ್ಚಿದ್ದು ಅಂದರೆ ತನ್ನದಷ್ಟೇ ಅಲ್ಲ. ಸಂಪೂರ್ಣ ನಾಟಕವೇ ಬಾಯಿಪಾಠ ಆಗಿತ್ತು”

“ಬೆಳಿಗ್ಗೆ ಐದಕ್ಕೆ ಅಭ್ಯಾಸ. ಮಜಾ ನೋಡು. ಏಳಕ್ಕೆ ಶಾಲೆ ಇದ್ದರೆ ಕಣ್ಣು ತಿಕ್ಕುತ್ತಾ ಎಂಟರತನಕ ಬರುತ್ತವೆ. ಅದೇ ನಾಟಕದ ಅಭ್ಯಾಸಕ್ಕೆ ಔರಂಗಜೇಬ್‌ನಿಂದ ಹಿಡಿದು ಸಂಭಾಜಿಯವರೆಗೆ ಪ್ರತಿಯೊಬ್ಬ ಹುಡುಗನೂ ಐದಕ್ಕೆ ಹಾಜರ್!”

“ಪೂರ್ಣ ನಾಟಕ ಏಕೆ ಬಾಯಿಪಾಠ?”

“ಕೊನೇಘಳಿಗೆಯಲ್ಲಿ ಯಾವನೋ ಒಬ್ಬ ಜ್ವರ ಮಲಗಿದರೆ, ನಾಟಕಾನೂ ಮಲಗಬಾರದಲ್ಲ! ಹಾಗೆ ನೋಡಿದರೆ ಈಗಿನ ಹುಡುಗರೂ ಮೊದಲಿನ ಹಾಗಿಲ್ಲ. ಕೈಯಲ್ಲಿ ಚಿತ್ರ ವಿಚಿತ್ರ ಉಂಗುರ ಏನು, ಕೊರಳಲ್ಲಿ ಲಾಕೆಟ್ ಏನು, ರಾಮರಾಮಾ, ತಲೆಮೇಲೆ ಒಬ್ಬನಿಗಾದರೂ ಟೋಪಿ ಇದ್ದರೆ ಕೇಳು, ಈಜಿನ ಅಭ್ಯಾಸ ಅಂತೂ ಯಾವತ್ತೋ ಮುಗಿದುಹೋಗಿದೆ. ನಿಮ್ಮ ಕಾಲದಲ್ಲಿಯೂ ಸಿನಿಮಾ ಥಿಯೇಟರ್ ಇತ್ತಲ್ಲ. ಆದರೆ ನೀವು ಯಾರೂ ಹೋಗುತ್ತಿರಲಿಲ್ಲ. ಈಗ ಕೇಳಲೇ ಬೇಡ.

ಅರ್ಧಕ್ಕರ್ಧ ಹುಡುಗರು ಥಿಯೇಟರಿನಲ್ಲಿಯೇ. ಇದೇನು ಎರಡನೆಯ ಮಹಾಯುದ್ಧದ ಪ್ರಭಾವವೋ, ಅಥವಾ ಸ್ವಾತಂತ್ರ್ಯ ಬಂದಿದ್ದರ ಪರಿಣಾಮವೋ ಗೊತ್ತಿಲ್ಲ. ಅಷ್ಟೇ ಏಕೆ, ಹೊಸ ಸಿನೆಮಾ ಹಾಕಿದ್ದರೆ ನಾನೂ ಕೂಡಾ ಹೋಗುವುದುಂಟು!''

''ನೀವು? ಸಿನೆಮಾಕ್ಕೆ?''

''ಸಿನೆಮಾಕ್ಕಲ್ಲ. ಇಂಟರ್ವಲ್ಲಿಗೆ''

ಚಿತಳೆ ಮಾಸ್ತರರಿಗೆ ಅರವತ್ತರ ಅರಳು ಮರಳು ಶುರುವಾಗಿರಬಹುದು ಅಂತ ನನಗೆ ಸಂಶಯ ಬರತೊಡಗಿತು.

''ಇಂಟರ್ವಲ್ ನೋಡಲಿಕ್ಕೆ ಅಂದರೆ? ಅರ್ಥವಾಗಲಿಲ್ಲ.''

''ಸರಿ ಬಿಡು. ಕತ್ತಲೆಯಲ್ಲಿ ಹೋಗಿ ನಿಂತಿರುತ್ತೇನೆ. ನಮ್ಮ ಶಿರ್ಕೆಯದೇ ಥಿಯೇಟರು. ಅವನ ಹತ್ತಿರ ಇಂಟರ್ವಲ್ಲಿಗೆ ಪುಕ್ಕಟೆ ಪಾಸು ತೆಗೆದುಕೊಂಡಿದ್ದೇನೆ. ಇರಲಿ, ಏನು ಹೇಳುತ್ತಿದ್ದೆ ಅಂದರೆ, ಕತ್ತಲೆಯಲ್ಲಿ ನಿಂತು, ಇಂಟರ್ವಲ್ಲಿನಲ್ಲಿ ಝಗ್ಗನೆ ದೀಪ ಹತ್ತಿದಾಗ, ನಮ್ಮ ಶಾಲೆಯ ಎಷ್ಟು ಹುಡುಗರು ಕದ್ದು ಥಿಯೇಟರಿಗೆ ಬಂದಿದ್ದಾರೆ ಅಂತ ಕಾಣುತ್ತಲ್ಲ. ಒಂದೊಂದು ಬಾರಿ ಕಂಡರೆ ಪರವಾಗಿಲ್ಲ. ಎರಡನೇ ಬಾರಿ ಕಂಡರೆ ಕೇಳುತ್ತೀನಿ, ಏನೋ ಎರಡನೆಯ ಬಾರಿ ಬಂದಿದ್ದೀಯಾ ಅಂತ''

''ಅಂದರೆ ಇದೇ ಒಂದು ಉದ್ಯೋಗ ಆಗಿದೆ ಅನ್ನಿ'' ನನ್ನವಳು ಕೇಳಿದಳು.

''ನಿಮಗೆ ಗೊತ್ತಾಗುವುದಿಲ್ಲ. ಫ್ಲಾರೆನ್ಸ್ ನೈಟಿಂಗೇಲಳ ಕಾಲ ಈಗಿಲ್ಲ. ಈಗೇನಿದ್ದರೂ ಮೀನಾಕುಮಾರಿ, ಬೀನಾರಾಯ್– ನಾಳೆ ಇತಿಹಾಸದ ಪೀರಿಯಡ್ಡಿನಲ್ಲಿ ಇವರದ್ದೇ ಚರಿತ್ರೆ ಕಲಿಸಬೇಕಾಗುತ್ತೋ ಏನೋ. ಟೈಮ್ಸ್ ಹ್ಯಾವ್ ಛೇಂಜ್ಡ್. ಇರಲಿ. ನಾನಿಲ್ಲಿಗೆ ಬಂದ ಉದ್ದೇಶ ಭವತಿ ಭಿಕ್ಷಾಂದೇಹಿ – ಏನು ಕೊಡುತ್ತೀಯಾ ಹೇಳು''

''ಇನ್ನೂ ಎಷ್ಟು ದಿವಸ ಮುಂಬಯಿಯಲ್ಲಿ ಮುಕ್ಕಾಮು?''

''ನಾಡಿದ್ದು ಹೊರಡಬೇಕು. ಮುಂದಿನ ವಾರದಿಂದ ಶಾಲೆ ಶುರುವಾಗುತ್ತದೆ''.

''ಹಾಗಿದ್ದರೆ ರಾತ್ರಿ ನಮ್ಮಲ್ಲಿಗೇ ಊಟಕ್ಕೆ ಬನ್ನಿ'' ಇವಳು ಹೇಳಿದಳು.

''ರಾತ್ರಿ ಊಟ ನಿಲ್ಲಿಸಿ ಬಿಟ್ಟಿದ್ದೇನೆ''

''ಆಗಲಿ ಅದಕ್ಕೇನಂತೆ. ಉಪವಾಸದ್ದೇ ಏನಾದರೂ ಮಾಡೋಣವಂತೆ''

''ಹಾಗಲ್ಲಮ್ಮ ವ್ರತ ಅಂತ ನಿಲ್ಲಿಸಿದ್ದಲ್ಲ. ಜೀವನದಲ್ಲಿ ಮಾಡಿದ ಒಂದೇ ವ್ರತ ಅಂದರೆ ಹುಡುಗರನ್ನು ತಿಕ್ಕಿ, ತಿದ್ದಿ, ಕುಟ್ಟಿ, ತಯಾರು ಮಾಡಿ ಜೀವನ ಎದುರಿಸಲಿಕ್ಕೆ ಕಳುಹಿಸುವುದು ಅಷ್ಟೇ. ರಾತ್ರಿ ಉಳಿಯಲಿಕ್ಕೆ ಬರುತ್ತೇನೆ''

''ಖಂಡಿತ ಬನ್ನಿ. ಆದರೆ ರಾತ್ರಿ ಕತ್ತಲೇಲಿ ನಮ್ಮ ಮನೆ ನಿಮಗೆ ಗುರುತು ಹಿಡಿಯಲಿಕ್ಕೆ ಆಘುತ್ತದೆಯೇನು?''

''ಹೌದು, ಸ್ವಲ್ಪ ಕಷ್ಟವೇ ಅನ್ನು. ಹಾಗೆ ನೋಡಿದರೆ ನಾನು ವಿಲ್ಸನ್ ಕಾಲೇಜಿನ ವಿದ್ಯಾರ್ಥಿಯೇ. ಆಗಿನ ಮುಂಬಯಿಗೂ, ಈಗಿನದಕ್ಕೂ ಸಂಬಂಧವೇ ಇಲ್ಲ. ವರ್ಷಂವರ್ಷ ಬದಲಾಗುತ್ತಿದೆ. ಮೊನ್ನೆ ಕಾಲೇಜಿನ ಹತ್ತಿರ ಹೋಗಿ ಅಡ್ಡಾಡಿ ಬಂದೆ. ಆಗಿನ ಪ್ರಿನ್ಸಿಪಾಲ್ ಮೆಕೆಂಜಿ ಅಂತ. ಬಹಳ ನಿಯತ್ತಿನ ಮನುಷ್ಯ. ಅವರ ಶ್ರದ್ಧೆ ನೋಡಿಯೇ ನಾನು ಶಿಕ್ಷಕನಾಗುವ ನಿರ್ಧಾರ ಮಾಡಿದ್ದು. ಮೊದಲು ಒಂದು ತಿಂಗಳು ಕಲೆಕ್ಟರ್ ಕಛೇರೀಲಿ ನೌಕರಿ ಮಾಡಿದ್ದೆ ಅನ್ನು. ನನ್ನ ಜೇಬಿನಲ್ಲಿ ''ಕೇಸರಿ'' ಇಟ್ಟುಕೊಂಡಿದ್ದೆ ಅನ್ನುವ ಅಪರಾಧಕ್ಕೆ ನೌಕರಿಯಿಂದ ಕಿತ್ತು ಹಾಕಿದರು''.

''ಸರಿ, ಹಾಗಾದರೆ, ನಾನು ಸಂಜೆ ಬಂದು ನಿಮ್ಮನ್ನು ಕರೆದುಕೊಂಡು ಬರುತ್ತೇನೆ. ಎಲ್ಲಿಗೆ ಬರಲಿ?'' ನಾನು ಹೇಳಿದೆ.

''ನಿನ್ನದೇ ಬ್ಯಾಚಿನವನೇ ತಾನೆ. ಮುಕುಂದ ಪಾಟಾಣಕರ್, ಅವನ ಮನೆಗೆ ಹೋಗುವವನಿದ್ದೇನೆ ಸಂಜೆಗೆ''

''ಅಂದರೆ ಹಿಂದೂ ಕಾಲನಿಯಲ್ಲೇನು?''

''ಹೌದು, ಹಿ ಈಸ್ ಡೂಯಿಂಗ್ ವೆರಿ ವೆಲ್. ಮೋಟರು ಇಟ್ಟಿದ್ದಾನೆ. ಕಳೆದ ಬಾರಿ ಬಂದಾಗ ಮೋಟರಿನಲ್ಲಿ ಎಲ್ಲ ಕಡೆ ಸುತ್ತಿಸಿದ್ದ. ಹಾಗೆ ನೋಡಿದರೆ ಮುಂಬಯಿಯಲ್ಲಿ ನನ್ನ ಐದಾರು ಮೋಟರು ಇದೆ ಅನ್ನು . .''. ಮಾಸ್ತ್ರ ಚೇಷ್ಟೇಯ ಧ್ವನಿ ಇನ್ನೂ ಬದಲಾಗಿರಲಿಲ್ಲ.

ಸಂಜೆ ನಾನು ಮುಕುಂದನ ಮನೆಗೆ ಹೋದೆ.

''ಮಾಸ್ತರು ಬಿಮ್ಮಿದ್ದಾರೇನೋ?'' ವಿಚಾರಿಸಿದೆ.

''ಹೌದು ಬಂದಿದ್ದಾರೆ. ಬೇಬಿಗೆ ಕಥೆ ಹೇಳುತ್ತಿದ್ದಾರೆ''

ನನಗೆ ಥಕ್ಕನೆ ನೆನಪಾಯಿತು. ಮುಕುಂದನ ಐದು ವರ್ಷದ ಬೇಬಿಗೆ ಪೋಲಿಯೋ ಬಂದು ಕಳೆದ ಒಂದು ವರ್ಷದಿಂದ ಹಾಸಿಗೆ ಹಿಡಿದಿದ್ದಳು. ಒಳಹೊಕ್ಕು ನೋಡಿದೆ. ಮಾಸ್ತರು ಕಥೆ ಹೇಳುವುದರಲಿ, ಆ ಮಗು ಕೇಳುವುದರಲ್ಲಿ ಹೊರಜಗತ್ತನ್ನೇ ಮರೆತಿದ್ದರು. ಯಾವುದೋ ರಾಜಕುಮಾರಿಯ ಕಥೆ. ರಾಜಕುಮಾರನ ವಿಮಾನ ಗಗನದಲ್ಲಿ ಹಾರುತ್ತಿತ್ತು ಎನ್ನುತ್ತಾ ಮಾಸ್ತರು ಎರಡೂ ಕೈ ಚಾಚಿ ಕೋಣೆಯ ತುಂಬ ತಿರುಗಿದರು. ನಾನು ಮುಕುಂದ ಮುಖ ಮುಖ ನೋಡಿಕೊಂಡೆವು. ಅವನ ಕಣ್ಣಂಚಿನಲ್ಲಿ ನೀರಾಡುತ್ತಿತ್ತು.

''ಮುಂಬಯಿಗೆ ಬಂದಾಗಿನಿಂದ ಪ್ರತಿ ಸಂಜೆ ಬಂದು ಬೇಬಿಗೆ ಒಂದು ಕಥೆ ಹೇಳಿ ಹೋಗುತ್ತಾರೆ''

ಮಾಸ್ತರರ ಕಥೆ ಮುಗಿಯುತ್ತಾ ಬಂದಿತ್ತು.

''ಹೀಗೆ ರಾಜಕುಮಾರ ರಾಜಕುಮಾರಿ ಅರಮನೆಯಲ್ಲಿ ಸುಖವಾಗಿ. . .''

''ಇದ್ದರು. . .'' ಬೇಬಿ, ನಾನು, ಮುಕುಂದ ಮೂರೂ ಜನ ಒಟ್ಟಿಗೆ ವಾಕ್ಯವನ್ನು ಪೂರ್ಣ ಮಾಡಿದೆವು.

ನಾನು, ಮಾಸ್ತರು ಟ್ಯಾಕ್ಸಿ ಹತ್ತಿ ಕೂತೆವು.

''ಸ್ವಲ್ಪ ನಿಲ್ಲಿಸು''

''ಯಾಕೋ ಏನಾಯಿತು?'' ಮಾಸ್ತರು ವಿಚಾರಿಸಿದರು.

''ಮತ್ತೇನಿಲ್ಲ. ಹಳೇ ಅಭ್ಯಾಸ. ನಿಮ್ಮ ಕಾಲಲ್ಲಿ ಚಪ್ಪಲಿ ಇಲ್ಲ''

''ಮೇಲೇ ಉಳಿಯಿತು ಅಂತ ಕಾಣುತ್ತೆ. ಇರಲಿ ಬಿಡು. ನಾಳೆ ಹೇಗಿದ್ದರೂ ಬರುವುದು ಇದೆಯಲ್ಲ''

''ಇರಿ, ನಾನು ತಂದುಬಿಡುತ್ತೇನೆ''

''ಛೆ, ಛೆ, ಹುಚ್ಚೇನು? ಬೇಡ ಬಿಡು''

ನಾನು ಮೇಲೆ ಹತ್ತಿ ಹೋದೆ. ಮುಕುಂದನ ಮನೆಯ ಬಾಗಿಲಿನಲ್ಲಿಯ ಚಪ್ಪಲಿ ಸ್ಟ್ಯಾಂಡಿನಲ್ಲಿ ಮಾಸ್ತರ ಜೋಡು ಹುಡುಕುವುದು ಬಹಳ ಸುಲಭವಾಗಿತ್ತು. ಅವರ ಚಪ್ಪಲಿಯಷ್ಟು ಜೀರ್ಣವಾದ ಮತ್ತೆ ಯಾವುದೇ ಜೋಡು ಅಲ್ಲಿರಲಿಲ್ಲ.

ಲೇಖನದಲ್ಲಿ ಬಳಸಿದ ಕೆಲ ಪದಗಳ ಅರ್ಥ:

''ಢ'' ವಿದ್ಯಾರ್ಥಿ= ಕಲಿಯುವುದರಲ್ಲಿ ಬಹಳ ಹಿಂದಿರುವವನು

ತರ್ಖಡಕರ= ಇಂಗ್ಲೀಷ್–ಮರಾಠಿ ಶಬ್ದಕೋಶದ ಲೇಖಕ

ಗೋದೀ=''ಗೋದಾವರಿ'' ಎಂಬ ಹೆಸರಿನ ಸಲಿಗೆಯ ಕಿರು ರೂಪ

ಖರವಸ್=ಹಾಲಿನಿಂದ ಮಾಡಿದ ಗಿಣ್ಣದಂತಹ ಸಿಹಿ ಪದಾರ್ಥ.

ಖಟ್‌ಮಾರ್ = ಹಿಂದೆ ಪ್ರಚಲಿತವಿದ್ದ ಲಾಟೀನಿನ ಒಂದು ಕಂಪನಿಯ ಹೆಸರು

ಮೋತಿಬಿಂದು= ಕಣ್ಣಿನ ಪೊರೆ

ಮೋತಿ=ಮುತ್ತು (ಆಭರಣ)

ಬೇಬಂದಶಾಹಿ=ಪ್ರಸಿದ್ಧ ಮರಾಠಿ ನಾಟಕ

ಕೇಸರಿ= ಲೋಕಮಾನ್ಯ ತಿಲಕರು ನಡೆಸುತ್ತಿದ್ದ, ಬ್ರಿಟಿಷರ ಕೆಂಗಣ್ಣಿಗೆ ಗುರಿಯಾಗಿದ್ದ ಮರಾಠಿ ಪತ್ರಿಕೆ.

☐

ಕೆ. ಸತ್ಯನಾರಾಯಣರ "ಪ್ರಸಿದ್ಧನಾಮಾ" ಒಂದು ಸಮೀಕ್ಷೆ

ಈ ಕಥಾ ಸಂಕಲನದ ಶೀರ್ಷಿಕೆಯೇ ಹೇಳುವಂತೆ ಇದು ಪ್ರಸಿದ್ಧ ನಾಮರ ಸುತ್ತ ಹೆಣೆದ ಕಥೆಗಳು. ಇದು ಅಷ್ಟೇ ಆಗಿದ್ದರೆ ಒಂದು ವ್ಯಕ್ತಿಚಿತ್ರಗಳ ಸಂಕಲನ (caricatures) ವಾಗಿಬಿಡಬಹುದಿತ್ತು. ಕನ್ನಡದಲ್ಲಿ ಇಂತಹ ವ್ಯಕ್ತಿಚಿತ್ರಗಳು ಬಂದಿವೆ, ಮತ್ತು ಅವು ತಮ್ಮ ಮಟ್ಟಿಗೆ ಘನವಾದ ಸಂದೇಶವನ್ನು ಸಮಾಜಕ್ಕೆ ಸಾರುತ್ತಾ ಮೌಲ್ಯಾಧಾರಿತ ಕೃತಿಗಳಾಗಿ ಉಳಿದುಕೊಂಡು ಬಿಟ್ಟಿವೆ. ಹಾಗೆ ಅವುಗಳ ಕೊಡುಗೆಯೇನೂ ಸಾಮಾನ್ಯವಾದುದಲ್ಲ. ಆದರೆ ಇಂತಹ ಪ್ರಸಿದ್ಧನಾಮರ ಜೀವನ ಹಾಗೂ ಆದರ್ಶಗಳಿಗೂ ಜನಸಾಮಾನ್ಯರ ಬದುಕಿಗೂ ಇರುವ ಅಗಾಧವಾದ ಅಂತರವನ್ನು ನಮ್ಮ ಸಾಂಸ್ಕೃತಿಕ ಚರಿತ್ರೆಯಲ್ಲಿ ಉದ್ದಕ್ಕೂ ಕಾಣಬಹುದಾಗಿದೆ. ಇನ್ನೊಂದು ಅರ್ಥದಲ್ಲಿ ಹೇಳಬಹುದಾದರೆ, ಇಂತಹ ಅಂತರವೇ ಕಾಲ ಕಾಲಕ್ಕೆ ದೊಡ್ಡ ಮನುಷ್ಯರ ಜೀವನಾದರ್ಶಗಳನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳಬೇಕಾದ (revive) ಅನಿವಾರ್ಯತೆಯನ್ನೂ ತಂದೊಡ್ಡಿದೆ. ಇದಕ್ಕೆ ಕಾರಣ ದೊಡ್ಡ ವ್ಯಕ್ತಿಗಳ ಆದರ್ಶಗಳು ಸಾಮಾನ್ಯಜನರ ಬದುಕಿನಲ್ಲಿ ಸಾಕ್ಷಾತ್ಕರಗೊಳ್ಳಲು ಸಾಧ್ಯವಾಗದಂತಹ ಸಾಮಾಜಿಕ ಸಂದರ್ಭ. ಆದರ್ಶದ ಕಲ್ಪನೆ ನೇರ ಮತ್ತು ಸರಳವಾದುದು. ಆದರೆ ಅದರ ವಾಸ್ತವಿಕ ಆಚರಣೆ ಸಂಕೀರ್ಣವಾದುದು. ಆದರ್ಶಗಳು ಆಕಾಶಗಾಮಿಗಳಾದರೆ, ಆಚರಣೆಗಳು ಈ ನೆಲಕ್ಕೆ ಸಂಬಂಧಿಸಿದವು. ಅವು ಈ ನೆಲದ ಬದುಕಿನಲ್ಲಿಯೇ ನಿರ್ಮಾಣ'ಗೊಳ್ಳಬೇಕಾದವು. ಈ ನೆಲದ ವೈವಿಧ್ಯದಂತೆಯೇ ಇವುಗಳಿಗೆ ಅನಂತ ಮುಖಗಳಿವೆ ಹಾಗು ಅವು ಅಷ್ಟೇ ಸಂಕೀರ್ಣವಾಗಿವೆ. ಆದರ್ಶಗಳಿಗೆ ಇರುವಂತೆ ಆಚರಣೆಗಳಿಗೆ ಇಂತಹುದೇ ಎನ್ನುವ ಸರಳ ಸೂತ್ರಗಳಿಲ್ಲ. ಈ ಎರಡರ ನಡುವಿನ ಸಂಬಂಧದ ಸಂಕೀರ್ಣವಾದ ಸ್ವರೂಪವನ್ನು ಕೆ. ಸತ್ಯನಾರಾಯಣರು ತಮ್ಮ ಈ ಪ್ರಸಿದ್ಧನಾಮಾ ಕೃತಿಯಲ್ಲಿ ಕಟ್ಟಿಕೊಡುತ್ತಾರೆ ಎನ್ನುವುದೇ ಇದರ ವೈಶಿಷ್ಟ. ಕೆ. ಸತ್ಯನಾರಾಯಣರು ಕಟ್ಟಿಕೊಡುವ ಈ ಪ್ರಸಿದ್ಧನಾಮರ ಕೃತಿಯಲ್ಲಿ ಪ್ರಸಿದ್ಧ ವ್ಯಕ್ತಿಗಳಆದರ್ಶಗಳು ಅವರು ಎತ್ತಿಹಿಡಿಯುವ ಮೌಲ್ಯಗಳು ಒಂದು ದ್ವೀಪವಾಗಿ ಪ್ರತ್ಯೇಕ ಉಳಿಯದೇ ಸಾಮಾನ್ಯ ಜನರ ಬದುಕಿನ ಜೊತೆಗೆ interact ಮಾಡುತ್ತವೆ ಇನ್ನುವ ಕಾರಣದಿಂದಲೇ ಕನ್ನಡಕ್ಕೆ ಇದು ಒಂದು ವಿಶಿಷ್ಟ



ಪ್ರಸಿದ್ಧ ನಾಮಾ
ಲೇ: ಕೆ. ಸತ್ಯನಾರಾಯಣ
ಪ್ರಕಾಶಕರು : ಸುಭಾಷ್ ಸಾಹಿತ್ಯ ಸಂಪದ ಮಾಲೆ. ಬೆಂಗಳೂರು.
ಪುಟಗಳು : viii + 143
ಬೆಲೆ : ರೂ. : 120

ಕೃತಿ. ಆದರ್ಶಗಳು ಆಚರಣೆಯ ನೆಲೆಯಲ್ಲಿ ಸಾಕ್ಷಾತ್ಕಾರಗೊಳ್ಳುವುದರ ಮೂಲಕವೇ ಅವು ಎಷ್ಟು ಹುಸಿ ಮತ್ತು ಗಟ್ಟಿ ಎಂಬುದು ಇತ್ಯರ್ಥವಾಗುತ್ತದೆ. ಆದುದರಿಂದ ಸಾಮಾನ್ಯರ ಬದುಕಿನ ಆಚರಣೆಗಳೇ ಆದರ್ಶಗಳ ಮಾನದಂಡಗಳು.

ದೊಡ್ಡ ಮನುಷ್ಯರು ಯಾವಗಲೂ ಜನಸಾಮಾನ್ಯರಿಂದ ದೂರವೇ ಉಳಿಯುವವರು. ಇಂತಹ ದೊಡ್ಡ ಮನುಷ್ಯರ ಆದರ್ಶಗಳಿಂದ ಜನ ಸಾಮಾನ್ಯರಿಗೆ ಏನು ಪ್ರಯೋಜನ ಎಂದು ದೂರದರ್ಶನದ ಸಂದರ್ಶನದಲ್ಲಿ ಪ್ರಶ್ನೆಯನ್ನು ಕೇಳುವಂತೆ ಕೇಳಿಬಿಡಬಹುದೇನೋ. ಇಂತಹ ಅಮೂರ್ತವಾದ ಪ್ರಶ್ನೆಗಳಿಗೆ (ಒಮ್ಮೊಮ್ಮೆ ಅಸಂಬದ್ಧ) ಕಂಡು ಕೊಳ್ಳುವ ಉತ್ತರಗಳು ಮಾತ್ರ ಘನೀಭೂತವಾದವು, ವ್ಯಕ್ತಿ ವಿಶಿಷ್ಟವಾದವು ಮತ್ತು ವಿಭಿನ್ನವಾದವು. ಇಂತಹ ಘನೀಭೂತ, ವ್ಯಕ್ತಿ ವಿಶಿಷ್ಟ, ವಿಭಿನ್ನ ವಾಸ್ತವವನ್ನು ಕೆ. ಸತ್ಯನಾರಾಯಣ ತಮ್ಮ ಈ ಕತೆಗಳ ಮೂಲಕ ಕಟ್ಟಿಕೊಡುತ್ತಾರೆ.

ಆದರ್ಶಗಳು, ಅವು ಸಾರುವ ಮೌಲ್ಯಗಳು ಕಾಲಾತೀತ ಎನ್ನುವುದಾದರೆ ಅವುಗಳನ್ನು ಕಾಲದ ಎಲ್ಲ ಘಟ್ಟಗಳಲ್ಲಿಯೂ ಆಚರಣೆಯ ನಿಕಷಕ್ಕೆ ಒಡ್ಡಬೇಕಾಗಿರುವುದು ಅನಿವಾರ್ಯವಾಗುತ್ತದೆ. ಯಾಕೆಂದರೆ ಅಮೂರ್ತವಾದ ಇಂತಹ ಪರಿಕಲ್ಪನೆಗಳು ಚಲಿಸುವುದು ಮೂರ್ತವಾದ, ಕಾಲದ ಘನ ವಿವರಗಳ ಮೂಲಕವೇ. ಕಾಲದ ಪರೀಕ್ಷೆಗೆ ಒಡ್ಡಿಕೊಳ್ಳುವುದರಿಂದಲೇ ಇವು ಮಾನವೀಕರಣಕ್ಕೆ ಒಳಗಾಗುತ್ತವೆ. ಆದುದರಿಂದ ಇವುಗಳನ್ನು ಆಯಾ ಕಾಲದ ಸಾಮಾಜಿಕ ಸಂದರ್ಭಗಳ ಮೂಲಕವೇ ಅವುಗಳನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ ಇಂತಹ ಆದರ್ಶಗಳನ್ನು ಕಾಲದಿಂದ ಕಾಲಕ್ಕೆ ನವೀಕರಿಸಬೇಕಾದ ಅಗತ್ಯಕೂಡ ಇದೆ ಎಂಬುದನ್ನೂ ಈ ಕತೆಗಳು ಧ್ವನಿಸುತ್ತಿವೆಯೋ ಏನೋ.

ದೊಡ್ಡ ಮನುಷ್ಯರ ಖಾಸಗೀ ಬದುಕಿನ ವಿವರಗಳು, ಸಾಮಾನ್ಯ ಮನುಷ್ಯರಿಗಿಂತ ಭಿನ್ನವಾಗಿ

✍ಗಿರಿಜಾ ಶಾಸ್ತ್ರಿ

ಏನೂ ಇಲ್ಲ ಎಂಬುದನ್ನು ತೋರಿಸುತ್ತಲೇ ಅಂತಹವರ ಬಗ್ಗೆ ಅವರ ಆದರ್ಶಗಳ ಬಗ್ಗೆ ಸಮಾಜಕ್ಕೆ ಇರುವ ಏಕ ಮುಖವಾದ ವೈಭವೀಕೃತ (glorified) ನಂಬಿಕೆಯನ್ನೂ ಇದು ಭಗ್ನಗೊಳಿಸುತ್ತದೆ.

ಸಾಮಾನ್ಯ ಜನರ ಕಣ್ಣಿನ ಮೂಲಕ ಈ ಪ್ರಸಿದ್ಧನಾಮರನ್ನು ನೋಡಲಾಗಿದೆಯೇ ವಿನಃ ಅದರ ವಿರುದ್ಧವಾಗಿಯಲ್ಲ. ನಜೀರ ಸಾಬುವಿನ ಪಂಚಾಯತ್ ರಾಜ್‌ನ ಅಭಿವೃದ್ಧಿಯ ಕನಸುಗಳಗೆ ಸೀತಾಲಕ್ಷ್ಮಿ ಚಾಲನೆ ಕೊಟ್ಟರೆ, ಜೆ.ಪಿ ಯ ಆದರ್ಶಗಳನ್ನು ಲಲಿತಾ ಕಾರ್ಯರೂಪಕ್ಕೆ ತರುವ ಪ್ರಯತ್ನಮಾಡುತ್ತಾಳೆ. ವಿಶ್ವೇಶ್ವರಯ್ಯನವರನ್ನು ಮುದುಕಿ ಕಾಣುವ ಬಗೆ ಸಮಾಜ ವಿಶ್ವೇಶ್ವರಯ್ಯನವರನ್ನು ಕಂಡ ಬಗೆಗಿಂತ ವಿಭಿನ್ನವಾಗಿದೆ. ಕಮಲಾದಾಸ್‌ರ ಅನನ್ಯವಾದ ನಂಬಿಕೆಗಳನ್ನು ಶಿವಕಾಮಿ ಬದುಕಲು ಪ್ರಯತ್ನಿಸುತ್ತಾಳೆ. ದೇವರಾಜ ಅರಸ್ ಅವರ ಆದರ್ಶಗಳನ್ನು ಚಿನ್ನಯ್ಯ, ಗಾಂಧಿಯ ಮೌಲ್ಯಗಳನ್ನು ಸಿ. ಎಸ್. ಆಚಾರ್ಯ, ಜೆ.ಕೆ. ಚಿಂತನೆಗಳನ್ನು ಗಾಯತ್ರಿ. ಮಧುಗಿರಿ ರಾಮುವಿನದ್ದನ್ನು ರಾಜಶೇಖರ್, ಮಾರ್ಕ್ ಟುಲಿಯ ನಂಬಿಕೆಗಳನ್ನು ದಲಿತ ಡಿ.ಸಿ..

ಹೀಗೆ ಮೇಲಿನ ಎಲ್ಲ ನಾಯಕರು ಪುರುಷರು. (ಕಮಲಾ ದಾಸ್ ಒಬ್ಬರನ್ನು ಬಿಟ್ಟರೆ) ಆದರೆ ಇವರನ್ನು ಕಾಣುವ ಮತ್ತು ಇವರ ಆದರ್ಶಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸುವ / ನಿಕಷಕ್ಕೆ ಒಡ್ಡುವ ಹೆಚ್ಚಿನವ'ರು ಇಲ್ಲಿ ಮಹಿಳೆಯರಾಗಿರುವುದು ಆಶ್ಚರ್ಯದ ಸಂಗತಿ. ಇವುಗಳಿಗೆ

(ಪುಟ 20ಕ್ಕೆ)


ಸಮಾನತೆ ಮತ್ತು ಜಾತ್ಯಾತೀತತೆಯ ಭದ್ರ ತಳಹದಿಯ ಮೇಲೆ ಮುನ್ನಡೆಯುತ್ತಿರುವ
ಭಾರತ ಗಣರಾಜ್ಯದ 63ನೇ ವಾರ್ಷಿಕ ಸಂಭ್ರಮಾಚರಣೆ
26-01-2012
ವಿಭಿನ್ನತೆಯಲ್ಲಿ ಏಕತೆಯೇ ನಮ್ಮ ಶಕ್ತಿ
"ನಾನು ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವವನ್ನು ಬೋಧಿಸುವ ಧರ್ಮವನ್ನು ಇಷ್ಟಪಡುತ್ತೇನೆ"
- ಡಾ. ಬಿ.ಆರ್. ಅಂಬೇಡ್ಕರ್
ಭಾರತ ಗಣರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು
ಕರ್ನಾಟಕ ವಾರ್ತೆ

RNI No. 040015 / 83
MH / MR / North East / 093 / 2012- 2014 Date of Posting : 10-03-2012

↑ **ಭಾಷಾ ಭಾವೈಕ್ಯ ಕಾರ್ಯಕ್ರಮ :**
ಡಾ. ಅನುಪಮಾ ಮಂಗಳವೇಡೆ ಮತ್ತು ರಾಮಚಂದ್ರ ಹಡಪದ್ ಅವರಿಂದ ಹಾಡುಗಾರಿಕೆ.

'ಶಿವರಾತ್ರಿ' ನಾಟಕ ಪ್ರದರ್ಶನ ↓



ಮುಂಬೈಕನ್ನಡ ಸಂಘದ ಪುರಂದರದಾಸರ 448ನೇ ಆರಾಧನಾ ಮಹೋತ್ಸವ : ತಾ 12.12.2012ರಂದು ಸಂಜೆ ಮೈಸೂರು ಅಸೋಸಿಯೇಷನ್ನಿನಲ್ಲಿ ವಿದೂಷಿ ಶ್ಯಾಮಲಾ ಪ್ರಕಾಶ್ ಅವರಿಂದ ಕರ್ನಾಟಕ ಸಂಗೀತ ಕಚೇರಿ.

"ಪ್ರಸಿದ್ಧನಾಮಾ"...

ಅಪವಾದವಾದ ಸಬ್‌ಸಬಾಲ್ಟ್ರನ್ ಮತ್ತು ಗಾಂಧೀಜಿಯ ಕತೆಗಳಲ್ಲಿ ಕೂಡ, ದೇವರಾಜ ಅರಸರ ಹಾದಿಯಲ್ಲಿಯೇ ನಡೆದು ಆನಂತರದ ಚಿನ್ನಯ್ಯನ ಬದುಕಿನ ತಿರುವಿಗೆ ನಾಗರತ್ನಮ್ಮ ಕಾರಣವಾದ'ರೆ, ಗಾಂಧೀಜಿಯ ಆದರ್ಶವನ್ನು ಅರಗಿಸಿಕೊಳ್ಳಲಾರದ ಸಿ.ಎಸ್. ಆಚಾರ್ಯನ ಐಲುತನವನ್ನು ಬಯಲು ಮಾಡುವವಳು ಅವನ ಹೆಂಡಿತಿ.

ನಮ್ಮ ಸಮಾಜದಲ್ಲಿ ಆದರ್ಶಗಳನ್ನು ಎತ್ತಿಹಿಡಿಯುವುದು, ಮೌಲ್ಯಗಳನ್ನು ಸಾರುವುದು ಹೆಚ್ಚಾಗಿ ಪುರುಷರ ಗುತ್ತಿಗೆ. ಸ್ತ್ರೀಯರಾದರೋ ಈನೆಲಕ್ಕೆ ಅಂಟಿದ ಕರ್ಮಯೋಗಿಗಳು. ಆದರೆ, ಇಲ್ಲಿ ಅಂತಹ ಪ್ರಸಿದ್ಧ ಪುರುಷರ ಆದರ್ಶಗಳನ್ನು ಬದುಕುವವರು, ಅದನ್ನು ಮುಂದುವರೆಸುವವರು, ಪ್ರಶ್ನಿಸುವವರು ಮಹಿಳೆಯರಾಗಿದ್ದಾರೆ. ಇವರೆಲ್ಲಾ ಸ್ವಾತಂತ್ರ್ಯದ ಉಸಿರಾಡುತ್ತಾರೆ. ಇಲ್ಲಿ ಉತ್ಪ್ರೇಕ್ಷಿತವೂ ಅಲ್ಲದ ಉಪೇಕ್ಷಿತವೂ ಅಲ್ಲದ ಮಹಿಳೆಯರ ಬದುಕಿನ ಒಂದು ವಸ್ತುನಿಷ್ಠ ಗ್ರಹಿಕೆ ನಿರೂಪಕನಿಗೆ ದಕ್ಕಿದೆ. ಈ ಮೂಲಕ ಲೇಖಕರು, ಮೊದಲೇ ಹೇಳಿದ ಆದರ್ಶ ಮತ್ತು ಆಚರಣೆಯ ನಡುವೆ ಇರುವ ಕಂದರವನ್ನು ಈ ಮಹಿಳೆಯರ ಮೂಲಕ ಬೆಸೆಯಲು ಪ್ರಯತ್ನಿಸುತ್ತಿದ್ದಾರೇನೋ ಎಂದು ಎನಿಸುತ್ತದೆ. ಹಾಗೆ ನೋಡಿದರೆ, ಕೆ. ಸತ್ಯನಾರಾಯಣರ ಈವರೆಗಿನ ಸಮಗ್ರ ಕಥಾನಕದೊಳಗೆ ಮಹಿಳಾ ಪ್ರಪಂಚದ ಬಗೆಗೆ ಇಂತಹ ಒಂದು grey area ಇರುವುದನ್ನು ಗಮನಿಸ'ಬಹುದು. ಮಹಿಳಾ ಲೋಕಕ್ಕೆ ಒಂದು ಅಘೋಷಿತವಾದ ಸಮಚಿತ್ತದ (equanimous) ಯಾತ್ರೆಯನ್ನು ಹೀಗೆ ಲೇಖಕನೊಬ್ಬ ಕೈಗೊಳ್ಳುವುದು ನಮ್ಮ ಸಾಂಸ್ಕೃತಿಕ ಪುನರ್ ನಿರ್ಮಾಣದ ದೃಷ್ಟಿಯಿಂದ ಅತ್ಯಂತ ಮಹತ್ವವಾದುದು.

ಹೀಗೆ ಈ ಎಲ್ಲಾ ಪಾತ್ರಗಳು ಆಯಾ ನಾಯಕರ ನಂಬಿಕೆಗಳನ್ನು ತಮ್ಮ ಬದುಕಿನ ಮೂಲಕ ಪರೀಕ್ಷೆಗೆ ಒಳಪಡಿಸುತ್ತವೆ. ಹಾಗೆ ಒಳಪಡಿಸುವುದರ ಮೂಲಕವೇ ಅವುಗಳ ಸಾಧ್ಯಾಸಾಧ್ಯತೆಗಳ ಬಲಾಬಲಗಳನ್ನು ತೆರೆದು ತೋರಿಸುತ್ತವೆ. ದೈನಿಕ ನೆಲೆಯಲ್ಲಿ ಅವು ಪಡೆದುಕೊಳ್ಳುವ ವಿಪರ್ಯಾಸವನ್ನು ಅನನ್ಯವಾದ ರೀತಿಯಲ್ಲಿ ಈ ಪ್ರಸಿದ್ಧನಾಮಾ ಕತೆಗಳು ಪರಿಶೀಲಿಸುತ್ತವೆ. □

ಮೈಸೂರಿನ ರಂಗಾಯಣ ತಂಡದವರಿಂದ ಕೃಷ್ಣೇಗೌಡನ ಆನೆ ಮತ್ತು ↑
"ಏನ್ ಹುಚ್ಚೂರೀ ಯಾಕ್ಹಿಂಗಾಡ್ತಿರೀ" ನಾಟಕದ ದೃಶ್ಯಗಳು.

↓

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 ● Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938